ದುಡಿವ ಜನರ ಪ್ರಾಣ ಮಿತ್ರ

ಐಕ್ಯರಂಗ

ಸಂಪುಟ 27 ಸಂಚಿಕೆ 48 ನವೆಂಬರ್ 27, 2005 ಬೆಲೆ ರೂ. 3.00



ಚಿಲ್ಲರೆ ವ್ಯಾಪಾರದಲ್ಲೂ ವಿದೇಶಿ ಕಂಪನಿಗಳ ಲಗ್ಗೆ




ಗಡಿ ವಿವಾದ : ಗರಿಗೆದರಿದ ರಾಜಕೀಯ ದುರುದ್ದೇಶ



ಬೆಂಗಳೂರು ಐಟಿ ಮತ್ತು ಕಮರಿದ ಕನಸುಗಳು !



ಅಕ್ಟೋಬರ್ ಕ್ರಾಂತಿಯ ಅಮರ ಸಂದೇಶ



ಮಹಿಳಾ ಮೀಸಲಾತಿ ಎಡಬಿಡಂಗಿತನಕ್ಕೆ ಹಾಕಬೇಕು ತಡೆ

- ಗಮನಾರ್ಹ ಎರಡು ನಾಟಕಗಳು
- ಫ್ರಾನ್ಸ್‌ನಲ್ಲಿ ದರಿದ್ರರ ದಂಗೆ

ಮಾಧ್ಯಮ ಮಂಥನ

ದೇವೇಗೌಡರು ಇನ್ಫೋಸಿಸ್‌ಗೆ ಸರ್ಕಾರ 845 ಎಕ್ರೆ ಜಮೀನು ಕೊಡುವ ಪ್ರಸ್ತಾವವನ್ನು ವಿರೋಧಿಸಿದ್ದು, ಇನ್ಫೋಸಿಸ್ ಮುಖ್ಯಸ್ಥ ನಾರಾಯಣ ಮೂರ್ತಿಯವರ ಇತರ ಕೆಲವು ಪ್ರಸ್ತಾವಗಳನ್ನು ವಿರೋಧಿಸಿದ್ದು ಮತ್ತು ಅದಕ್ಕೆ ಪ್ರತಿಕ್ರಿಯೆಯಾಗಿ ಬೆಂಗಳೂರು ಅಂತರ್‌ರಾಷ್ಟ್ರೀಯ ವಿಮಾನ ನಿಲ್ದಾಣ ಲಿಮಿಟೆಡ್(ಬಿ.ಐ.ಎ.ಎಲ್.) ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ. ಈ ವಿವಾದ ಕೆಲವು ವಾರಗಳಿಂದ ಮಾಧ್ಯಮಗಳಲ್ಲಿ ಪ್ರಧಾನವಾಗಿ ಕಾಣಿಸಿಕೊಂಡಿದೆ. ಮಾಧ್ಯಗಳು (ಟಿವಿ ಮತ್ತು ಪತ್ರಿಕೆಗಳು) ಈ ವಿವಾದವನ್ನು ಯಾವ ರೀತಿ ಬಿಂಬಿಸಿದವು? ಸಾರ್ವಜನಿಕ ಹಿತಾಸಕ್ತಿಯ ವಿಷಯಗಳ ಬಗ್ಗೆ ಮಂಥನ ನಡೆಯಿತೆ? ಅಥವಾ ಪೂರ್ವಾಗ್ರಹ ಪೀಡಿತವಾಗಿದ್ದವೆ? ತಮ್ಮ ಯೋಜನೆಗಳನ್ನು ಈ ಮೂಲಕ ತಿರುಚುವ ಪ್ರಯತ್ನ ನಡೆಸಿದವೆ? ಎಂಬುದು ಈ ಕಿರು ವಿಶ್ಲೇಷಣೆಯ ಉದ್ದೇಶ.


ಬೆಂಗಳೂರು ಐಟಿ ಮತ್ತು ಕಮರಿಹೋದ ಕನಸುಗಳು

ಮತದಾರನ ತೀರ್ಪು ಜೀರ್ಣವಾಗದವರು

ಕೃಷ್ಣ ಸರ್ಕಾರದ ಅವಧಿಯಲ್ಲಿ ಅಧಿಕಾರ, ಪ್ರಾಧಾನ್ಯ ಸವಲತ್ತುಗಳ ಸಿಂಹಪಾಲು ಪಡೆದ ನಾರಾಯಣಮೂರ್ತಿ ಮತ್ತು ಇನ್ಫೋಸಿಸ್ ಮ್ಯಾನೇಜ್‌ಮೆಂಟ್ ಹೊಸ ಸಂಯುಕ್ತ ಸರ್ಕಾರಕ್ಕೆ ತನ್ನ ವಿರೋಧವನ್ನು ಸಾಕಷ್ಟು ಬಹಿರಂಗವಾಗಿಯೇ ಪ್ರಕಟಿಸುತ್ತಿತ್ತು. ಸ್ವಾಭಾವಿಕವಾಗಿಯೇ ದೇವೇಗೌಡರು ಅದಕ್ಕೆ ತೀಕ್ಷ್ಣವಾಗಿ ಪ್ರತಿಕ್ರಿಯಿಸುತ್ತಿದ್ದರು. ಆಳುವ ವರ್ಗಗಳ, ಕಾಂಗ್ರೆಸ್‌ನ ಹಲವು ನಾಯಕರಂತೆ ಇನ್ಫೋಸಿಸ್ ಮ್ಯಾನೇಜ್‌ಮೆಂಟ್ ಪ್ರಭೃತಿಗಳಿಗೂ 2004 ಕೇಂದ್ರ-ಕರ್ನಾಟಕ ಚುನಾವಣೆಗಳಲ್ಲಿ ಮತದಾರನ ತೀರ್ಪು ಅರ್ಥವೇ ಆಗಿಲ್ಲ. ಅಥವಾ ನುಂಗಲಾರದ ತುತ್ತಾಗಿತ್ತು. ಬೆಂಗಳೂರಿನಲ್ಲಿ ಐಟಿ ಕೈಗಾರಿಕೆ ಬೆಳೆದಿದೆ. ಆದ್ದರಿಂದ ಕರ್ನಾಟಕ ಸಮೃದ್ಧವಾಗಿದೆ. ಇನ್ಫೋಸಿಸ್‌ನ ಕೂಸು ಆದ ಬಿ.ಎ.ಡಿ.ಎಫ್. (ಬೆಂಗಳೂರು ಅಜೆಂಡಾ ಟಾಸ್ಕ್ ಫೋರ್ಸ್ - ಸರ್ಕಾರ - ಆಡಳಿತದಲ್ಲಿ - ನೀತಿ ನಿರ್ಧಾರಗಳಲ್ಲಿ ಖಾಸಗಿ ಕಂಪನಿಗಳ ದೊಡ್ಡ ಪಾತ್ರ ಆಧಾರಿತವಾಗಿದ್ದ) ಪ್ರಯೋಗದ ಬಗೆಗೂ ಬೆಂಗಳೂರು ಮತದಾರ ಉತ್ತಮ ಪ್ರತಿಕ್ರಿಯೆ ತೋರಲಿಲ್ಲ. ಬೆಂಗಳೂರಲ್ಲೂ ಕಾಂಗ್ರೆಸ್‌ಗೆ ಭಾರಿ ಸೋಲು ಆಗಿತ್ತು.


NDTV ತಟಸ್ಥವೇ?

ಈ ಹಿನ್ನೆಲೆಯಲ್ಲಿ ಮಾಧ್ಯಮಗಳ ಒಂದು ದೊಡ್ಡ ಭಾಗ ದೇವೇಗೌಡರು ಮತ್ತು ಹೊಸ ಸಂಯುಕ್ತ ಸರ್ಕಾರವನ್ನು 'ಬೆಳವಣಿಗೆ-ವಿರೋಧಿ' ಮತ್ತು 'ಐಟಿ-ವಿರೋಧಿ' ಎಂದು 'ಬ್ರಾಂಡ್' ಮಾಡುತ್ತಾ ಬಂದಿತ್ತು. ನಾರಾಯಣ ಮೂರ್ತಿಯವರನ್ನು 'ಸೂಪರ್ ಮ್ಯಾನ್' ಎಂದು ಉಬ್ಬಿಸುತ್ತ, ಅವರ ಎಲ್ಲಾ ಹೇಳಿಕೆಗಳು ಸರಿ. ಎಲ್ಲಾ ಸಲಹೆಗಳನ್ನು ಸರ್ಕಾರಗಳು ಕಣ್ಣುಮುಚ್ಚಿ ಒಪ್ಪಿಕೊಳ್ಳಬೇಕು - ಎಂಬ ವಿಚಿತ್ರ ನಿಲುವು ಇದರಲ್ಲಿ ಗಮನಾರ್ಹವಾದದ್ದು NDTV - ಟಿವಿ ಚಾನೆಲ್‌ನದ್ದು. ಸಾಮ್ರಾಜ್ಯಶಾಹಿ ಜಾಗತೀಕರಣದ ದೊಡ್ಡ ಬೆಂಬಲಿಗನಾದ NDTV ಸ್ವಾಭಾವಿಕವಾಗಿಯೇ ಈ ಬಣದಲ್ಲಿ ಮುಂದಾಳುತನ ವಹಿಸಿತ್ತು. ಅದು ಸತತವಾಗಿ, ದೇವೇಗೌಡ 'ಬೆಳವಣಿಗೆ ವಿರೋಧಿ' ಎಂದು ಬಿಂಬಿಸಿದ್ದಲ್ಲದೆ, 'ಬೆಂಗಳೂರಿನ ಐಟಿ ಕನಸುಗಳು ಕಮರಿ ಹೋದವೆ?' ಎಂಬ ವಿಷಯದ ಬಗ್ಗೆ ನಡೆಸಿದ ಚರ್ಚೆ ಇದೇ ದಾರಿ ಹಿಡಿಯಿತು. ನಾರಾಯಣಮೂರ್ತಿಯವರ ರಾಜಿನಾಮೆ ದೊಡ್ಡ 'ದುರಂತ' ಎಂದು ಬಿಂಬಿಸುತ್ತಾ, ದೇವೇಗೌಡರ ಟೀಕೆ 'ವೈಯಕ್ತಿಕ' ಎಂಬ ಭಾವನೆ ಬರುವಂತೆ ಚರ್ಚೆಯ ಹಾದಿ ಇತ್ತು. NDTV ಯ ಇತರ ಎಲ್ಲಾ ಇಂತಹ ಚರ್ಚೆ ಕಾರ್ಯಕ್ರಮಗಳಂತೆ, ಚರ್ಚೆಯಲ್ಲಿ ಭಾಗವಹಿಸುವವರ ಆಯ್ಕೆಯ ಮೂಲಕ 'ಅಜೆಂಡಾ', ಚರ್ಚೆಯ ಹಾದಿ ನಿರ್ಧರಿಸುವ ಪ್ರಯತ್ನ ಮಾಡಿತ್ತು. ಅದೇ





ಸಮಯದಲ್ಲಿ NDTV 'ತಟಸ್ಥ', ಯಾವುದೇ 'ಪಕ್ಷದ - ಪರ' ಅಲ್ಲ ಎಂಬ ಪೋಸು ಕೊಟ್ಟಿತ್ತು. 'ಬೆಂಗಳೂರಿನ ಕನಸುಗಳು ಐಟಿ ಬಂದಾಗಲೇ ಕಮರಿ ಹೋದವು' ಎಂಬ ನಾಟಕಕಾರ ಮಹೇಶ್ ರತ್ತಾನಿಯವರ ಖಾರ ಪ್ರತಿಕ್ರಿಯೆ, ದೇವೇಗೌಡರ ದೃಢ ಉತ್ತರ ಬಿಟ್ಟರೆ NDTV ಯ 'ಉದ್ದೇಶ'ದಂತೆ ಕಾರ್ಯಕ್ರಮ ನಡೆಯಿತು. ಆದರೆ ಆ ಮೇಲೆ ಈ ಚರ್ಚೆ ಕಾರ್ಯಕ್ರಮದ ಬಗ್ಗೆ ಪತ್ರಿಕೆಗಳಲ್ಲಿ ಪ್ರಕಟವಾದ 'ಮಾಧ್ಯಮ -ಟೀಕೆ'ಯ ಅಂಶಗಳು ಎಲ್ಲರೂ ಗಮನಿಸಬೇಕಾದ್ದು. ಈ ಚರ್ಚೆಯನ್ನು ಚಿತ್ರೀಕರಿಸಿದ್ದು ಇನ್‌ಫೋಸಿಸ್ ಕ್ಯಾಂಪಸ್‌ನಲ್ಲಂತೆ!. ಮಾತ್ರವಲ್ಲ ನಾರಾಯಣಮೂರ್ತಿ NDTV ಯ ಬೋರ್ಡ್‌ನ ಸದಸ್ಯರಂತೆ!. ಚರ್ಚೆಯ ಮೊದಲು ಯಾರ ಐಟಿ ಕನಸಗಳು ಕಮರಿಹೋದದ್ದು ಎಂಬ ಬಗ್ಗೆ ಅನುಮಾನವಿತ್ತು. ಒಟ್ಟಾರೆ ಚರ್ಚೆಯನ್ನು ಸೂಕ್ಷ್ಮವಾಗಿ ಗಮನಿಸಿದವರಿಗೆ, ಕಮರಿಹೋದದ್ದು ಬೆಂಗಳೂರು- ಕರ್ನಾಟಕವನ್ನು ಪ್ರಾಕ್ಸಿಯಾಗಿ ಆಳುವ ಐಟಿ ದೊರೆಗಳ ಕನಸು ಅನ್ನಿಸಿದರೆ ಆಶ್ಚರ್ಯವಿಲ್ಲ.



ನಾರಾಯಣಮೂರ್ತಿ NDTV ಯ ಬೋರ್ಡ್‌ನ ಸದಸ್ಯರಂತೆ!. ಚರ್ಚೆಯ ಮೊದಲು ಯಾರ ಐಟಿ ಕನಸಗಳು ಕಮರಿಹೋದದ್ದು ಎಂಬ ಬಗ್ಗೆ ಅನುಮಾನವಿತ್ತು. ಒಟ್ಟಾರೆ ಚರ್ಚೆಯನ್ನು ಸೂಕ್ಷ್ಮವಾಗಿ ಗಮನಿಸಿದವರಿಗೆ, ಕಮರಿಹೋದದ್ದು ಬೆಂಗಳೂರು- ಕರ್ನಾಟಕವನ್ನು ಪ್ರಾಕ್ಸಿಯಾಗಿ ಆಳುವ ಐಟಿ ದೊರೆಗಳ ಕನಸು ಅನ್ನಿಸಿದರೆ ಆಶ್ಚರ್ಯವಿಲ್ಲ.

ಉಳಿದವರಿಗೆ ದೊಡ್ಡ ಐಟಿ ಕನಸುಗಳು ಏನೂ ಇರಲಿಲ್ಲ. ಚರ್ಚೆಯನ್ನು ನೋಡಿ, ಈ ಎರಡು ಅಂಶಗಳನ್ನು ಗಮನಿಸಿದರೆ, NDTV ಎಷ್ಟು 'ತಟಸ್ತ' ಎಂಬ ಬಗ್ಗೆ ಯಾರಾದರೂ ನಿರ್ಧರಿಸಬಹುದು.

ಇತರ ಕೆಲವು ಪತ್ರಿಕೆಗಳು ನಡೆಸಿದ 'ಚರ್ಚೆ'ಗಳು (ಉದಾ: ಡೆಕ್ಕನ್ ಹೆರಾಲ್ಡ್) ಇದೇ ಹಾದಿ ಹಿಡಿದವು. ಕೆಲವು ('ಅಲ್ಪಸಂಖ್ಯಾತ'ರು) ಬಿಟ್ಟರೆ ಹೆಚ್ಚಿನ ಮಾಧ್ಯಮಗಳ ಸತತ ಘೋಷವಾಕ್ಯ 'ದೇವೇಗೌಡ ಬೆಳವಣಿಗೆ ವಿರೋಧಿ', 'ನಾರಾಯಣಮೂರ್ತಿ ರಾಜಿನಾಮೆ ದುರಂತಕಾರಿ' ಎಂದು ಧ್ವನಿಸಿದರು. ಈ ಗದ್ದಲದ ನಡುವೆ ದೇವೇಗೌಡರು ಎಬ್ಬಿಸಿದ ವಿಷಯಗಳ ಬಗ್ಗೆ, ಅದರಲ್ಲಿ ಸಾರ್ವಜನಿಕ ಹಿತಾಸಕ್ತಿಯ ಅಂಶ ಏನು? ಎಂಬ ಬಗ್ಗೆ ಚರ್ಚೆ ನಡೆಯಲೇ ಇಲ್ಲ. ಮಾಧ್ಯಮಗಳು ಮತ್ತು ಇನ್ಫೋಸಿಸ್ ನಾರಾಯಣ ಮೂರ್ತಿ ಚರ್ಚೆಯನ್ನು 'ವೈಯಕ್ತಿಕ' ಗೊಳಿಸಲು ಪ್ರಯತ್ನಿಸಿ ಸಫಲ ವಾದವು ಎಂದು ಹೇಳಬಹುದು.

'ಸಾರ್ವಜನಿಕ ಹಿತಾಸಕ್ತಿ' ವಿಷಯ ಏನು?

ಇನ್ಫೋಸಿಸ್ ಮಾತ್ರವಲ್ಲ, ಇತರ ಹಲವು ಐಟಿ ಉದ್ಯಮಗಳು ಬೆಂಗಳೂರು / ಕರ್ನಾಟಕ ಕೇಂದ್ರಿತವಾಗಿದ್ದು ದೊಡ್ಡ ಪ್ರಮಾಣದಲ್ಲಿ ಉದ್ಯೋಗ ಸೃಷ್ಟಿಸಿವೆ. ಯಾವ ಆಧಾರದ ಮೇಲೆ ಇನ್ಫೋಸಿಸ್‌ಗೆ ಮಾತ್ರ ಇಷ್ಟು ದೊಡ್ಡ ಪ್ರಮಾಣದಲ್ಲಿ ಜಮೀನು ಕೊಡಲಾಗುತ್ತಿದೆ? ಇನ್ಫೋಸಿಸ್ ನ ಅಂಕಿ ಸಂಖ್ಯೆಗಳಿಂದ ತುಂಬಿ ತುಳುಕುತ್ತಿದ್ದ ಪತ್ರಿಕಾ ಹೇಳಿಕೆಯಾಗಲಿ ಇದಕ್ಕೆ ಉತ್ತರ ನೀಡಲಿಲ್ಲ. ಪತ್ರಿಕಾ ಹೇಳಿಕೆ ಇನ್ಫೋಸಿಸ್ ಜಮೀನು ಪುಕ್ಕಟ್ಟೆಯಾಗಿ ಸಿಕ್ಕಿಲ್ಲ. ಮಾರುಕಟ್ಟೆ ದರದಲ್ಲಿ ಕೊಂಡಿದೆ ಎಂದು ಹೇಳಿತು. ಆದರೆ ಯಾವ ದರದಲ್ಲಿ ಎಂದು ಹೇಳಲಿಲ್ಲ. ಈಗಿನ 845 ಎಕ್ರೆ ಜಮೀನು ಪ್ರಸ್ತಾವ ಯಾವ ದರದಲ್ಲಿ ಎಂದೂ ಹೇಳಲಿಲ್ಲ?

ದೇವೇಗೌಡರು ಎತ್ತಿದ ಇನ್ನೊಂದು ವಿಷಯ - ಐಟಿ ಉದ್ಯಮಗಳಿಗೆ ನೀಡಲಾದ ಹತ್ತು ವರ್ಷಗಳ 'ಟ್ಯಾಕ್ಸ್ ರಜಾ'ದ ಬಗೆಗೂ ಯಾವ ಚರ್ಚೆ-ವಿಶ್ಲೇಷಣೆ ನಡೆಯಲಿಲ್ಲ. ದೇವೇಗೌಡರು ಇದನ್ನು ತಮ್ಮ 'ಐಟಿ-ಪರ' ನೀತಿಯ ಭಾಗವಾಗಿ ಬೆನ್ನು ತಟ್ಟಿಕೊಂಡರು ಎಂದು ಬಿಟ್ಟರೆ, ಅದರ ಸಾರ್ವಜನಿಕ ಹಿತಾಸಕ್ತಿಯ ಆಯಾಮದ ಬಗ್ಗೆ ಮಾತನಾಡಲಿಲ್ಲ. ಸುಮಾರು ಹತ್ತು ವರ್ಷಗಳ ಹಿಂದೆ ಬಾಲ್ಯದಲ್ಲಿದ್ದ ಐಟಿ ಉದ್ಯಮಕ್ಕೆ ನೀಡಲಾದ ಈ 'ಟ್ಯಾಕ್ಸ್ - ರಜಾ' ಕೊಡಲಾದ ಅತ್ಯಂತ ದೊಡ್ಡ ಸವಲತ್ತು. ಇದರ ಇನ್ನೊಂದು ಆಯಾಮವೆಂದರೆ ಕಳೆದ ಹತ್ತುವರ್ಷಗಳಲ್ಲಿ ಐಟಿ ಉದ್ಯಮದ ದೊಡ್ಡ ಭಾಗ ಸರ್ಕಾರದ ಬೊಕ್ಕಸಕ್ಕೆ ಚಿಕ್ಕಾಸು ನೀಡಿಲ್ಲ ಎಂಬುದು. ಎಲ್ಲಾ ಥರದ ತೆರಿಗೆಗಳಿಂದ ವಿನಾಯಿತಿ ಪಡೆದಿದ್ದ ಐಟಿ ಉದ್ಯಮಕ್ಕೆ ಕೊಟ್ಟ ಎಲ್ಲಾ ಸವಲತ್ತುಗಳು ಸಬ್ಸಿಡಿ. ಐಟಿ ಉದ್ಯಮ ತನಗೆ ಸವಲತ್ತುಗಳಿಗಾಗಿ ಆಗಲಿ, ರಾಜ್ಯದ ಒಟ್ಟಾರೆ ಆರ್ಥಿಕಕ್ಕೆ ಆಗಲಿ ಯಾವುದೇ ನೇರ ಸಹಾಯ ನೀಡಿಲ್ಲ. ಬೆಂಗಳೂರಿನ ರಸ್ತೆ-ಸಾರಿಗೆ, ಒಳಚರಂಡಿ ವ್ಯವಸ್ಥೆ, ಯೋಜಿತ ಬೆಳವಣಿಗೆ- ಇವೆಲ್ಲದರ ಬಗ್ಗೆ ಬೊಬ್ಬೆ ಹೊಡೆಯುವ (ಇನ್ನೊಬ್ಬ ಐಟಿ ದೊರೆ ವಿಪ್ರೋದ ಅಜೀಂ ಪ್ರೇಮ್‌ಜಿ ಇದರಲ್ಲಿ ಮುಂದಾಳತ್ವ ವಹಿಸಿದ್ದರು) ಐಟಿ ಉದ್ಯಮ ಸಣ್ಣ-ಪುಟ್ಟ ದಾನ (ಬಸ್-ಸ್ಟಾಂಡ್, ಪಾರ್ಕ್) ಬಿಟ್ಟರೆ, ಇತರ ಎಲ್ಲಾ ನಾಗರಿಕರು, ಉದ್ಯಮಗಳು ಕೊಡುವ ತೆರಿಗೆಯನ್ನು ಕೊಟ್ಟಿಲ್ಲ ಎಂಬುದು ಚರ್ಚೆಗೆ ಬರಲಿಲ್ಲ - ಅಲ್ಲೊಂದು ಇಲ್ಲೊಂದು ಗೊಣಗಾಟ ಬಿಟ್ಟರೆ.

ಕೆಲವು ಪ್ರಾಮಾಣಿಕ ದನಿಗಳು

ಡೆಕ್ಕನ್ ಹೆರಾಲ್ಡ್‌ನಲ್ಲಿ ಬಂದ ಒಂದೆರೆಡು ಲೇಖನಗಳ ಮಾತ್ರ ಇನ್ಫೋಸಿಸ್ ಕೇಳುತ್ತಿರುವ ಜಮೀನಿನ ಪ್ರಮಾಣಕ್ಕೂ, ಅದರ ಘೋಷಿತ ಯೋಜನೆಗಳ ಪ್ರಕಾರ ಒದಗಿಸುವ ಉದ್ಯೋಗಗಳಿಗೆ ಬೇಕಾಗುವ ಆಫೀಸು-ಜಾಗಕ್ಕೆ ಇರುವ ಭಾರಿ ಅಂತರದ ಬಗ್ಗೆ ವಿಶ್ಲೇಷಣೆ ನಡೆಸಿತು. ಇಷ್ಟು ದೊಡ್ಡ ಪ್ರಮಾಣದ ಭೂಮಿ ತೆಗೆದುಕೊಂಡು ಇನ್ಫೋಸಿಸ್ ಏನು ಮಾಡಲಿದೆ. ಸ್ವಲ್ಪ ಮಟ್ಟಿಗೆ ಉದ್ಯೋಗಿಗಳಿಗೆ ಕಾಲೋನಿ, ಹೋಟೆಲು, ಗಾಲ್ಫ್ ಪಾರ್ಕ್ - ಇತ್ಯಾದಿಗಳನ್ನು ಮಾಡಲಿದೆ. ಐಟಿ ಉದ್ಯಮಕ್ಕೆ ಮುಂದೊಂದು ದಿನ 'ಕೇಡುಗಾಲ' ಬಂದಾಗ ಸ್ಥಿರ ಆಸ್ತಿಗಳನ್ನು ಮಾಡಿಕೊಂಡಷ್ಟು ಒಳ್ಳೆಯದು ಎಂಬುದು ಇನ್ಫೋಸಿಸ್‌ನ ಪ್ರಯತ್ನವೇ ಎಂಬ ಐಟಿ ಉದ್ಯಮದೊಳಗಿನ ಗುಸು-ಗುಸು ಚರ್ಚೆಯ ಹಿನ್ನೆಲೆಯಲ್ಲಿ ಈ ಬಗ್ಗೆ ಬಹಿರಂಗ ಚರ್ಚೆ-ವಿಶ್ಲೇಷಣೆ ಅಗತ್ಯವಾಗಿತ್ತು. ಅದರಲ್ಲೂ ದಶಕಗಳ ಹಿಂದೆ ಮುಖ್ಯವಾಗಿ ಆಯಕಟ್ಟಿನ ಪ್ರದೇಶಗಳಲ್ಲಿ ಆಗಿನ ಪ್ರಮುಖ ಉದ್ಯಮ ಜವಳಿ ಗಿರಣಿಗಳು ಪಡೆದ ಭೂಮಿಗೆ ಇಂದು ಆಗಿರುವ ಅವಸ್ಥೆಯ ಹಿನ್ನೆಲೆಯಲ್ಲಿ ಇದು ಇನ್ನಷ್ಟು ಸಾಮಯಿಕವಾಗಿತ್ತು. ಗಿರಣಿಗಳ ಲಾಭಾಂಶ ಕಡಿಮೆ ಆದ ಹಾಗೆ ಅದನ್ನು 'ರೋಗಿ' ಮಾಡಿ ಅದರ ಭೂಮಿಯನ್ನು (ಕಾನೂನು-ವಿರುದ್ಧ) ಮಾರಿಕೊಂಡು ಲಾಭ ಮಾಡಿಕೊಳ್ಳುವ ಖಾಸಗಿ ಮಾಲಕರ ಹುನ್ನಾರಕ್ಕೆ ಸದ್ಯಕ್ಕೆ ಹೈಕೋರ್ಟ್‌ನ ನಿರ್ಧಾರದಿಂದ ಕಡಿವಾಣ ಬಿದ್ದಿದೆ. ಯಾವುದೇ ಉದ್ಯಮ ಯಾವಾಗಲೂ 'ಸುಗ್ಗಿ'ಯ ಸ್ಥಿತಿಯಲ್ಲಿ ಇರುವುದಿಲ್ಲ. ಹೊಸ ಉದ್ಯಮಗಳಿಗೆ ಪ್ರೋತ್ಸಾಹ (ಭೂಮಿ ಇತ್ಯಾದಿ) ಕೊಡುವುದು ಅಗತ್ಯ. ಆದರೆ ಒಟ್ಟಾರೆ ಬೆಳವಣಿಗೆ ಮತ್ತು ಎಲ್ಲಾ ಕ್ಷೇತ್ರಗಳ ಸರಿಯಾದ ಆದ್ಯತೆಗೆ ಅನುಸಾರವಾಗಿ ಸರ್ಕಾರದ ಸಂಪನ್ಮೂಲಗಳ ಹಂಚಿಕೆ ನಡೆಯಬೇಕು. ಇದೇ ಕಾರಣದಿಂದ ಖಾಸಗಿ ಕಂಪನಿಗಳು ಆಡಳಿತ- ಸರ್ಕಾರ- ಸಾರ್ವಜನಿಕ ಹಿತಾಸಕ್ತಿಯ ನಿರ್ಣಯಗಳಲ್ಲಿ ಸಿಂಹಪಾಲು ಸಹ ಸರಿಯಾದ ನೀತಿ ಅಲ್ಲ. ಈ ಅಂಶವನ್ನು ಕುರಿತು ಮಾಧ್ಯಮಗಳಲ್ಲಿ ಚರ್ಚೆಗೆ ತೊಡಗುವುದು, ಅದನ್ನು ಅವು ಹೊಸಕಿ ಹಾಕಲು ಪ್ರಯತ್ನಿಸಿದರೆ ಅಂತಹ ಮಾಧ್ಯಮಗಳನ್ನು ಬಯಲುಗೊಳಿಸುವುದು ಅಗತ್ಯ.

ಗದ್ದಲದ ನಡುವೆ ದೇವೇಗೌಡರು ಎಬ್ಬಿಸಿದ ವಿಷಯಗಳ ಬಗ್ಗೆ, ಅದರಲ್ಲಿ ಸಾರ್ವಜನಿಕ ಹಿತಾಸಕ್ತಿಯ ಅಂಶ ಏನು? ಎಂಬ ಬಗ್ಗೆ ಚರ್ಚೆ ನಡೆಯಲೇ ಇಲ್ಲ.

ಬೆಂಗಳೂರು ಸರಿಯಾದ ಬೆಳವಣಿಗೆ ಮತ್ತು ಸಾರ್ವಜನಿಕ ನೀತಿಗಳಿಂದ ಭಾರತದ ಮಾತ್ರವಲ್ಲ, ಇಡೀ ಜಗತ್ತಿನಲ್ಲೇ ವಿಜ್ಞಾನ-ತಂತ್ರಜ್ಞಾನದ 'ರಾಜಧಾನಿ'ಯಾಗಿತ್ತು. ಈ ಹಿನ್ನೆಲೆಯಲ್ಲಿ ಸಮೃದ್ಧ ಸಮಾನತೆಯ ಕನಸು ಬೆಂಗಳೂರಿನಲ್ಲಿ ಮೊದಲಿಂದ ಇತ್ತು. ಐಟಿ ಉದ್ಯಮದ ಬೆಳವಣಿಗೆ, 'ಸುಗ್ಗಿ' ಈ ಹಿನ್ನೆಲೆಯ ಫಲ. ಅದರ ಕಾರಣವಲ್ಲ. ಇನ್ಫೋಸಿಸ್, ನಾರಾಯಣಮೂರ್ತಿ - ಈ ಬೆಳವಣಿಗೆಯ ಕೂಸುಗಳು. ಅಪ್ಪ ಅಲ್ಲ. ಐಟಿ ಉದ್ಯಮದ ಬಗ್ಗೆ ಎಲ್ಲಾ ಬೆಂಗಳೂರಿಗರಿಗೆ, ಕನ್ನಡಿಗರಿಗೆ ಹೆಮ್ಮೆ ಇದೆ. ಆದರೆ 90 ರ ದಶಕದ ಜಾಗತೀಕರಣ, ಐಟಿ ಉದ್ಯಮ, ಐಟಿ ಉದ್ಯಮಿಗಳು ಹಿಡಿದಿರುವ ದಾರಿ ಸಮೃದ್ಧ-ಸಮಾನತೆ ಇಲ್ಲ. ಇಂತಹ ಕನಸುಗಳನ್ನು ಕಮರಿಸುವ ಹಾದಿಯಲ್ಲಿದೆ.

- ನಕ್ಷತ್ರಿಕ ಡಾಟ್ ಕಾಮ್

ಗಡಿ ವಿವಾದ : ಗರಿಗೆದರಿದ ರಾಜಕೀಯ ದುರುದ್ದೇಶ

ಬೆಳಗಾವಿ ಗಡಿವಿವಾದ ಮತ್ತೆ ಗರಿಗೆದರಿದೆ. ವಿವಾದವನ್ನು ಕೆದಕಿ, ಜನರ ಭಾವನೆಗಳನ್ನು ಕೆರಳಿಸಲು ಕೆಲವರು ಬಿಡುವಿಲ್ಲದಂತೆ ತೊಡಗಿದ್ದಾರೆ. ನಾಲಿಗೆಗೆ ನಿಯಂತ್ರಣವಿಲ್ಲದೆ ಮುಂಖಾನು ಮುಂಖಿವಾಗಿ ಹೇಳಿಕೆ, ಪ್ರತಿಹೇಳಿಕೆಗಳ ಮಹಾಪೂರ ಹರಿದಿದೆ. ಇದು ನವೆಂಬರ್! 'ಭಾಷಾ ಪ್ರೇಮಿ'ಗಳಿಗೆ ಈ ವಿವಾದ ರಸಗವಳ.

ಹಾಗೆ ನೋಡಿದರೆ ಬೆಳಗಾವಿಯ ಗಡಿಯ ವಿಷಯದಲ್ಲಿ ಈಗ ಆಡುತ್ತಿರುವ ಭಾಷಾ ಪ್ರೇಮಕ್ಕೆ ಅದರ ಬೆಳವಣಿಗೆ ರಕ್ಷಣೆಯ ಹಿತದ ಬಗ್ಗೆ ಗಂಭೀರವಾದ ಇರಾದೆ ಇದ್ದಂತಿಲ್ಲ. ಅಂತಹ ವ್ಯವಧಾನದ, ಸಮಸ್ಯೆಯ ಇತ್ಯರ್ಥಕ್ಕೆ ಸಾಧು ಮಾರ್ಗದ ಅನ್ವೇಷಣೆ ಅನುಸರಿಸಿಕೆಗೆ ಸಮಯವಿಲ್ಲ. ಹಾಗಾದರೆ ಸಮಸ್ಯೆ ಬಿಡಿಸುವುದೋ, ಯಾರಿಗೋ ಪಾಠ ಕಲುಸುವುದೋ... ಸಮಸ್ಯೆ ಕಗ್ಗಂಟಾಗುವುದೋ?

ಈಗ ವಿವಾದ ಸ್ಫೋಟಗೊಂಡಿದ್ದು ಬೆಳಗಾವಿ ಮಹನಗರ ಪಾಲಿಕೆಯು ಬಹುಮತದ ಆಧಾರದಲ್ಲಿ ಕರ್ನಾಟಕದಲ್ಲಿರುವ ಮರಾಟಿ ಭಾಷಿಕ ಪ್ರದೇಶಗಳನ್ನು ಮಹಾರಾಷ್ಟ್ರಕ್ಕೆ ಸೇರಿಸಬೇಕೆಂಬ ಗೊತ್ತುವಳಿಯನ್ನು ಇದೇ ಅಕ್ಟೋಬರ್ 27ರಂದು ಅಂಗೀಕರಿಸಿದ್ದರಿಂದ. ಇದಕ್ಕೆ ತೀವ್ರ ಆಕ್ಷೇಪ, ಪ್ರತಿಭಟನೆಗಳು ವ್ಯಕ್ತವಾದವು. ನಾಗರೀಕ ವಿಧಾನಗಳಲ್ಲಿ ಪ್ರತಿಭಟಿಸುವ ಹಕ್ಕು ಎಲ್ಲರಿಗೂ ಇದೆ. ಆದರೆ ಕರ್ನಾಟಕವನ್ನು ಗುತ್ತಿಗೆ ಹಿಡಿಯುವ ಸರ್ಕಸ್ ಮಾಡುತ್ತಿರುವ ಕರ್ನಾಟಕ ರಕ್ಷಣಾ ವೇದಿಕೆಯೆಂಬ ಸಂಘಟನೆಯ ಕೆಲವು ಕಾರ್ಯಕರ್ತರು ಬೆಳಗಾವಿ ಮಹಾನಗರ ಪಾಲಿಕೆಯ ಮೇಯರ್ ವಿಜಯ ಪಿ ಮೋರೆ ಬೆಂಗಳೂರಿನ ಶಾಸಕರ ಭವನದಲ್ಲಿ ತಂಗಿದ್ದಾಗ ಅವರ ಮುಖಕ್ಕೆ ಮಸಿ ಬಳಿದ ಪ್ರಸಂಗ ನಡೆಯಿತು. ಇದನ್ನು ಪ್ರತಿಭಟಿಸಿ ಬೆಳಗಾಂ ಬಂದ್ ಮಾಡಲಾಯಿತಲ್ಲದೆ ಆಸ್ತಿಪಾಸ್ತಿ ಹಾನಿ, ಕನ್ನಡ ಬಾವುಟ ಸುಟ್ಟ ಪ್ರಸಂಗಗಳೂ ವರದಿಯಾದವು. ಕರ್ನಾಟಕ ರಾಜ್ಯದ ಅನೇಕ ಕಡೆ ಮಸಿ ಬಳಿದ ಕ್ರಮ ಸಮರ್ಥಿಸುವಂತಹ, ಬೆಳಗಾವಿ ಪಾಲಿಕೆ ನಿರ್ಣಯ ವಿರೋಧಿಸಿ, ಅದನ್ನು ರದ್ದುಗೊಳಿಸ ಬೇಕೆಂದು ಪ್ರತಿಭಟನೆಗಳೂ ನಡೆಯುತ್ತಿವೆ.

ಮಹಾರಾಷ್ಟ್ರ ಏಕೀಕರಣ ಸಮಿತಿ ಹಾಗೂ ಕರ್ನಾಟಕ ರಕ್ಷಣಾ ವೇದಿಕೆ ಸಂಘಟನೆಗಳು ಕರ್ನಾಟಕ - ಮಹಾರಾಷ್ಟ್ರ, ಗಡಿಪ್ರಶ್ನೆಯನ್ನು ಕೆದಕಿ ಭಾಷಾಂಧತೆಯನ್ನು ಪರಸ್ಪರ ಪ್ರಚೋದಿಸುತ್ತಿರುವುದರಲ್ಲಿ ನಿರತವಾಗಿವೆ. ಇಂತಹ ಸಂದರ್ಭದಲ್ಲಿ ಸರ್ಕಾರದ ಕ್ರಮ ಏನಾಗಿರಬೇಕು?

ಮಹಾನಗರ ಪಾಲಿಕೆಯು ನಿರ್ಣಯ ಅಂಗೀಕರಿಸಿ ಪ್ರಚೋದಿಸಿದಾಗ ಸರ್ಕಾರ ಸಮಚಿತ್ತದ ಕ್ರಮ ಅನುಸರಿಸಲಿದೆ ಎಂಬಂತಹ ಸೂಚನೆಗಳಿದ್ದವು. ಈಗ ಮಹಾನಗರ ಪಾಲಿಕೆಯನ್ನು ರದ್ದುಗೊಳಿಸುವ ಬಗ್ಗೆ ಮುಖ್ಯಮಂತ್ರಿ ಧರಂ ಸಿಂಗ್ ಹಾಗೂ ಕಾನೂನು ಮಂತ್ರಿ ಹೆಚ್.ಕೆ.ಪಾಟೀಲರು ಹೇಳಿಕೆ ನೀಡುತ್ತಿದ್ದಾರೆ. ಕಾನೂನು ಸಲಹೆಗಾರರೊಂದಿಗೂ ಸಮಾಲೋಚಿಸಿ ಮೂರು ದಿನಗಳೊಳಗೆ ಉತ್ತರಿಸುವಂತೆ ಗಡುವು ನೀಡಿದ್ದಾರೆ, ರದ್ದುಪಡಿಸಲು ಕ್ರಮ ವಹಿಸಲಾಗುತ್ತಿದೆ ಎಂದಿದ್ದಾರೆ. ಚುನಾಯಿತ ಸಂಸ್ಥೆಯೊಂದು ಬಹುಮತದಿಂದ ನಿರ್ಣಯ ಅಂಗೀಕರಿಸಿರುವಾಗ ಅದನ್ನು ರದ್ದುಪಡಿಸುವುದಕ್ಕಿಂತ ನಿರ್ಣಯವನ್ನು ರದ್ದುಪಡಿಸಬಹುದು. ಇದೇ ಹೆಚ್ಚು ಸೂಕ್ತ, ಸರಿಯಾದ ಕ್ರಮ. ಹಾಗೆ ರಾಜಕೀಯ ಕ್ರಮಗಳೂ ಅಗತ್ಯವಿದೆ. ಮೈತ್ರಿಕೂಟದ ಸರ್ಕಾರ ಕನ್ನಡ ಪ್ರೇಮ ತೋರುವ ಭರದಲ್ಲಿ (ಭಾಷೆ ಮತ್ತು ಬದುಕನ್ನು ರಕ್ಷಿಸದೇ ಅದಕ್ಕೆ ಮಾರಕ ನೀತಿ



ಈ ವಾರ ಕರ್ನಾಟಕ ಒಂದು ನೋಟ

— ಎಸ್.ವೈ.ಗುರುಶಾಂತ್

ಅನುಸರಿಸುತ್ತಿದ್ದು ಅವುಗಳನ್ನು ಕೈಬಿಡಲು ತಯಾರಿಲ್ಲ) ಅತ್ಯಂತ ಅಪ್ರಜಾಸತ್ತಾತ್ಮಕ, ವ್ಯಕ್ತಿಗತ ಧಾಳಿಗಳಂತಹ ಕ್ರಮ ಅನುಸರಿಸುತ್ತಿರುವ ಕರ್ನಾಟಕ ರಕ್ಷಣಾ ವೇದಿಕೆಯ ಕಾರ್ಯಕರ್ತರ ಮೇಲೆ ಹೂಡಿರುವ ಮೊಕದ್ದಮೆಗಳನ್ನು ಹಿಂತೆದುಕೊಳ್ಳಲು ಯೋಚಿಸುತ್ತಿರುವುದು ಸಚಿವ ಸಂಪುಟದಲ್ಲಿ ಚರ್ಚಿಸಿ ಕೇಸ್ ಹಿಂತೆಗೆಯಲು ನಿರ್ಧರಿಸಲಾಗುವುದು ಎಂದು ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಪ್ರಕಾಶ್ ಹೇಳುತ್ತಿರುವುದು ಆತಂಕಕಾರಿ ಹಾಗೂ ಅಪಾಯಕಾರಿ ನಿಲುವಾಗಿದೆ. ಇಂತಹ ಕ್ರಮಕ್ಕೆ ಸರ್ಕಾರ ಇಳಿಯಬಾರದು, ವೇದಿಕೆಯ ಅಂತಹ ದಾಳಿಗಳನ್ನು ನಿರ್ದಾಕ್ಷಿಣ್ಯವಾಗಿ ಹತ್ತಿಕ್ಕಬೇಕು. ಎಂ.ಇ.ಎಸ್ ಮತ್ತು ವೇದಿಕೆಯ ಪ್ರಚೋದನಾತ್ಮಕ ಕ್ರಮಗಳನ್ನು ವಿರೋಧಿಸಿದ ಕೆಲವು ಸಾಹಿತಿಗಳನ್ನು ಮಸಾಲೆದೋಸೆ ಸಾಹಿತಿಗಳೆಂದು ಟೀಕಿಸುತ್ತಿರುವ ಚಂಪಾರಂತಹ ಮಾತುಗಳೂ ಸರಿಯಿಲ್ಲ.

ಗಡಿವಿವಾದ ಇಂದು ನಿನ್ನೆಯದಲ್ಲ. ಭಾಷಾವಾರು ಪ್ರಾಂತ್ಯಗಳ ರಚನೆಯಾಗುವಾಗ ಆದ ತಪ್ಪುಗಳಿಂದ ಈಗಲೂ ಗಡಿವಿವಾದಗಳು ಕರ್ನಾಟಕ ನೆರೆಯ ಮಹಾರಾಷ್ಟ್ರ-ಕೇರಳ, ಆಂಧ್ರ, ತಮಿಳುನಾಡು ರಾಜ್ಯಗಳ ನಡುವೆ ಜೀವಂತವಾಗಿವೆ. ದೇಶದ ಇತರೆ ರಾಜ್ಯಗಳ ನಡುವೆಯೂ ಇಂತಹುದೇ ಸಮಸ್ಯೆಗಳು ಉಳಿದಿವೆ. ಇವುಗಳನ್ನು ಬಗೆಹರಿಸಲು ಕೇಂದ್ರ ಸರ್ಕಾರದಿಂದ ಯಾವುದೇ ಗಂಭೀರವಾದ ಪ್ರಯತ್ನಗಳು ನಡೆಯಲೇ ಇಲ್ಲ. ವೈಜ್ಞಾನಿಕವಾದ ಸೂತ್ರವನ್ನು ರಚಿಸಿ ಪಾಲಿಸಲಿಲ್ಲ. ಈಗಲೂ ಗಡಿ ಭಾಗಗಳಲ್ಲಿನ ಎರಡು ಭಾಷಿಕ ಜನರ ನಡುವೆ ಶಿಕ್ಷಣ, ಆಡಳಿತ ವ್ಯವಹಾರದಂತ ಹಲವಾರು ಗಂಭೀರವಾದ ಸಮಸ್ಯೆಗಳಿವೆ. ಅಂತಹವುಗಳನ್ನು ಬಗೆಹರಿಸಲು ಉಭಯ ಸರ್ಕಾರಗಳೂ ಸಿದ್ಧವಾಗಿಲ್ಲ. ಅಲ್ಲಿ ಬೆಳೆಯುವ ಹುಲುಸಾದ ಅತೃಪ್ತಿ ಬೆಳೆಯಿಂದ ಫಲ ಉಣ್ಣಲು ಆಳುವವರು ಬಯಸುತ್ತಾರೆ. ಭಾಷಾಂಧ ಶಕ್ತಿಗಳಿಗೆ ಇದೆ ಪೌಷ್ಠಿಕ ಆಹಾರ. ಮಹಾರಾಷ್ಟ್ರ ಏಕೀಕರಣ ಸಮಿತಿಯಂತಹ ಸಂಘಟನೆಗಳಿಗೆ, ರಾಜಕೀಯ ಶಕ್ತಿಗಳಿಗೆ ಇದೇ ನೆಲೆ.

ಗಡಿ ಪ್ರಶ್ನೆಯನ್ನು ಕೇವಲ ಆಯಾ ರಾಜ್ಯಗಳೇ ಬಗೆಹರಿಸಿಕೊಳ್ಳಲು ಆಗದು. ಹಾಗೆ ನೋಡಿದರೆ ಇದೇ ಜೀವಸ್ಮರಣ ಪ್ರಶ್ನೆ ಎಂದು ಬಿಂಬಿಸುವುದು ಪ್ರಚೋದಿಸುವುದು ಕೂಡದು. ಇಂತಹ ಹಿನ್ನೆಲೆಯಲ್ಲಿ ಈಗಿರುವ ಯಥಾಸ್ಥಿತಿ ಕಾಪಾಡುವುದೇ ಸೂಕ್ತ.

ಈ ಪರಿಸ್ಥಿತಿಯಲ್ಲಿ ಸರ್ಕಾರಗಳು ಸಮತೋಲದಿಂದ ವ್ಯವಹರಿಸಬೇಕು. ಕನ್ನಡ ಸಂಘಟನೆಗಳು ಕರೆ ನೀಡಿರುವ ಕರ್ನಾಟಕ ಬಂದ್ ಅಸಮರ್ಥನೀಯ, ಅದನ್ನು ಕೈಬಿಡಬೇಕು.

ಗಡಿವಿವಾದದಂತಹ ಪ್ರಶ್ನೆಗಳನ್ನು ಮತ್ತೆ ಮತ್ತೆ ಕೆಣಕುವ, ಅದನ್ನೆ ಬಳಸಿ ಪ್ರಚೋದಿಸುವ ಶಕ್ತಿಗಳ ಕುತಂತ್ರಗಳಿಗೆ ಜನತೆ ಕಿವಿಗೊಡಬಾರದು. ಶಾಂತಿ ಸಾಮರಸ್ಯ ಕಾಯ್ದುಕೊಂಡು ಬರಬೇಕು. ○

ಉರಿವ ಬೆಂಕಿಯಲ್ಲಿ ಗಳ ಹಿರಿದವರಾರು?

ಈ ಗಡಿವಿವಾದ ಕೆದಕಿ - ಅದು ಉರಿಯುವಂತೆ ಗಮನಹರಿಸುವುದು ತೀರಾ ಅಗತ್ಯವಿದೆ.

ಮಹಾರಾಷ್ಟ್ರ-ಏಕೀಕರಣ ಸಮಿತಿಗೆ ಹಿಂದೆಲ್ಲಾ ಕರ್ನಾಟಕ ವಿಧಾನಸಭೆಯಲ್ಲಿ ಕನಿಷ್ಟವೆಂದರೂ 5 ಅಥವಾ ಅದಕ್ಕಿಂತ ಹೆಚ್ಚಿನ ಶಾಸಕರು ಇರುತ್ತಿದ್ದರು. ಮಹಾನಗರ ಪಾಲಿಕೆಯಲ್ಲಿ ಅತ್ಯಧಿಕ ಸ್ಥಾನ ಗಳಿಸುವುದಲ್ಲದೇ ಪಾಲಿಕೆ ಆಡಳಿತದ ಮೇಲೆ ಸತತವಾಗಿ ಹಿಡಿತ ಸಾಧಿಸಲಾಗುತ್ತಿತ್ತು. ಆದರೀಗ...?

ಎಂ.ಇ.ಎಸ್.ಗೆ ಕೇವಲ ಒಬ್ಬರು ಶಾಸಕರು. ಪಾಲಿಕೆಯಲ್ಲಿಯೂ ಅದರ ಶಕ್ತಿ ಕಡಿಮೆಯಾಗಿದೆ. ಅಂದರೆ ಎಂ.ಇ.ಎಸ್. ಹಂತಹಂತವಾಗಿ ನೆಲೆ ಕಳೆದುಕೊಂಡು ಜನತೆಯಿಂದ ಪೂರ್ಣ ತಿರಸ್ಕಾರಕ್ಕೆ ಒಳಗಾಗುವ ಆತಂಕದಲ್ಲಿತ್ತು. ಇಂತಹ ಸ್ಥಿತಿಯಲ್ಲಿ ಅದನ್ನು ರಾಜಕೀಯವಾಗಿ ಇನ್ನೂ ದುರ್ಬಲಗೊಳಿಸಲು ಸಾಧ್ಯವಿತ್ತು. ಆದರೀಗ ಅದು ಬೇಕೆಂದೇ ಪಾಲಿಕೆಯಲ್ಲಿ ನಿರ್ಣಯವೊಂದನ್ನು ಅಂಗೀಕರಿಸಿತು, ಪ್ರಚೋದಿಸಿತು. ಮೇಯರ್ ಮೋರೆಗೆ ರಕ್ಷಣಾ ವೇದಿಕೆ ಮಸಿ ಬಳಿದದ್ದು ವರದಾನವಾಗಿ ಬಳಸಿತು. ಈ ಮೂಲಕ ಮರಾಠಿ ಭಾಷಿಕರ ಭಾವನೆ ಬಡಿದೆಬ್ಬಿಸಿ ತನ್ನ ಶಕ್ತಿಯನ್ನು ಹೆಚ್ಚಿಸಿಕೊಳ್ಳಲು ಮುಂದಾಗಿದೆ. ಕ್ರೋಢೀಕರಣಕ್ಕೆ ಅವಕಾಶವಾಗಿದೆ. ಶಿವಸೇನೆ ಹಾರಾಟಕ್ಕೂ ಗಾಳಿಯಾಗಿದೆ. 'ನವೆಂಬರ್' ನಾಯಕರಿಗೂ, ರಕ್ಷಣಾ ವೇದಿಕೆ ಉಳಿವಿಗೂ ಇದು ಬೇಕಾಗಿದೆ. ಹೀಗೆ ಭಾಷಾಂದರಿಬ್ಬರೂ ಬೈಯ್ದಾಡಿದಂತೆ ಕಂಡರೂ ಒಬ್ಬರನ್ನೊಬ್ಬರು ಬೆನ್ನು ತಟ್ಟಿಕೊಳ್ಳುತ್ತಿರುವುದಕ್ಕೆ ಬೇರೆ ನಿದರ್ಶನ ಬೇಕೆ?!

ಅಧಿಕಾರಸ್ಥ ರಾಜಕೀಯ ಪಕ್ಷಗಳು, ಸರ್ಕಾರ ಪ್ರತಿಕ್ರಿಯಿಸಬೇಕಾದ ರೀತಿಯೂ ಬೇರೆ ಇರಬೇಕಿತ್ತು. ಆದರೆ ರಾಜಕೀಯ ಎಚ್ಚರವಿಲ್ಲದೇ ಭಾಷಾಂಧತೆಗೆ ಗಾಳಿ ಊದುವುದು ಅಪಾಯಕಾರಿ ಎಂಬುದನ್ನು ಅವರು ಅರಿಯಬೇಕಿದೆ.

ಸಂತ ಸಮಾವೇಶ ನಿಷೇಧಿಸಲು ಎಡಪಕ್ಷಗಳ ಆಗ್ರಹ

ಗುಲ್ಬರ್ಗ: ಶಾಂತಿ ಮತ್ತು ಸೌಹಾರ್ದಕ್ಕೆ ಹೆಸರಾದ ಗುಲ್ಬರ್ಗ ಜಿಲ್ಲೆಯಲ್ಲಿ ಅಶಾಂತಿಯನ್ನು ಉಂಟು ಮಾಡುವ ಭೀತಿ ಇರುವ ಹಿನ್ನೆಲೆಯಲ್ಲಿ ಜೇವರ್ಗಿ ತಾಲ್ಲೂಕಿನ ಆಂದೋಲಾದಲ್ಲಿ ಇದೇ 20ರಂದು ನಡೆಯುವ ಸಂತ ಸಮಾವೇಶವನ್ನು ನಿಷೇಧಿಸ ಬೇಕೆಂದು ಸಿಪಿಐ ಮತ್ತು ಸಿಪಿಎಂಗಳು ಆಗ್ರಹಿಸಿವೆ.

ಭಾರತ ಕಮ್ಯೂನಿಸ್ಟ್ ಪಕ್ಷದ (ಮಾರ್ಕ್ಸ್‌ವಾದಿ) ಮಾರುತಿ ಮಾನ್ಪಡೆ ಮತ್ತು ಭಾರತ ಕಮ್ಯೂನಿಸ್ಟ್ ಪಕ್ಷದ ಶಂಕರ ಕಟ್ಟಿ ಸಂಗಾವಿ ಅವರು ಜಂಟಿ ಪತ್ರಿಕಾಗೋಷ್ಠಿಯಲ್ಲಿ ಆಗ್ರಹಿಸಿದ್ದಾರೆ.

ಆಂದೋಲಾದಲ್ಲಿ ನಡೆಯುವ ಶ್ರೀ ಕರುಣೇಶ್ವರ ಜಾತ್ರೆಗೆ ತಮ್ಮ ವಿರೋಧವಿಲ್ಲ. ಆದರೆ ಜಾತ್ರೆಗೆ ಬರುವ ಭಕ್ತರನ್ನೇ ಬಂಡವಾಳ ಮಾಡಿಕೊಂಡು ವಿಶ್ವ ಹಿಂದೂ ಪರಿಷತ್ ಹಾಗೂ ಬಿಜೆಪಿಗಳು ತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳುತ್ತಿರುವುದು ಸರಿಯಲ್ಲ. ಹಿಂದುಗಳು ಸಂಘಟಿತರಾಗುವುದರಲ್ಲಿ ತಪ್ಪಿಲ್ಲ. ಆದರೆ ಜಾತ್ರೆಯನ್ನೂ ಹಿಂದೂ ಸಂತ ಸಮಾವೇಶವನ್ನು ತಳಕು ಹಾಕುವುದು ಬೇಡ. ಬೇಕಿದ್ದರೆ ಹಿಂದೂ ಸಂತ ಸಮಾವೇಶವನ್ನು ಪ್ರತ್ಯೇಕವಾಗಿ ನಡೆಸಲಿ ಎಂದು ಸಲಹೆ ಮಾಡಿದರು.

ಸಂತ ಸಮಾವೇಶದ ಹೆಸರಿನಲ್ಲಿ ಜೇವರ್ಗಿ ತಾಲ್ಲೂಕಿನಲ್ಲಿ ಹಾಗೂ ಜಿಲ್ಲೆಯ ವಿವಿಧೆಡೆಗಳಲ್ಲಿ ಮುಸ್ಲಿಂ ಧರ್ಮದ ಹಾಗೂ ಮುಸ್ಲಿಮರ ವಿರುದ್ಧ ಹಿಂದುಗಳಲ್ಲಿ ದ್ವೇಷ ಬಿತ್ತುವ ಕರಪತ್ರಗಳನ್ನು ಹಂಚಲಾಗುತ್ತಿದೆ. ಇಜೇರಿ, ದರ್ಗಾ ಮಸೀದಿಗಳಲ್ಲಿ ಭಯೋತ್ಪಾದಕರು ಬೇರು ಬಿಟ್ಟಿದ್ದು ಉಗ್ರರಿಗೆ ತರಬೇತಿ ನೀಡಲಾಗುತ್ತಿದೆ ಎಂದು ಅಪಪ್ರಚಾರ ಮಾಡಲಾಗುತ್ತಿದೆ. ಒಂದು ವೇಳೆ ಇಂಥ ಕೃತ್ಯಗಳು ನಡೆಯುತ್ತಿರುವ ಬಗ್ಗೆ ವಿಶ್ವ ಹಿಂದೂ ಪರಿಷತ್ತಿಗೆ ದಾಖಲೆಗಳಿದ್ದರೆ ಅದನ್ನು ಪೊಲೀಸರಿಗೆ ಒಪ್ಪಿಸಿ ಅಂಥ ದುಷ್ಕೃತ್ಯದಲ್ಲಿ ತೊಡಗಿದವರನ್ನು ಬಂಧಿಸಲು ನೆರವಾಗಲಿ ಎಂದರು.

ಈ ಸಂತ ಸಮಾವೇಶದಲ್ಲಿ ಪ್ರವೀಣ ಭಾಯಿ ತೊಗಾಡಿಯಾ ಮತ್ತು ಪ್ರಮೋದ ಮುತಾಲಿಕ್ ಅವರು ಭಾಷಣ ಮಾಡಲಿದ್ದಾರೆ ಎಂದು ತಿಳಿದು ಬಂದಿದೆ. ಈ ಇಬ್ಬರು ಹೋದ ಕಡೆಯೆಲ್ಲ ಕೋಮು ಗಲಭೆಗಳು ಸಂಭವಿಸಿದ ಉದಾಹರಣೆಗಳಿವೆ. ಹೀಗಾಗಿ ಗುಲ್ಬರ್ಗ ಜಿಲ್ಲೆಯಲ್ಲಿ ಅವರ ಪ್ರವೇಶವನ್ನು ನಿಷೇಧಿಸಬೇಕು ಎಂದು ಅವರು ಆಗ್ರಹಿಸಿದರು.

20ರಂದು ನಡೆಯುವ ಸಂತ ಸಮಾವೇಶವನ್ನು ಮುಂದಕ್ಕೆ ಹಾಕಬೇಕು ಎಂದು ವಿಶ್ವ ಹಿಂದೂ ಪರಿಷತ್ ಮತ್ತು ಇತರ ಸಂಘಟನೆಗಳು ಹಾಗೂ ಕರುಣೇಶ್ವರ ಮಠದ ಸ್ವಾಮಿಗಳಿಗೆ ಒತ್ತಾಯಿಸಿದ ಅವರು ಕರುಣೇಶ್ವರ ಜಾತ್ರೆಗೆ ತಮ್ಮ ವಿರೋಧ ಇಲ್ಲ ಎಂದು ಮತ್ತೊಮ್ಮೆ ಸ್ಪಷ್ಟಪಡಿಸಿದರು.

ಸರ್ಕಾರವು ಈ ಸಮಾವೇಶವನ್ನು ನಿಷೇಧಿಸಿ ಜಿಲ್ಲೆಯಲ್ಲಿ ಶಾಂತಿ ಸೌಹಾರ್ದ ಕಾಪಾಡಲು ಮುಂದಾಗಬೇಕು ಎಂದು ಆಗ್ರಹಿಸಿದ್ದಾರೆ. ಒಂದು ವೇಳೆ ಸರ್ಕಾರ ಸಮಾವೇಶವನ್ನು ನಿಷೇಧಿಸದೇ ಇದ್ದರೆ ಎಡಪಕ್ಷಗಳೂ ಸೇರಿದಂತೆ ಪ್ರಗತಿಪರ ಸಂಘಟನೆಗಳು, ಜಾತ್ಯಾತೀತ ಮನೋಭಾವದಲ್ಲಿ ನಂಬಿಕೆಯುಳ್ಳ ಸಮಾನ ಮನಸ್ಕರು ಅಂದು ಪ್ರತಿಭಟನೆ ನಡೆಸಲಿದ್ದಾರೆ ಎಂದು ಮಾನ್ಪಡೆ ಹೇಳಿದರು.

ಗುಲ್ಬರ್ಗಾ ಜಿಲ್ಲೆಯಲ್ಲಿ ಕ್ರಿಶ್ಚಿಯನ್ ಮಿಷಿನರಿಗಳು ನಡೆಸುತ್ತಿರುವ ಧರ್ಮ ಪ್ರಚಾರದ ಬಗ್ಗೆ ಪ್ರಸ್ತಾಪಿಸಿದ ಅವರು ಧರ್ಮ ಪ್ರಚಾರ ನಡೆಸುವುದು ತಪ್ಪಲ್ಲ. ಆದರೆ ಧರ್ಮ ಪ್ರಚಾರದ ಹೆಸರಿನಲ್ಲಿ ಇನ್ನೊಂದು ಧರ್ಮವನ್ನು ಅವಹೇಳನ ಸಲ್ಲದು. ಹಿಂದೂ ಸಂಘಟನೆಯ ಹೆಸರಿನಲ್ಲಿ ವಿಶ್ವ ಹಿಂದೂ ಪರಿಷತ್, ಬಜರಂಗದಳಗಳು ಮುಸ್ಲಿಂ ಅವಹೇಳನದಲ್ಲಿ ತೊಡಗಿವೆ ಎಂದರು. ○

ಬೆಂಗಳೂರಿನಲ್ಲಿ ನೆರೆ ಸಂತ್ರಸ್ಥರ ಸಮಾವೇಶ

ಸರ್ಕಾರದ ವಿರುದ್ಧ ಜನತೆಯ ಆಕ್ರೋಶ

ನೆರೆ ಸಂತ್ರಸ್ಥರಿಗೆ ನ್ಯಾಯಯುತವಾದ ಪರಿಹಾರ ನೀಡಬೇಕು ಹಾಗೂ ಅತಿವೃಷ್ಟಿಯಿಂದ ಉಂಟಾಗುವ ತೊಂದರೆಯನ್ನು ತಡೆಗಟ್ಟಲು ಶಾಶ್ವತ ಪರಿಹಾರ ಯೋಜನೆಗಳನ್ನು ಕೈಗೆತ್ತಿಕೊಳ್ಳಬೇಕೆಂದು ಸರ್ಕಾರವನ್ನು ಆಗ್ರಹಿಸಿ ನವೆಂಬರ್ 6 ರಂದು ಬೆಂಗಳೂರಿನ ಹೊಸೂರು ರಸ್ತೆ ಬೊಮ್ಮನಹಳ್ಳಿ ಪ್ರದೇಶದಲ್ಲಿ ಡಿವೈಎಫ್ಐ ನೇತೃತ್ವದಲ್ಲಿ ನೆರೆ ಸಂತ್ರಸ್ಥರ ಬೃಹತ್ ಸಮಾವೇಶ ನಡೆಯಿತು.

ಕಳೆದ 45 ವರ್ಷಗಳಲ್ಲಿ ಇದೇ ಮೊದಲಬಾರಿಗೆ ಬಿದ್ದ ಭಾರಿ ಮಳೆಯಿಂದಾಗಿ ಇಡೀ ಬೆಂಗಳೂರು ನಗರ ಜಲಾವೃತಗೊಂಡಿತ್ತು. ಅಂಕೆಯಿಲ್ಲದೆ ಬೆಳೆದ ಬೆಂಗಳೂರು ನಗರದ ಜನತೆ ತೀವ್ರ ಸಂಕಷ್ಟ ಎದುರಿಸಬೇಕಾಯಿತು. ಬೊಮ್ಮನಹಳ್ಳಿ ಪ್ರದೇಶ ವ್ಯಾಪ್ತಿಯ ಹಲವಾರು ಪ್ರದೇಶಗಳು ನೀರಿನಲ್ಲಿ ಮುಳುಗಡೆಯಾಗಿ ಜನಜೀವನ ಪರದಾಡುವಂತಾಯಿತು. ಉದ್ಯಾನ ನಗರ, ಸಿಲಿಕಾನ್‌ವ್ಯಾಲಿ ಎಂಬಿತ್ಯಾದಿ ಬಿರುದಾಂಕಿತ ಬೆಂಗಳೂರು ಜಲರಾಶಿಯ ಮುಂದೆ ತಲೆಬಾಗಿತ್ತು. ನಗರ ಬೆಳವಣಿಗೆಗೆ ಬೇಕಾದ ಸರಿಯಾದ ಯೋಜನೆ ಇಲ್ಲದೆ, ದುಡ್ಡು/ ರಾಜಕೀಯ ಬಲವಿದ್ದವರ ಮನಸ್ಸಿಗೆ ಬಂದಂತೆ ಬೆಂಗಳೂರು ಬೆಳೆದದ್ದು ಸರ್ಕಾರದ ದಿವ್ಯ ನಿರ್ಲಕ್ಷ್ಯವಲ್ಲದೆ ಮತ್ತೇನು ಇಲ್ಲ. ಕೆರೆ, ಹೊಂಡ, ತಗ್ಗು ಪ್ರದೇಶ ಎಂಬ ಯಾವ ಯೋಚನೆಯೂ ಇಲ್ಲದೆ ಇಷ್ಟ ಬಂದವರಿಗೆ ಲೇಔಟ್ ಮಾಡಲು ಭೂಮಿ ಕೊಟ್ಟು, ತಮ್ಮ ಜೇಬು ಭರ್ತಿ ಮಾಡಿಕೊಂಡ ಜನಪ್ರತಿನಿಧಿಗಳ ಲ್ಯಾಂಡ್ ಮಾಫಿಯಾವೇ ಬೆಂಗಳೂರು ಎಂಬ ಈ ಬೆಡಗಿನೂರಿನಲ್ಲಿ ನೀರು ನಿಲ್ಲಲು ಕಾರಣ. ನಿವೇಶನಗಳನ್ನು ನೀಡುವಾಗ ಯಾವುದೇ ನಿಯಮಗಳನ್ನು ಪಾಲಿಸದೆ ಬೇಗ ಜೇಬು ತುಂಬಿಸುವ ಧಣಿಗಳಿಗೆ ಧಾರೆ ಎರೆದುಕೊಟ್ಟು ಸಾಮಾನ್ಯ ಜನ ಆತಂಕ ಪಡುವಂತಾಗಿದೆ.

ಈ ಹಿನ್ನೆಲೆಯಲ್ಲಿ ಅತಿವೃಷ್ಟಿಯಲ್ಲಿ ನಲುಗಿದ ಜನರಿಗೆ ನ್ಯಾಯಯುತವಾದ ಪರಿಹಾರ ನೀಡಬೇಕು. ಮುಂಬರುವ ದಿನಗಳಲ್ಲಿ ಅತಿವೃಷ್ಟಿಯನ್ನು ಸಮರ್ಥವಾಗಿ ನಿಭಾಯಿಸಲು ಶಾಶ್ವತ ಪರಿಹಾರ ಕಾರ್ಯಗಳನ್ನು ಕೈಗೆತ್ತಿಕೊಳ್ಳಬೇಕು. ಮೂಲಭುತ ಸೌಕರ್ಯಗಳ ನಿರ್ವಹಣೆಗೆ ಮುಂದಾಗಬೆಕೆಂದು ಆಗ್ರಹಿಸಿ ಈ ಸಮಾವೇಶವನ್ನು ಹಮ್ಮಿಕ್ರೊಳ್ಳಲಾಗಿತ್ತು.



ಸಮಾವೇಶದಲ್ಲಿ ಭಾಗವಹಿಸಿದ್ದ ಸಿಪಿಐ(ಎಂ) ಶಾಸಕರಾದ ಕಾಂ.ಜಿ.ವಿ.ಶ್ರೀರಾಮರೆಡ್ಡಿ ಮಾತನಾಡಿ, ಯಾವುದೇ ಅಂಕೆಯಿಲ್ಲದೆ ಬೆಳೆದ ಬೆಂಗಳೂರಿನ ಬೆಳವಣಿಗೆಗೆ ಸರ್ಕಾರದ ಘೋರ ನಿರ್ಲಕ್ಷ್ಯತನವೇ ಕಾರಣ. ಅಂತರಾಷ್ಟ್ರೀಯ ಖ್ಯಾತಿಯ ಐಟಿ ಕಂಪನಿ ಹೊಸೂರು ರಸ್ತೆಯಲ್ಲಿ ಮೂಲ ಸೌಕರ್ಯದ ಪ್ರಶ್ನೆ ಎತ್ತಿದಾಗ ಇಡೀ ಸರ್ಕಾರ ಅವರ ಸಕಲ ಬೇಡಿಕೆಗಳನ್ನು ಈಡೇರಿಸಲು ಮುಂದಾಗಿದೆ. ಆದರೆ ಅದೇ ಹೊಸೂರು ರಸ್ತೆಯ ಪಕ್ಕದಲ್ಲಿ ಸಾಮಾನ್ಯ ಜನ ಅತಿವೃಷ್ಟಿಗೆ ಸಿಲುಕಿ ಮನೆ, ಆಸ್ತಿ, ಪಾಸ್ತಿ ಕಳೆದುಕೊಂಡು ಸಂಕಷ್ಟದಲ್ಲಿದ್ದರೂ ಅವರ ಕಷ್ಟಕ್ಕೆ ಸ್ಪಂಧಿಸದೆ ಇರುವುದು ಅವರ ವರ್ಗಗುಣವನ್ನು ಎತ್ತಿ ತೋರಿಸುತ್ತದೆಂದು ಕಟಕಿಯಾಡಿದರು. ಸರ್ಕಾರ ನಿಗದಿಗೊಳಿಸಿರುವ ಪ್ರಕಾರ ಮನೆ ಕಳೆದುಕೊಂಡವರಿಗೆ 6000 ರೂ., ನೀರು ನುಗ್ಗಿ ಗೋಡೆ ಕುಸಿದಿದ್ದರೆ 2000 ರೂ., ನೀರು ನುಗ್ಗಿ ಆಸ್ತಿ ಕಳೆದುಕೊಂಡವರಿಗೆ 1,000, ಇದು ಕೇವಲ ತುಟಿಗೆ ಬೆಲ್ಲ ಸವರಿಸುವ ತಂತ್ರ. ಇದೇ ರೀತಿ ಮಹಾರಾಷ್ಟ್ರದಲ್ಲಿ ಅತಿವೃಷ್ಟಿಯಾದಾಗ ಅಲ್ಲಿನ ಸರ್ಕಾರ 40,000ಗಳನ್ನು ನಿಗದಿ ಮಾಡಿತು. ಆದರೆ ನಮ್ಮ ಸರ್ಕಾರ ಕೇವಲ 6,000 ರೂಗಳನ್ನು ನಿಗದಿ ಮಾಡಿ, ಕೆಲವೇ ಕೆಲವರಿಗೆ ಪಂಚೆ, ಈರುಳ್ಳಿ, 1 ಕೆ.ಜಿ ಅಕ್ಕಿ ನೀಡಿ ಜನರ ಕಣ್ಣೊರೆಸುವ ತಂತ್ರ ಮಾಡುತ್ತಿದೆ ಎಂದು ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ ಅವರು ಅತಿವೃಷ್ಠಿಯ ಕುರಿತಾಗಿ ಚರ್ಚಿಸಲು ವಿಧಾನ ಸಭೆ ಅಧಿವೇಶನ ಕರೆಯಲು, ಮನವಿ ಮಾಡಿದ್ದಾಗ್ಯೂ ಪಂಚಾಯತಿ ಚುನಾವಣೆ ನೆಪವೊಡ್ಡುತ್ತಿರುವುದು ಜವಾಬ್ದಾರಿಯಿಂದ ನುಣುಚಿಕೊಳ್ಳುವ ಹುನ್ನಾರ ಎಂದ ಅವರು ಮುಂದಿನ ಅಧಿವೇಶನದಲ್ಲಿ ಈ ಪ್ರಶ್ನೆಗಳನ್ನು ಎತ್ತುವುದಾಗಿ ಘೋಷಿಸಿದರು.



ಸರ್ಕಾರದ ಪರವಾಗಿ ಸಮಾವೇಶದಲ್ಲಿ ಭಾಗವಹಿಸಿದ್ದ ಸಿಎಂಸಿ ಆಯುಕ್ತರು ಹಾಗೂ ಜಿಲ್ಲಾ ಉಪ ವಿಭಾಗಾಧಿಕಾರಿಗಳು ಮಾತನಾಡಿ, ಸರ್ಕಾರ ನಿಗದಿಗೊಳಿಸಿದ ಪರಿಹಾರದ ಹಣವನ್ನು ಪ್ರಾಮಾಣಿಕವಾಗಿ ಜನರಿಗೆ ತಲುಪಿಸುವ ಕಾರ್ಯವನ್ನು ಮಾಡುತ್ತೇವೆಂದು ಆಶ್ವಾಸನೆ ನೀಡುತ್ತಾ, ಜನರ ಕಷ್ಟವನ್ನು ನೇರವಾಗಿ ಕೇಳುವಂತೆ ಈ ಸಮಾವೇಶವನ್ನು ಡಿವೈಎಫ್ಐ ಹಮ್ಮಿಕ್ರೊಂಡಿರುವುದು ಮೆಚ್ಚುವಂಥದ್ದು ಎಂದು ಅಭಿನಂದಿಸಿದ ಅವರು ಈ ಸಮಾವೇಶ ಇಟ್ಟಿರುವ ಬೇಡಿಕೆಗಳು ನ್ಯಾಯಯುತವಾದ ಬೇಡಿಕೆಗಳೇ ಆಗಿರುವುದರಿಂದ ಇವುಗಳ ಇತ್ಯರ್ಥಕ್ಕೆ ಕ್ರಮ ಕೈಗೊಳ್ಳುವುದಾಗಿ ಆಶ್ವಾಸನೆ ನೀಡಿದ್ದರು. ನೊಂದ ಕುಟುಂಬಗಳ ಸದಸ್ಯರು ತಮ್ಮ ಪ್ರದೇಶವನ್ನು ಪ್ರತಿನಿಧಿಸಿ ಮಾತನಾಡಿದರು. ಈ ಹೋರಾಟ ಬೆಂಬಲಿಸಿ ಸಭೆಯ ಸಿ.ಐ.ಟಿಯು ಮುಖಂಡ ಇ.ಕೆ.ಎನ್.ರಾಜನ್, ಜೆ.ಎಂ.ಎಸ್.ನ ಗೌರಮ್ಮ ಶಾಮಣ್ಣರೆಡ್ಡಿ ಮೊದಲಾದವರು ಮಾತನಾಡಿದರು. ಡಿವೈಎಫ್ಐ ರಾಜ್ಯ ಕಾರ್ಯದರ್ಶಿ ಕೆ.ಮಹಾಂತೇಶ್, ಸಿ.ಪಿ.ಐ(ಎಂ)ಜಿಲ್ಲಾ ಕಾರ್ಯದರ್ಶಿ ಕೆ.ಪ್ರಕಾಶ್, ಡಿವೈಎಫ್ಐನ ಅನಂದಕುಮಾರ್, ವೆಂಕಟೇಶಗೌಡ, ಮೈಕೊ ಲೇಔಟ್ ಮಾರಯ್ಯ, ಹೊಂಗಸಂದ್ರದ ಕಲ್ಲಪ್ಪ, ರಾಜರಾಜೇಶ್ವರಿ ಅಪಾರ್ಟ್‌ಮೆಂಟ್‌ನ ಶಿವಕುಮಾರ್, ಜೆ.ಪಿ.ನಗರ ವೆಲ್‌ಫೇರ್ ಅಸೋಸಿಯೇಷನ್ ಮುಖಂಡರು ಮೊದಲಾದವರು ವೇದಿಕೆಯಲ್ಲಿ ಉಪಸ್ಥಿತರಿದ್ದ ಈ ಸಮಾವೇಶ ಅಧ್ಯಕ್ಷತೆಯನ್ನು ಡಿವೈಎಫ್ಐ ಜಿಲ್ಲಾಧ್ಯಕ್ಷ ಕಾಂ.ಲಕ್ಷ್ಮಣ್‌ಕುಮಾರ್ ವಹಿಸಿದ್ದರು. ಬೊಮ್ಮನಹಳ್ಳಿ ಪ್ರದೇಶ ವ್ಯಾಪ್ತಿಯ, ಬೊಮ್ಮನಹಳ್ಳಿ, ಗಾರೆಬಾವಿಪಾಳ್ಯ, ಹೊಂಗಸಂದ್ರ ಮೈಕೊ ಲೇಔಟ್, ಮಂಗಮ್ಮನಪಾಳ್ಯ, ಲಕ್ಷ್ಮೀ ಬಡಾವಣೆ, ಚಿಕ್ಕಬೇಗೂರು ಗೇಟ್ ಮುಂತಾದ ಪ್ರದೇಶಗಳಿಂದ ಸಾವಿರಕ್ಕೂ ಹೆಚ್ಚು ನೊಂದ ನಿರಾಶ್ರಿತರ ಕುಟುಂಬಗಳ ಸದಸ್ಯರು ಭಾಗವಹಿಸಿದ್ದರು.

ಲಿಂಗರಾಜು ಸ್ವಾಗತಿಸಿ, ದಯಾನಂದ್ ವಂದನಾರ್ಪಣೆ ಮಾಡಿದರು.

ಚಿಕ್ಕಬೇಗೂರು ಕೆರೆಯಿಂದ ಪ್ರಾರಂಭವಾಗುವ 33 ಅಡಿ ರಾಜಕಾಲುವೆಯನ್ನು ಅದರ ಮೂಲ ಸ್ವರೂಪದಲ್ಲಿ ದುರಸ್ತಿಗೊಳ್ಳಬೇಕು. ಅತಿಕ್ರಮಣಕಾರರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಜರುಗಿಸಬೇಕು ಹಾಗೂ ಬೊಮ್ಮನಹಳ್ಳಿ ಸಿಎಂಸಿ ವ್ಯಾಪ್ತಿಯ ಎಲ್ಲಾ ಪ್ರದೇಶಗಳಿಗೆ ಚರಂಡಿಗಳ ದುರಸ್ತಿ, ರಸ್ತೆ ಡಾಂಬರೀಕರಣ, ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಬೇಕೆಂದು ಆಗ್ರಹಿಸುತ್ತಾ, ಬೇಡಿಕೆಗಳು ಈಡೇರದಿದ್ದಲ್ಲಿ ಮುಂದಿನ ದಿನಗಳಲ್ಲಿ ಜನ ಬೀದಿಗಿಳಿದು ಹೋರಾಟ ಮಾಡಬೇಕಾಗುತ್ತದೆ ಎಂದು ಸರ್ಕಾರವನ್ನು ಎಚ್ಚರಿಸಿ ಸಮಾವೇಶದಲ್ಲಿ ನಿರ್ಣಯ ಕೈಗೊಳ್ಳಲಾಯಿತು.

- ಲಿಂಗರಾಜು

ನಿವೇಶನಕ್ಕಾಗಿ ಜಿಲ್ಲಾಧಿಕಾರಿ ಕಛೇರಿ ಎದುರು ಧರಣಿ

ರಾಯಚೂರು ನಗರದ ಮೈಲಾರ ನಗರ, ಜಲಾಲನಗರ, ಆಶಾಪೂರು ರಸ್ತೆಯ ಜನತಾ ಕಾಲೋನಿ, ಸಿಯಾತಲಾಬ ಹಾಗೂ ತಾಲೂಕಿನ ಕೆಲ ಗ್ರಾಮಾಂತರ ಪ್ರದೇಶಗಳು ಹಾಗೂ ನಗರದ ಇನ್ನಿತರೆ ಕೊಳಚೆ ಪ್ರದೇಶಗಳ ನಿವಾಸಿಗಳು ಪಡಿತರ ಚೀಟಿ ಹಾಗೂ ಮನೆ, ನಿವೇಶನಗಳು ಇಲ್ಲದೆ ಪರಿತಪಿಸುತ್ತಿದ್ದಾರೆ.

ಅನೇಕ ನಿವಾಸಿಗಳು ಕೊಳಚೆ ನಿರ್ಮೂಲನಾ ಮಂಡಳಿಗೆ ಮನೆ ನಿವೇಶನಕ್ಕಾಗಿ ಮುಂಗಡ ಹಣವನ್ನು ನೀಡಿ ಒಂದುವರೆ ವರ್ಷ ಕಳೆಯುತ್ತಿದ್ದರೂ ಇದುವರೆಗೆ ನಿವಾಸಿಗಳಿಗೆ ಮನೆ ಆಗಲಿ, ಅಥವಾ ನಿವೇಶನವಾಗಲೀ ನೀಡಿಲ್ಲ. ಈ ಕುರಿತು ಕೊಳಚೆ ನಿರ್ಮೂಲನಾ ಮಂಡಳಿಯ ಅಧಿಕಾರಿಗಳಿಗೆ ಕೇಳಿದರೆ ಅವರಿಂದ ಯಾವುದೇ ರೀತಿಯ ಸಮಂಜಸವಾದ ಪ್ರತಿಕ್ರಿಯೆ ಬರುತ್ತಿಲ್ಲ. ಈ ವಿಷಯದಲ್ಲಿ ಕೊಳಚೆ ನಿರ್ಮೂಲನಾ ಮಂಡಳಿಯ ಅಧಿಕಾರಿಗಳು ನಿರ್ಲಕ್ಷ್ಯ ಧೋರಣೆ ಅನುಸರಿಸುತ್ತಿದ್ದಾರೆ.

ಮೇಲಿನ ಬೇಡಿಕೆಗಳನ್ನು ಕೂಡಲೇ ಈಡೇರಿಸುವಂತೆ ಆಗ್ರಹಿಸಿ ಸಿಪಿಐ(ಎಂ) ಸ್ಥಳೀಯ ಸಮಿತಿ ನೇತೃತ್ವದಲ್ಲಿ ಸಿಪಿಐ(ಎಂ) ಕಾರ್ಯಕರ್ತರು ನಗರದ ಮೈಲಾರ ನಗರದಿಂದ ಪ್ರತಿಭಟನಾ ಮೆರವಣಿಗೆ ನಡೆಸಿ ಜಿಲ್ಲಾಧಿಕಾರಿಗಳ ಕಾರ್ಯಾಲಯಕ್ಕೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು.

ಇದೇ ಸಂದರ್ಭದಲ್ಲಿ ಜಿಲ್ಲಾಧಿಕಾರಿ ತುಷಾರ ಗಿರಿನಾಥರಿಗೆ ಮನವಿ ಸಲ್ಲಿಸಲಾಯಿತು. ಮನವಿಗೆ ಸ್ಪಂದಿಸಿದ ಜಿಲ್ಲಾಧಿಕಾರಿಗಳು ತಕ್ಷಣದಿಂದಲೇ ಕೊಳಚೆ ಪ್ರದೇಶದ ನಿವಾಸಿಗಳಿಗೆ ಮುಂಗಡ ಹಣ ನೀಡಿದವರಿಗೆ ಒಂದ ದಿನದಲ್ಲಿಯೇ ನಿವೇಶನ ಅಥವಾ ಮನೆ ಕಟ್ಟಿಸಿಕೊಡುವುದಾಗಿ ಭರವಸೆ ನೀಡಿದರು. ಜೊತೆಗೆ ಚುನಾವಣೆಗಳಾ ನಂತರ ಪಡಿತರ ಚೀಟಿಗಳನ್ನು ವಿತರಿಸುವುದಾಗಿ ಭರವಸೆ ನೀಡಿದರು.

ಪ್ರತಿಭಟನಾಕಾರರನ್ನು ಉದ್ದೇಶಿಸಿ ಪಕ್ಷದ ಜಿಲ್ಲಾ ಮುಖಂಡರಾದ ಕರಿಯಪ್ಪ ಅಚ್ಚೊಳ್ಳಿ ಮಾತನಾಡಿ ಈ ವಿಷಯವಾಗಿ ಈ ಹಿಂದೆಯೇ ಜಿಲ್ಲಾಧಿಕಾರಿಗಳ ಗಮನಕ್ಕೆ ತಂದರೂ ಯಾವುದೇ ಕ್ರಮ ಜರುಗಿಸದೇ ಇರುವುದನ್ನು ತೀವ್ರವಾಗಿ ಖಂಡಿಸಿದರು. ಮುಂದೆ ಇದೇ ಧೋರಣೆ ಅನುಸರಿಸಿದಲ್ಲಿ ತೀವ್ರ ಸ್ವರೂಪದ ಚಳುವಳಿ ಹಮ್ಮಿಕ್ರೊಳ್ಳುವುದಾಗಿ ಎಚ್ಚರಿಸಿದರು.

ಚಳುವಳಿಯ ನೇತೃತ್ವವನ್ನು ಸ್ಥಳೀಯ ಸಮಿತಿ ಕಾರ್ಯದರ್ಶಿ ಶರಣಬಸವ, ಮುಖಂಡರಾ ಕೆ.ಜಿ.ವಿರೇಶ, ಖಾಜಾಹುಸೇನ, ತಿಪ್ಪಣ್ಣ, ರಸೂಲ್ ಅಹ್ಮದ್, ಶ್ಯಾಮಸುಂದರ, ಜಿ.ಬಿ.ಗೋಪಾಲನಾಯಕ್, ಕೆ.ರಾಜೇಶ, ಕೆ.ಲಕ್ಷ್ಮಣ, ಕೆ.ನಾರಾಯಣ, ಮಹಾದೇವ, ಕುಮಾರ, ವಿ.ನಾಗೇಂದ್ರ, ಮಲ್ಲೇಶಪ್ಪ, ನರಸಪ್ಪ, ಮಲ್ಲೇಶನಾಯಕ, ನರಸಿಂಹ, ತಿಮ್ಮಪ್ಪ, ಶಿವಕುಮಾರ, ಶ್ರೀಶೈಲ, ಈಶ್ವರ, ರಾಮು, ಸಾವರಪ್ಪ, ಬಾಬು, ಚನ್ನವೀರ, ಗೋಪಿ ಮುಂತಾದವರು ವಹಿಸಿದ್ದರು.

ವಿರಾಜಪೇಟೆ: ಅಕ್ಷರ ದಾಸೋಹ ಸಮಾವೇಶ

ಇತ್ತೀಚೆಗೆ ಕೊಡಗು ಜಿಲ್ಲೆ ವಿರಾಜಪೇಟೆ ಪುರಭವನದಲ್ಲಿ ತಾಲ್ಲೂಕಿನ ಅಕ್ಷರದಾಸೋಹ ನೌಕರರ ಸಮಾವೇಶವು ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಶ್ರೀಮತಿ ಮೀನಾಕ್ಷಿಯವರು ವಹಿಸಿದ್ದರು. ತಾಲೂಕಿನ ವಿವಿಧೆಡೆಗಳಿಂದ ಬಂದ ನೌಕರರು ತಾವು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಸವಿವರವಾಗಿ ಚರ್ಚಿಸಿದರು.

ರಾಜ್ಯಮಟ್ಟದ ಅಕ್ಷರ ದಾಸೋಹ ನೌಕರರ ಸಂಘಟನೆಯೊಂದಿಗೆ ಸೇರ್ಪಡೆಗೊಂಡು ಹೋರಾಟ ನಡೆಸುವುದರ ಮೂಲಕ ಪರಿಹಾರವನ್ನು ಪಡೆದು ಕೊಳ್ಳಬೇಕೆಂಬ ದೃಢವಾದ ಸಂಕಲ್ಪ ಎಲ್ಲಾ ನೌಕರರಿಂದಲೂ ಹೊರಹೊಮ್ಮಿತು.

ಕೊಡಗು ಜಿಲ್ಲಾ ಜನರಲ್ ವರ್ಕರ್ಸ್ ಯೂನಿಯನ್ನಿನ ಕಾರ್ಯದರ್ಶಿಯಾದ ಐ.ಆರ್.ಪ್ರಮೋದ್‌ರವರು ಮಾತನಾಡಿ ಈಗಿನ ಸಂಕಷ್ಟಕರ ಪರಿಸ್ಥಿತಿಯಲ್ಲಿ ಸಂಘಟಿತಗೊಂಡು ಹೋರಾಟವನ್ನು ನಡೆಸುವುದು ಅನಿವಾರ್ಯ ಎಂದು ವಿವರಿಸಿದರು.

ಸಮಾವೇಶಕ್ಕೆ ಶುಭಕೋರಿ ಕೊಡಗು ಜಿಲ್ಲಾ ಸಿಪಿಐ(ಎಂ) ಸಮಿತಿಯ ಕಾರ್ಯದರ್ಶಿಗಳಾದ ಪೀಟರ್ ಲೋಬೋ, ಕೊಡಗು ಜಿಲ್ಲಾ ಕಟ್ಟಡ ಕಾರ್ಮಿಕ ಸಂಘದ ಅಧ್ಯಕ್ಷರಾದ ಸಿ.ಜಿ.ವರ್ಗೀಸ್, ಪ್ರಧಾನ ಕಾರ್ಯದರ್ಶಿ ಕೆ.ವಿ.ಸುಕುಮಾರರವರು ಮಾತನಾಡಿದರು. ಹತ್ತೊಂಬತ್ತು ನೌಕರರ ಸಂಚಾಲನ ಸಮಿತಿಯನ್ನು ರೂಪಿಸಲಾಯಿತು.

ಮುಂದೆ ಕೊಡಗು ಜಿಲ್ಲೆಯ ಉಳಿದ ತಾಲ್ಲೂಕುಗಳಲ್ಲಿಯೂ ಸಮಾವೇಶವನ್ನು ನಡೆಸಿ ಜಿಲ್ಲಾ ಮತ್ತು ತಾಲ್ಲೂಕು ಸಮಿತಿಯನ್ನು ರೂಪಿಸುವಂತೆ ತೀರ್ಮಾನಿಸಲಾಯಿತು.

ನಿರ್ಣಯಗಳು

1. ಅಕ್ಷರ ದಾಸೋಹ ನೌಕರರಿಗೆ ಕೊಡುತ್ತಿರುವ ಕೂಲಿ ದಿನಕ್ಕೆ ರೂ 20-15 ಆಗಿದ್ದು ಅದು ತೀರಾ ನಿಕೃಷ್ಟವಾಗಿದ್ದು, ಅದನ್ನು ಹೆಚ್ಚಿಸುವಂತೆ ಸರ್ಕಾರವನ್ನು ಒತ್ತಾಯಿಸುವುದು. ಈ ನೌಕರರನ್ನು ಕೂಡಾ ಸರ್ಕಾರಿ ನೌಕರರೆಂದು ಪರಿಗಣಿಸಿ ಸೇವಾ ನಿಯಮಾವಳಿಗಳನ್ನು ರಚಿಸುವುದು.
2. ಕೆಲವು ಶಾಲೆಗಳಲ್ಲಿ ಸೌದೆ, ತರಕಾರಿ, ಬೇಳೆ ಇನ್ನಿತರ ವಸ್ತುಗಳ ಸಮರ್ಪಕ ಪೂರೈಕೆಯಾಗುತ್ತಿಲ್ಲ. ಪೂರೈಸುವುದು.
3. ಅಡುಗೆ ಮಾಡಲು ಶುದ್ಧವಾದ ನೀರನ್ನು ಒದಗಿಸತಕ್ಕದ್ದು.
4. ತಿಂಗಳ ಮೊದಲ ವಾರದಲ್ಲಿಯೇ ಸಂಬಳ ಪಾವತಿಯಾಗಬೇಕು.
5. ಶಿಥಿಲವಾದ ಶಾಲಾ ಕಟ್ಟಡವನ್ನು ಸರಿಪಡಿಸಬೇಕು.
6. ಕೆಲವು ಶಾಲೆಗಳಲ್ಲಿ ಒಬ್ಬ ಅಡಿಗೆಯವರನ್ನು ಮಾತ್ರ ನೇಮಕ ಮಾಡಿದ್ದು ರಜೆಯಿಲ್ಲದೆ ಬಹಳ ತೊಂದರೆಯಾಗುತ್ತಿರುವುದರಿಂದ ಪ್ರತಿ ಶಾಲೆಯಲ್ಲಿ ಕನಿಷ್ಟ ಇಬ್ಬರು ಅಡುಗೆಯವರನ್ನು ನೇಮಕ ಮಾಡಬೇಕು.

ಭಾರತ ವಿದ್ಯಾರ್ಥಿ ಫೆಡರೇಷನ್(SFI) ನ 12ನೇ ಅಖಿಲ ಭಾರತ ಸಮ್ಮೇಳನ

ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ)ನ 12ನೇ ಅಖಿಲ ಭಾರತ ಸಮ್ಮೇಳನವು ಐತಿಹಾಸಿಕ ನಗರ ಹೈದರಾಬಾದ್ (ಕಾಂ.ಪಿ.ಸುಂದರಯ್ಯ ನಗರ)ದಲ್ಲಿ ನವೆಂಬರ್ 17ರಿಂದ 21,2005ರವರೆಗೆ ನಡೆಯುತ್ತಿದೆ.

ನವೆಂಬರ್ 17ರಂದು ಹೈದರಾಬಾದ್‌ನಲ್ಲಿ ಬೃಹತ್ ವಿದ್ಯಾರ್ಥಿ ರ್‍ಯಾಲಿ ನಡೆಯಿತು. 18ರಂದು ಸಮ್ಮೇಳನದ ಉದ್ಘಾಟನಾ ನಡೆದು ಸಮ್ಮೇಳನದ ಕಲಾಪಗಳು ಆರಂಭಗೊಂಡಿವೆ. ಶಿಕ್ಷಣ ರಂಗಕ್ಕೆ ಜಾಗತೀಕರಣ, ಒಡ್ಡಿರುವ ಗಂಭೀರ ಸವಾಲುಗಳು, ಶಿಕ್ಷಣದ ವ್ಯಾಪಾರೀಕರಣ, ಖಾಸಗೀಕರಣ, ಶಿಕ್ಷಣದಲ್ಲಿ ವಿದೇಶಿ ಬಂಡವಾಳ, ವಿದೇಶಿ ಖಾಸಗಿ ವಿಶ್ವವಿದ್ಯಾಲಯಗಳು ಇತ್ಯಾದಿ ಸೇರಿದಂತೆ ಗಂಭೀರ ಶೈಕ್ಷಣಿಕ ಪ್ರಶ್ನೆಗಳ ಬಗೆಗೆ ಹಾಗೂ ಬೆಳೆಯುತ್ತಿರುವ ದೇಶದ ವಿದ್ಯಾರ್ಥಿ ಚಳುವಳಿಯ ಅನುಭವ ಹಾಗೂ ಭವಿಷ್ಯದ ಚಳುವಳಿಯ ದಾರಿಯ ಕುರಿತ ಮಥನ ಈ ಸಮ್ಮೇಳನದಲ್ಲಿ ನಡೆಯಲಿದೆ.

ಬಹಿರಂಗ ಸಭೆಯ ವರದಿ ಆರ್.ರಾಮಕೃಷ್ಣ ಅವರಿಂದ

ಅನಕ್ಷರತೆ-ನಿರುದ್ಯೋಗ-ಬಡತನಗಳಿಗೆ ಕಾಂಗ್ರೆಸ್ ನೀತಿಯೇ ಕಾರಣ

ಬಹಿರಂಗ ಸಭೆಯಲ್ಲಿ ಕಾಂ.ಬುದ್ಧದೇವ್

ಸ್ವಾತಂತ್ರ್ಯ ಪಡೆದ 58 ವರ್ಷಗಳ ನಂತರವೂ ದೇಶದಲ್ಲಿ ಕೋಟ್ಯಾಂತರ ಮಕ್ಕಳು ಶಾಲೆಯಿಂದ ಹೊರಗಿದ್ದಾರೆ. ನಿರುದ್ಯೋಗ ಬಡತನ ತುಂಬಿ ತುಳುಕುತ್ತಿದೆ. ಇದಕ್ಕೆಲ್ಲಾ ಸ್ವಾತಂತ್ರ್ಯಾನಂತರ ಪ್ರಮುಖವಾಗಿ ದೇಶವನ್ನಾಳಿದ ಕಾಂಗ್ರೆಸ್ ಪಕ್ಷವೇ ಹೊಣೆ. 1949ರಲ್ಲಿ ವಿಮೋಚನೆಗೊಂಡ ಚೀನಾ ಬಡತನ, ನಿರುದ್ಯೋಗ ಹಾಗೂ ಅನಕ್ಷರತೆಯ ಸಮಸ್ಯೆಯನ್ನು ಬಹುತೇಕ ನಿವಾರಿಸಿಕೊಂಡಿದೆ. ಚೀನಾದೇಶವು ಮಾವೋ ನೇತೃತ್ವದಲ್ಲಿ ಅಗಾಧ ಪ್ರಗತಿಯ ದಾರಿ ಹಿಡಿದು ಈಗ ಜಪಾನ್, ಇಂಗ್ಲೆಂಡ್, ಫ್ರಾನ್ಸ್, ಅಮೆರಿಕಾ ಮುಂತಾದ ದೇಶಗಳ ಅಭಿವೃದ್ಧಿಯ ವೇಗವನ್ನು ಮೀರಿ ಮುನ್ನಡೆ ಸಾಧಿಸಿದೆ. ಸ್ವಾತಂತ್ರ್ಯಾನಂತರ ದೇಶವನ್ನಾಳಿದ ನೆಹರೂ, ಇಂದಿರಾ ಗಾಂಧಿ, ರಾಜೀವ್ ಗಾಂಧಿ ನೇತೃತ್ವದ ಕಾಂಗ್ರೆಸ್ ಪಕ್ಷದ ನೀತಿಯಿಂದ ದೇಶದ ಶೇ.12ರಷ್ಟು ಶ್ರೀಮಂತ ಜನ ಸಂತೋಷಗೊಂಡಿದ್ದಾರೆ. ಆದರೆ ಉಳಿದ ಜನರು ಸಂಕಷ್ಟಕ್ಕೆ ಗುರಿಯಾಗಿದ್ದಾರೆ ಎಂದು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಕಾಂ. ಬುದ್ಧದೇವ ಭಟ್ಟಾಚಾರ್ಯ ಹೇಳಿದರು. ಬಿಜೆಪಿ ನೇತೃತ್ವದ ಎನ್.ಡಿ.ಎ. ಸರ್ಕಾರವೂ ಶಿಕ್ಷಣದ ಖಾಸಗೀಕರಣ - ಕೋಮುವಾದೀಕರಣಕ್ಕೆ ಕುಮ್ಮಕ್ಕು ನೀಡಿತು. 1936ರಲ್ಲಿ ಸಂಘಟಿತ ರೂಪ ಪಡೆದ ದೇಶದ ವಿದ್ಯಾರ್ಥಿ ಚಳುವಳಿಯು ಸಾಮ್ರಾಜ್ಯಶಾಹಿಯ ವಿರುದ್ಧ ಧೀಮಂತ ಹೋರಾಟ ನಡೆಸಿತು. ಈಗ ಶಿಕ್ಷಣದ ಖಾಸಗೀಕರಣ - ಕೋಮುವಾದೀಕರಣದ



ವಿರುದ್ಧ ಎಸ್ಸೆಫೈ ಸಂಘಟನೆ ರಾಷ್ಟ್ರಾದ್ಯಂತ ಹೋರಾಟ ನಡೆಸುತ್ತಿದೆ. ಈಗ ಕೇಂದ್ರ ಸರ್ಕಾರವು ಗ್ರಾಮೀಣ ಉದ್ಯೋಗ ಭರವಸೆ ಕಾಯ್ದೆಯನ್ನು ಎಡಪಕ್ಷಗಳ ಒತ್ತಾಯದಿಂದಾಗಿ ತರುತ್ತಿದೆ, ಆದರೆ ಲಾಭದಾಯಕ ಸಾರ್ವಜನಿಕ ಉದ್ದಿಮೆಗಳ ಬಂಡವಾಳ ಹಿಂತೆಗೆತ ಸೇರಿದಂತೆ ಜನ ವಿರೋಧಿ ನೀತಿಯನ್ನೇ ಜಾರಿ ಮಾಡಲು ಯತ್ನಿಸುತ್ತಿದೆ. ಎಡಪಕ್ಷಗಳು ಇದನ್ನು ತೀವ್ರವಾಗಿ ವಿರೋಧಿಸುತ್ತಿವೆ. ಈಗ ಅಂತರ ರಾಷ್ಟ್ರೀಯ ಅಣುಶಕ್ತಿ ಸಂಸ್ಥೆಯಲ್ಲಿ ಭಾರತವು ಇರಾನ್‌ನ ವಿರುದ್ಧ ಮತ ಚಲಾಯಿಸಿದೆ. ಪಶ್ಚಿಮ ಬಂಗಾಳದಲ್ಲಿ ಅಮೇರಿಕಾದೊಂದಿಗೆ ಜಂಟಿ ಸೇನಾ ಕವಾಯತು ನಡೆಸುತ್ತಿದೆ. ಅಮೆರಿಕಾದ ಒತ್ತಡಗಳಿಗೆ ಮಣಿಯುವ ಈ ನೀತಿಗಳ ಬಗ್ಗೆ ನಾವು ಪ್ರಧಾನ ಮಂತ್ರಿಗಳಿಗೆ ಪತ್ರ ಬರೆದಿದ್ದೇವೆ, ಸಿಪಿಐ(ಎಂ) ಈ ವಿಷಯದ ಮೇಲೆ ರಾಷ್ಟ್ರವ್ಯಾಪಿ ಹೋರಾಟ ನಡೆಸುತ್ತಿದೆ ಎಂದೂ ಬುದ್ಧದೇವ್‌ರವರು ತಿಳಿಸಿದರು.

ಪಶ್ಚಿಮ ಬಂಗಾಳದ ಕೈಗಾರಿಕೀಕರಣ - ಉದ್ಯೋಗ ಸೃಷ್ಟಿಗಾಗಿ ನಾವು ವಿದೇಶಿ ಬಂಡವಾಳವನ್ನು ಆಹ್ವಾನಿಸುತ್ತೇವೆ. ಆದರೆ ವಿಶ್ವಬ್ಯಾಂಕ್, ಐ.ಎಂ.ಎಫ್. ಗಳಂತಹ ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಗಳ ಜನ ವಿರೋಧಿ ಷರತ್ತುಗಳನ್ನು ನಾವು ಒಪ್ಪುವುದಿಲ್ಲ. ಪಶ್ಚಿಮ ಬಂಗಾಳದ ಭೂಹೀನರಿಗೆ ಭೂಮಿ ಹಂಚಿದ್ದೇವೆ. ಇಂತಹ ಭೂಸುಧಾರಣಾ ನೀತಿಯಿಂದಾಗಿ ಇಂದು ಪಶ್ಚಿಮ ಬಂಗಾಳ ರಾಜ್ಯವ ಹಣ್ಣು, ತರಕಾರಿ, ಆಲೂಗಡ್ಡೆ, ಮೀನು, ಭತ್ತ ಉತ್ಪಾದನೆಯಲ್ಲಿ ದೇಶದಲ್ಲೇ ಮುಂಚೂಣಿಯಲ್ಲಿದೆ. ಉಚಿತ ಪ್ರಾಥಮಿಕ ಶಿಕ್ಷಣ ನೀತಿ ಜಾರಿಗೆ ತಂದ ಪ್ರಥಮ ರಾಜ್ಯ ಪಶ್ಚಿಮ ಬಂಗಾಳ ಎಂದೂ ಬುದ್ಧದೇವ್ ತಿಳಿಸಿದರು.

ಅಪಮಾನತೆಯ ಸಮಾಜದಲ್ಲಿ ಶಿಕ್ಷಣ ಸಮಾನತೆಯ ಸಾಧನವಾಗಲಿ

ನಮ್ಮದು ಅಸಮಾನತೆ ತುಂಬಿದ ಸಮಾಜ. ವರ್ಗ, ವರ್ಣ, ಪ್ರದೇಶ, ಲಿಂಗ ಹಲವು ಬಗೆಯ ಅಸಮಾನತೆ ನಮ್ಮ ಸಮಾಜದಲ್ಲಿ ತುಂಬಿ ತುಳುಕುತ್ತಿದೆ. ಇಂತಹ ಸಮಾಜದಲ್ಲಿ ಶಿಕ್ಷಣ ಸಮಾನತೆಯ ಸಾಧನದಂತೆ ಕೆಲಸ ಮಾಡಬೇಕು. ಶಿಕ್ಷಣವಿಲ್ಲದೆ ಪ್ರಜಾಪ್ರಭುತ್ವ ಯಶಸ್ವಿಯಾಗುವುದು ಸಾಧ್ಯವಿಲ್ಲ. ಶಿಕ್ಷಣ ಆರೋಗ್ಯದಂತಹ ಸಾಮಾಜಿಕ ಅಗತ್ಯಗಳನ್ನು ಮಾರುಕಟ್ಟೆ ಶಕ್ತಿಗಳಿಗೆ ಬಿಡುವುದು ಸಾಧ್ಯವಿಲ್ಲ ಎಂದು ಯೋಜನಾ ಆಯೋಗದ ಸದಸ್ಯರೂ, ಮುಂಬಯಿ ವಿಶ್ವ ವಿದ್ಯಾಲಯದ ಮಾಜಿ ಉಪಕುಲಪತಿಗಳೂ ಆದ ಬಿ.ಎಲ್. ಮೊಂಗ್ಯೆಕರ್‌ರವರು ಹೇಳಿದರು. ಹೈದರಾಬಾದ್ ಕಾಂ.ಸುಂದರಯ್ಯ ನಗರದಲ್ಲಿ ಕಾಂ.ಕನಕ್ ಮುಖರ್ಜಿ ಮಂಚ್‌ನಲ್ಲಿ ನಡೆಯುತ್ತಿರುವ ಎಸ್‌ಎಫ್‌ಐನ 12ನೇ ಅಖಿಲ ಭಾರತ ಸಮ್ಮೇಳನವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಭಾರತ ದೇಶ ಈಗ ಸಾಧಿಸಿದೆ ಎಂದು ಹೇಳಲಾದ ಸಾಕ್ಷರತೆಯಲ್ಲಿ ಸಾಕ್ಷರರು ಎನ್ನಲಾಗುವ ಗಣನೀಯ ಸಂಖ್ಯೆಯ ಜನರಿಗೆ ಕೇವಲ ಸಹಿ ಮಾತ್ರ ಮಾಡಲು ಬರುತ್ತದೆ. ಅದು ಸಾಲದು. ಶಿಕ್ಷಣಕ್ಕೆ ನಾವು ನೀಡುತ್ತಿರುವ ಆದ್ಯತೆ ಸಾಲದು. ದೇಶದ ಪ್ರಾಥಮಿಕ ಶಾಲೆಗಳಲ್ಲಿ ಶೇ.30ರಷ್ಟು ಏಕೋಪಾಧ್ಯಾಯ ಶಾಲೆಗಳು. ಶೇ.35 ಒಂದು ಕೋಣೆಯುಳ್ಳ ಶಾಲೆಗಳು ಶೇ.40 ಶಾಲೆಗಳಲ್ಲಿ ಪ್ರತ್ಯೇಕ ಮಹಿಳಾ ಶೌಚಾಲಯ ಇಲ್ಲ. ಮುಸ್ಲಿಂ ಸಮುದಾಯ ಶೈಕ್ಷಣಿಕವಾಗಿ ತೀರಾ ಹಿಂದುಳಿದಿದೆ.

ಕೊಠಾರಿ ಆಯೋಗ 1960ರಲ್ಲೇ ಒಟ್ಟು ಜಿಡಿಪಿಯ ಶೇ.6ರಷ್ಟನ್ನು ಶಿಕ್ಷಣಕ್ಕೆ ಮೀಸಲಿಡ ಬೇಕೆಂದು ಹೇಳಿತ್ತು. ಅದನ್ನು ನೀಡಲಾಗುತ್ತಿಲ್ಲ. ರಾಜ್ಯ, ಕೇಂದ್ರ ಸರ್ಕಾರಗಳೆಲ್ಲವೂ ಸೇರಿ 75-80 ಸಾವಿರ ಕೋಟಿ ರೂಪಾಯಿಗಳಷ್ಟನ್ನು ಖರ್ಚು ಮಾಡುತ್ತಿವೆ. ಈ ನಿಟ್ಟಿನಲ್ಲಿ ಕನಿಷ್ಟ ಇನ್ನೂ 60 ಸಾವಿರ ಕೋಟಿ ರೂಗಳನ್ನು ಶಿಕ್ಷಣಕ್ಕೆ ನೀಡಬೇಕಿದೆ. ಈಗ ಒಟ್ಟು ರಾಷ್ಟ್ರೀಯ ಉತ್ಪನ್ನದಲ್ಲಿ ಶೇ.2ರಷ್ಟನ್ನು ಪ್ರಾಥಮಿಕ ಶಿಕ್ಷಣಕ್ಕೂ, ಶೇ.1ರಷ್ಟನ್ನು ಪ್ರೌಢ ಶಿಕ್ಷಣಕ್ಕೂ ಶೇ.0.4 ರಷ್ಟನ್ನು ಉನ್ನತ ಶಿಕ್ಷಣಕ್ಕೂ, 0.1ಶೇ.ವನ್ನು ತಾಂತ್ರಿಕ ಶಿಕ್ಷಣಕ್ಕೂ ವೆಚ್ಚ ಮಾಡಲಾಗುತ್ತದೆ ಎಂದು ಮೊಂಗ್ಯೆಕರ್ ಅವರು ಹೇಳಿದರು.

ಶಿಕ್ಷಣ ಒಂದು ಉದ್ದಿಮೆಯಲ್ಲ. ಶಿಕ್ಷಣದಿಂದ ಲಾಭಗಳಿಗೆ ಅವಕಾಶ ನೀಡಬಾರದೆಂದೂ ಅವರು ಪ್ರತಿಪಾದಿಸಿದರು.

ಕೆ.ಕೆ.ರಾಘೇಶ್ ಧ್ವಜಾರೋಹಣ ಮಾಡುವುದರೊಂದಿಗೆ ಕಲಾಪ ಆರಂಭ

ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕಾಂ. ಕೆ.ಕೆ.ರಾಘೇಶ್‌ರವರು ಮಾತನಾಡಿ ಶಿಕ್ಷಣ ರಂಗದಲ್ಲಿ ಹೊಸ ಹೊಸ ಸವಾಲುಗಳು ಎದುರಾಗುತ್ತಿವೆ, ಸರ್ಕಾರ ಶಿಕ್ಷಣ ನೀಡುವ ಜವಾಬ್ದಾರಿಯಿಂದ ಜಾರಿಕೊಳ್ಳಲು ಯತ್ನಿಸುತ್ತಿದೆ. ಜಾಗತೀಕರಣದ ಭಾಗವಾಗಿ ಶಿಕ್ಷಣದ ಖಾಸಗೀಕರಣವು ತೀವ್ರಗೊಂಡಿದೆ. ನಮ್ಮ ದೇಶದ ನ್ಯಾಯಾಲಯಗಳು ಶಿಕ್ಷಣ ವಿರೋಧಿಯಾದ ತೀರ್ಪುಗಳನ್ನು ನೀಡುತ್ತಿದೆ ಎಂದರು ಒಟ್ಟಾರೆ ಪರಿಸ್ಥಿತಿ ತುಂಬಾ ಆತಂಕಕಾರಿಯಾಗಿದೆ. ಇಂತಹ ಗಂಭೀರ ಸವಾಲಿನ ಸ್ಥಿತಿಯಲ್ಲಿ ಎಸ್‌ಎಫ್‌ಐ ಸಂಘಟನೆ ರಾಷ್ಟ್ರಾದ್ಯಂತ ತೀವ್ರ ಚಳುವಳಿ ನಡೆಸುತ್ತಿದೆ. ಪೊಲೀಸರ ಲಾಠಿ ಪ್ರಹಾರ, ಗ್ರೇನೇಡ್ ದಾಳಿಗಳನ್ನು ದಬ್ಬಾಳಿಕೆಯನ್ನು ಎದುರಿಸಿ ಚಳುವಳಿ ನಡೆಸುತ್ತಿದೆ.

ಕಳೆದ ಸಮ್ಮೇಳನ ಸಂದರ್ಭದಲ್ಲಿ ಸುಮಾರು 24 ಲಕ್ಷ ಸದಸ್ಯತ್ವ ಹೊಂದಿದ್ದ ಎಸ್‌ಎಫ್‌ಐ ಸಂಘಟನೆ ಇದೀಗ 37 ಲಕ್ಷ ಸದಸ್ಯತ್ವವನ್ನು ದಾಟಿ ಮುನ್ನಡೆಯುತ್ತಿದೆ. ಬೆಳೆಯುತ್ತಿರುವ ವಿದ್ಯಾರ್ಥಿ ಚಳುವಳಿಯು ಬೆಳೆಯುತ್ತಿರುವ ಸವಾಲುಗಳನ್ನು ಸ್ವೀಕರಿಸಿ ಹೋರಾಟ ನಡೆಸಲಿದೆ. ಈ ಬಗೆಗೆ ನಾಲ್ಕು ದಿನಗಳ ಅಖಿಲ ಭಾರತ ಸಮ್ಮೇಳನ ಚರ್ಚಿಸಿ ಸೂಕ್ತ ನಿರ್ದೇಶನ ನೀಡಲಿದೆ ಎಂದರು.

ಜಾಗತಿಕವಾಗಿ ಎಡಶಕ್ತಿಗಳಿಗೆ ಹಿನ್ನಡೆಯಾದಾಗಲೂ ಭಾರತದಲ್ಲಿ ಎಡಪಕ್ಷಗಳು ಮುನ್ನಡೆಯುತ್ತಿವೆ

——— ಸೀತಾರಾಂ ಯೆಚೂರಿ

ಜಾಗತಿಕವಾಗಿ ಎಡಶಕ್ತಿಗಳಿಗೆ ದೊಡ್ಡ ಹಿನ್ನಡೆಯಾದ ನಂತರದ ಸನ್ನಿವೇಶದಲ್ಲಿ ಸಹ ಭಾರತದಲ್ಲಿ ಎಡಪಕ್ಷಗಳು ಮುನ್ನಡೆ ಸಾಧಿಸುತ್ತಿವೆ. ಪ್ರಸ್ತುತ ಸನ್ನಿವೇಶದಲ್ಲಿ ಕೇಂದ್ರ ಯು.ಪಿ.ಎ. ಸರ್ಕಾರ ಸಮಾನ ಕನಿಷ್ಟ ಕಾರ್ಯಕ್ರಮದ ಜನಪರ ಅಂಶಗಳನ್ನು ಮರೆತು ಜನವಿರೋಧಿ ದಾರಿಯಲ್ಲಿ ಹೋಗಲು ಯತ್ನಿಸುತ್ತಿದೆ. ಈ ಪ್ರಶ್ನೆಯಲ್ಲಿ ಎಡಪಕ್ಷಗಳನ್ನು ಕುರಿತು, ಅವು ಪ್ರತಿಭಟಿಸುತ್ತಿಲ್ಲ, ಅವು ಕೇವಲ ಬೊಗಳುವ ನಾಯಿಗಳು, ಕಚ್ಚುವದಿಲ್ಲ ಎಂದು ಟೀಕಿಸಲಾಯಿತು. ಆದರೆ ಇತ್ತೀಚಿನ ರಾಷ್ಟ್ರವ್ಯಾಪಿ ಚಳುವಳಿಯ ಮೂಲಕ ಎಡಪಕ್ಷಗಳು 'ಕಚ್ಚುವ ನಾಯಿ' ಎಂಬುದನ್ನು ಮನವರಿಕೆ ಮಾಡಿಕೊಡಲಾಗಿದೆ. ನಾಯಿ ಕಚ್ಚಿದರೆ 12 ಸೂಜಿ ಮದ್ದು ಚುಚ್ಚಿಸಿಕೊಳ್ಳಬೇಕಾದಂತೆ ಈಗ ಸರ್ಕಾರಕ್ಕೆ ಆಗಿದೆ ಎಂದು ಎಸ್ಸೆಫೈ ಮಾಜಿ ರಾಷ್ಟ್ರ ಅಧ್ಯಕ್ಷರೂ, ಸಿಪಿಐ(ಎಂ) ಪಕ್ಷದ ಪಾಲಿಟ್ ಬ್ಯೂರೋ ಸದಸ್ಯರೂ ಆದ ಕಾಂ. ಸೀತಾರಾಮ ಯೆಚೂರಿ ಹೇಳಿದರು.

ಇದು ಒಂದು ಕಡೆಯ ಚಿತ್ರವಾದರೆ ಮತ್ತೊಂದು ಕಡೆ, ವಾಜಪೇಯಿಯವರು ತಾವು ಮತ್ತೊಮ್ಮೆ ಪ್ರಧಾನ ಮಂತ್ರಿಯಾಗಬಹುದೆಂದು ಭ್ರಮೆಯಲ್ಲಿದ್ದಾರೆ. ಅವರು ಆ ರೀತಿ ಆಸೆ ಪಡುವ ಬದಲು ರಾಜಕೀಯ ನಿವೃತ್ತಿ ಪಡೆದು ವಿಶ್ರಾಂತಿ ಪಡೆಯುವುದು ಒಳ್ಳೆಯದು, ಏಕೆಂದರೆ ಅವರಿಗೆ ಅಂತಹ ಅವಕಾಶ ಸಿಗುವುದಿಲ್ಲ. ಕೇಂದ್ರ ಯುಪಿಎ ಸರ್ಕಾರದ ಜನವಿರೋಧಿ ನೀತಿಯ ವಿರುದ್ಧ ಚಳುವಳಿ ತೀವ್ರಗೊಳ್ಳಲಿದೆ. ಇತ್ತೀಚೆಗೆ ಭಾರತ ಇರಾನ್ ಸರ್ಕಾರದ ವಿರುದ್ಧ ಮತ ನೀಡಿರುವುದು ಪ್ರಮಾದ. ಹಿಂದಿನ ಪ್ರಧಾನಿ ವಾಜಪೇಯಿಯವರು ಅಮೇರಿಕಾದ ಮುಂದೆ ಮಂಡಿಯೂರಿ ಅವರ ಮಂಡಿಗೆ ಶಸ್ತ್ರ ಚಿಕಿತ್ಸೆ ಮಾಡಬೇಕಾಗಿ ಬಂತು. ಅದೇ ಪರಿಸ್ಥಿತಿ ಈಗಿನ ಪ್ರಧಾನಿ ಮನಮೋಹನ ಸಿಂಗ್‌ರವರಿಗೆ ಬರಬಾರದು ಎಂದು ತಮ್ಮದೇ ಶೈಲಿಯಲ್ಲಿ ವ್ಯಂಗ್ಯ ಚಟಾಕಿ ಹಾರಿಸಿದರು. ಮನಮೋಹನ್ ಸಿಂಗ್ ಸರ್ಕಾರ ಸರಿದಾರಿಯಲ್ಲಿ ಹೋದರೆ 5 ವರ್ಷ ಬಾಳುತ್ತದೆ. ತಪ್ಪು ದಾರಿಗೆ ಹೋದರೆ ಚಳುವಳಿ ತೀವ್ರಗೊಳ್ಳುತ್ತದೆ ಎಂದೂ ಅವರು ಸ್ಪಷ್ಟಪಡಿಸಿದರು. ಖಾಸಗಿ ಶಿಕ್ಷಣ ಸಂಸ್ಥೆಗಳ ಮೇಲಿನ ಸಾಮಾಜಿಕ ನಿಯಂತ್ರಣ, ಸಮರ್ಪಕ ಪ್ರವೇಶ ನೀತಿ, ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಮೀಸಲಾತಿ ನೀತಿ ಇವನ್ನು ಎಸ್ಸೆಫೈನ ಸಮ್ಮೇಳನ ಚರ್ಚಿಸಿ ಸೂಕ್ತ ತೀರ್ಮಾನ ಮಾಡಬೇಕೆಂದು ಅವರು ಕರೆ ನೀಡಿದರು.

ಬಹಿರಂಗಸಭೆ ನಡೆದ ನಿಜಾಮ ಕಾಲೇಜು ಮೈದಾನದ ಪಕ್ಕದಲ್ಲೇ ಇರುವ ನಿಜಾಮು ಕಾಲೇಜಿನಲ್ಲಿನ ತಮ್ಮ ವಿದ್ಯಾರ್ಥಿ ಜೀವನವನ್ನೂ, ತಾವು ಪಾಲ್ಗೊಂಡ ವಿದ್ಯಾರ್ಥಿ ಚಳುವಳಿಗಳನ್ನು ನೆನೆಸಿಕೊಂಡ ಸೀತಾರಾಮ ಯೆಚೂರಿ ಶಿಕ್ಷಣ ರಂಗದ ಪ್ರಸ್ತುತ ಸವಾಲುಗಳಿಗೆ ತಕ್ಕಂತೆ ಚಳುವಳಿ ಬೆಳೆಸಲು ಕರೆ ನೀಡಿದರು.

ಸಿಪಿಐ(ಎಂ) ಪಕ್ಷದ ಪಾಲಿಟ್‌ಬ್ಯೂರೋ ಸದಸ್ಯರೂ, ಆಂಧ್ರದ ಕಾರ್ಯದರ್ಶಿಗಳೂ ಆದ ಕಾಂ. ಬಿ.ವಿ.ರಾಘವುಲು, ಎಸ್ಸೆಫೈನ ಅಖಿಲ ಭಾರತ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ. ಆಲ್ಬಿನಾ ಶಕೀಲ್ ಮಾತನಾಡಿದರು. ಎಸ್ಸೆಫೈನ ಅ.ಭಾ.ಅಧ್ಯಕ್ಷರಾದ ಕಾಂ. ಕೆ.ಕೆ.ರಾಘೇಶ್ ಅಧ್ಯಕ್ಷತೆ ವಹಿಸಿದ್ದ ಬಹಿರಂಗ ಸಭೆಯಲ್ಲಿ ಪ್ರಧಾನ ಕಾರ್ಯದರ್ಶಿ ಕಾಂ. ಕಲೋಲ್ ರಾಯ್ ಪ್ರಸ್ತಾವಿಕವಾಗಿ ಮಾತನಾಡಿದರು.



ಚಿಲ್ಲರೆ ವ್ಯಾಪಾರದಲ್ಲೂ ವಿದೇ

ಗ್ರಾಮೀಣ ಪ್ರದೇಶದಲ್ಲಿ ವ್ಯಾಪಾರ ನಡೆಸುತ್ತಿರುವ ಯಾವುದಾದರೂ ಯುವಕನನ್ನು ವ್ಯಾಪಾರ ಹೇಗಿದೆ ಎಂದು ಪ್ರಶ್ನಿಸಿದರೆ, 'ರೈತರ ಬಳಿ ಹಣವಿಲ್ಲ, ವ್ಯಾಪಾರ ಅಷ್ಟಕ್ಕಷ್ಟೆ, ಸಂಪಾದನೆ ಕಡಿಮೆ' ಎಂದು ಉತ್ತರಿಸುತ್ತಾನೆ. ಹಾಗಾದರೆ ನೀನು ವ್ಯಾಪಾರವನ್ನೇ ಯಾಕೆ ಮುಂದುವರಿಸುತ್ತಿರುವಿ ಎಂದು ಕೇಳಿದರೆ 'ಉದ್ಯೋಗ ಸಿಗಬೇಕಲ್ಲ' ಎಂದು ನಿರಾಶೆಯಿಂದ ಉತ್ತರಿಸುತ್ತಾನೆ.

ಹಾಗೆಯೇ ನಗರ ಪ್ರದೇಶಗಳಲ್ಲಿ ಇತ್ತೀಚಿಗಂತೂ, ಸಣ್ಣ ವ್ಯಾಪಾರಿಗಳ ಸಂಖ್ಯೆ ವಿಪರೀತ ಹೆಚ್ಚಿದೆ. ಚಿಕ್ಕ ಅಂಗಡಿ, ಕೈಗಾಡಿ, ರಸ್ತೆ ಬದಿ ವ್ಯಾಪಾರಿಗಳು, ಹೀಗೆ ಹತ್ತಾರು ವಿಧದ ವ್ಯಾಪಾರಿಗಳು - ಇವರಲ್ಲಿ ಹೆಚ್ಚಿನವರು ಯುವಕರು. ಇವರನ್ನು ಪ್ರಶ್ನಿಸಿದರೆ, ಒಬ್ಬೊಬ್ಬರದೂ ಒಂದೊಂದು ಗೋಳು. ಕೆಲಸ ಹುಡುಕಲೆಂದು ಬೆಂಗಳೂರಿಗೆ ಬಂದರೆ ಇಲ್ಲಿ ಕೆಲಸ ಸಿಗದೆ, ಊರಿಗೂ ವಾಪಾಸು ಹೋಗಲಾರದೆ ಚಿಕ್ಕ ಚಿಕ್ಕ ವ್ಯಾಪಾರವನ್ನು ನಡೆಸುತ್ತಿದ್ದಾರೆ. ಸಂಜೆ ವ್ಯಾಪಾರ ನಡೆಸುತ್ತಿರುವವರದು ಇನ್ನೊಂದು ಕಥೆ. ಹಗಲು ಹೊತ್ತಿನಲ್ಲಿ ಅಲ್ಲಿ ಇಲ್ಲಿ ಕೆಲಸ ಮಾಡಿ ಸಿಗುವ ಕೂಲಿ, ವೇತನ ಸಾಕಾಗದೆ, ಸಂಜೆಯ ನಂತರ, ರಾತ್ರಿಯ ಹೊತ್ತು ಚಿಲ್ಲರೆ ವ್ಯಾಪಾರ ಆರಂಭಿಸುತ್ತಾರೆ.

ಅಂದರೆ ಚಿಲ್ಲರೆ ವ್ಯಾಪಾರವನ್ನು ನಡೆಸುವವರು, ಅದು ಅವರಿಗೆ ಆಯ್ಕೆಯಾಗಿ ಬಂದಿಲ್ಲ. ದೇಶದ, ರಾಜ್ಯದ ಇಂದಿನ ನಿರುದ್ಯೋಗ ಸಮಸ್ಯೆಯ ಭೀಕರ ಪರಿಸ್ಥಿತಿಯಲ್ಲಿ ಅನಿವಾರ್ಯವಾಗಿ ತಳ್ಳಲ್ಪಟ್ಟಿದ್ದಾರೆ. ಒಂದು ಅಂದಾಜಿನ ಪ್ರಕಾರ ಚಿಲ್ಲರೆ ವ್ಯಾಪಾರದಲ್ಲಿ ಭಾಗಿಗಳಾದವರ ಸಂಖ್ಯೆ ದೇಶದಲ್ಲಿ 4 ಕೋಟಿಯಾದರೆ ಅದರ ಮೇಲೆ ಅವಲಂಬಿತರಾದವರ ಸಂಖ್ಯೆ 10 ಕೋಟಿಯಷ್ಟು.

ದೇಶದ ಕೃಷಿ ಕ್ಷೇತ್ರವನ್ನು ಬಿಟ್ಟರೆ, ಅತ್ಯಂತ ಹೆಚ್ಚು ಜನರಿಗೆ ಉದ್ಯೋಗ ಒದಗಿಸುತ್ತಿರುವ ಕ್ಷೇತ್ರ ಚಿಲ್ಲರೆ ವ್ಯಾಪಾರ. ಈ ಕ್ಷೇತ್ರಕ್ಕೆ ವಿದೇಶಿ ಕಂಪೆನಿಗಳು ಬಂದರೆ? ಈಗಾಗಲೇ ತಾಂಡವವಾಡುತ್ತಿರುವ ನಿರುದ್ಯೋಗ ಸಮಸ್ಯೆ ಇನ್ನಷ್ಟು ತೀವ್ರಗೊಳ್ಳುತ್ತದೆ.

ಅಸಂಘಟಿತ ಚಿಲ್ಲರೆ ವ್ಯಾಪಾರಸ್ಥರು

ದೇಶದ ರಾಷ್ಟ್ರೀಯ ಉತ್ಪನ್ನದ (ಜಿ.ಡಿ.ಪಿ.) ಶೇ.10-11ರಷ್ಟು ಚಿಲ್ಲರೆ ವ್ಯಾಪಾರದಿಂದ ಬರುತ್ತದೆ. ಆದರೆ ಚಿಲ್ಲರೆ ವ್ಯಾಪಾರಿಗಳಲ್ಲಿ ಶೇ.96ರಷ್ಟು ಅಸಂಘಟಿತರು. ಯಾವುದೇ ಕೆಲಸಗಾರರಿಲ್ಲದೆ ಕೇವಲ ಒಬ್ಬ ವ್ಯಕ್ತಿ ಅಥವಾ ಕುಟುಂಬ ಈ ವ್ಯವಹಾರವನ್ನು ನೋಡಿಕೊಂಡು ಬರುತ್ತಿದೆ.

ಕಳೆದ 10-12 ವರ್ಷಗಳಿಂದ ನಗರ ಪ್ರದೇಶಗಳಲ್ಲಿ ಸೂಪರ್ ಬಜಾರ್, ಡಿಪಾರ್ಟ್‌ಮೆಂಟಲ್ ಸ್ಟೋರ್ ಹೆಸರಿನಲ್ಲಿ ಚಿಲ್ಲರೆ ವ್ಯಾಪಾರವು ಸಂಘಟಿತ ರೂಪ ತಾಳುತ್ತಿದೆ. ಇವರಲ್ಲಿ ಬಂಡವಾಳ ಜಾಸ್ತಿ ಇರುವುದರಿಂದ ಸಾಲ ವ್ಯವಸ್ಥೆ, ಕ್ರೆಡಿಟ್ ಕಾರ್ಡ್, ದೂರವಾಣಿ ಮೂಲಕ ಸೇವೆ, ಮನೆ ಬಾಗಿಲಿಗೆ ಸಾಮಾನು (ಡೋರ್ ಡೆಲಿವರಿ) ಮೊದಲಾದ ವ್ಯವಸ್ಥೆಗಳನ್ನು ಸಂಘಟಿಸುವುದರ ಮೂಲಕ ಅಸಂಘಟಿತ ಸಣ್ಣ ವ್ಯಾಪಾರಸ್ಥರು ಈಗಾಗಲೇ ಮೂಲೆಗೆ ತಳ್ಳಲ್ಪಟ್ಟಿದ್ದಾರೆ. ಬಂಡವಾಳದ ಕೊರತೆಯಿಂದಾಗಿ ಮಧ್ಯಮ ಗಾತ್ರದ ಮಳಿಗೆಗಳೊಂದಿಗೆ ಸ್ಪರ್ಧೆ ಮಾಡಲು ಸಾಧ್ಯವಾಗುವುದಿಲ್ಲ. ಇನ್ನು ಮುಂದೆ ವಿದೇಶಿ ಕಂಪೆನಿಗಳು ಬಂದರೆ ಇವರ ಪರಿಸ್ಥಿತಿ ಇನ್ನಷ್ಟು ಹದಗೆಡುತ್ತದೆ.

ಬೆಂಗಳೂರಿನ ಕೆಲವು ಬಡಾವಣೆಗಳಲ್ಲಿ ಇದರ ಬಿಸಿ ಈಗಾಗಲೇ ತಟ್ಟಿದೆ. ಬೆಂಗಳೂರಿನ ಎಪಿಎಂಸಿ ಯಾರ್ಡ್ ಬಳಿಯ ಯಶವಂತಪುರದಲ್ಲಿ ವಿದೇಶಿ ಕಂಪೆನಿ ಮೆಟ್ರೊ ತನ್ನ ಮಳಿಗೆಯನ್ನು ಆರಂಭಿಸಿರುವುದರಿಂದ ಎಪಿಎಂಸಿ ಯಾರ್ಡ್‌ನಲ್ಲಿರುವ ಸಣ್ಣ, ಮಧ್ಯಮ ವ್ಯಾಪಾರಸ್ಥರಿಗೆ ಧಕ್ಕೆ ಉಂಟಾಗಿದೆ. ಆದ್ದರಿಂದ ಅವರಲ್ಲಿ ಅನೇಕರು ಬಡಾವಣೆಗಳಲ್ಲಿ ತಮ್ಮ ಮಳಿಗೆಗಳನ್ನು ಆರಂಭಿಸುತ್ತಿದ್ದಾರೆ. ಇದರಿಂದ ಬಡಾವಣೆಗಳಲ್ಲಿರುವ ಅನೇಕ ಸಣ್ಣ ವ್ಯಾಪಾರಿಗಳು ತಮ್ಮ ಅಂಗಡಿಗಳನ್ನು ಮುಚ್ಚುವ ಪರಿಸ್ಥಿತಿ ಬಂದಿದೆ.

ಅಲ್ಲದೆ, ಬಡಾವಣೆಗಳಲ್ಲಿ ಗ್ರಾಹಕರ ಗಾತ್ರವೇನೂ ತೀರಾ ಹೆಚ್ಚಿಲ್ಲ. ಆದರೆ ವ್ಯಾಪಾರಿಗಳ ಸಂಖ್ಯೆ ತೀವ್ರ ಜಾಸ್ತಿಯಾಗಿದೆ. ಒಂದೆಡೆ ಉದ್ಯೋಗ ದೊರೆಯುದೆ ಇರುವ ಸಣ್ಣ ವ್ಯಾಪಾರಸ್ಥರು. ಇನ್ನೊಂದೆಡೆ, ವಿದೇಶಿ ಕಂಪೆನಿಗಳ ಸ್ಪರ್ಧೆಯನ್ನು ಎದುರಿಸಲಾರದೆ ಬೀಡು ಬಿಟ್ಟಿರುವ ದೊಡ್ಡ ವ್ಯಾಪಾರಸ್ಥರು. ಇವರ ಮಧ್ಯೆ ಪೈಪೋಟಿ. ಗೆಲ್ಲುವವರಾರು? ಮಾರುಕಟ್ಟೆ ಚಿಕ್ಕದು. ಅದರಲ್ಲೇ ಸ್ಪರ್ಧೆ. ಬಂಡವಾಳ ಉಳ್ಳವರು, ವ್ಯವಹಾರ 'ನೈಪುಣ್ಯತೆ' ಹೊಂದಿರುವವರು ಮಾತ್ರ ಉಳಿಯುತ್ತಾರೆ. ಆ 'ನೈಪುಣ್ಯತೆ' ಏನು ಎಂದು ಮಾತ್ರ ಕೇಳಬಾರದು. ಇದರಿಂದ ಬಂಡವಾಳ ಇಲ್ಲದವರು, 'ನೈಪುಣ್ಯತೆ'ಇಲ್ಲದವರು ಬೀದಿ ಪಾಲಾಗುತ್ತಾರೆ.

1998ರಲ್ಲಿ ಪ್ರಕಟವಾದ 4ನೇ ಆರ್ಥಿಕ ಅಂಕಿ ಅಂಶಗಳ ಪ್ರಕಾರ, 1 ಕೋಟಿ 82 ಲಕ್ಷದ 7 ಸಾವಿರ (18.27 ಮಿಲಿಯ) ಘಟಕಗಳನ್ನು ಕುಟುಂಬಗಳೇ ನಡೆಸಿಕೊಂಡು ಬರುತ್ತಿರುವ ಕೃಷಿಯೇತರ ಸಂಸ್ಥೆಗಳೆಂದು ಗುರುತಿಸಲಾಗಿದೆ. ಅಂದರೆ ಈ ಘಟಕಗಳು ಯಾವುದೇ ಕೆಲಸಗಾರರನ್ನು ಹೊಂದದೆ, ಗುಡಿಕೈಗಾರಿಕೆ, ಚಿಲ್ಲರೆ ವ್ಯಾಪಾರ, ಹೋಟೇಲು, ಸಾರಿಗೆ ಮತ್ತಿತರೆ ಸೇವೆಗಳಲ್ಲಿ ತೊಡಗಿವೆ. ಇದರಲ್ಲಿ ಚಿಲ್ಲರೆ ವ್ಯಾಪಾರದ ಮೇಲೆ ಅವಲಂಬಿತರಾಗಿರುವವರ ಸಂಖ್ಯೆ ಶೇ. 45.8. ಕರ್ನಾಟಕದಲ್ಲಿ ಶೇ.36ರಷ್ಟು ಇಂತಹ ಕುಟುಂಬಗಳು ಚಿಲ್ಲರೆ ವ್ಯಾಪಾರದಲ್ಲಿ ತೊಡಗಿದ್ದರೆ, ಶೇ. 5.8ರಷ್ಟು ಹೋಟೇಲು ಮತ್ತು ಶೇ.2.3ರಷ್ಟು ಸಗಟು ವ್ಯಾಪಾರದಲ್ಲಿ ತೊಡಗಿವೆ.

ವಿವಿಧ ರಾಜ್ಯಗಳಲ್ಲಿ ಕೃಷಿಯೇತರ

ರಾಜ್ಯ	ಕೈಗಾರಿಕೆ	ಸಗಟು ವ್ಯಾಪಾರ	ಚಿಲ್ಲರೆ ವ್ಯಾಪಾರ	ಹೋಟೇಲು	ಸಾರಿಗೆ ವ್ಯಕ್ತಿಗತ ಸೇವೆ	ಸಮುದಾಯ
ಕರ್ನಾಟಕ	23.5	2.3	36	5.8	1.5	24.8
ಆಂಧ್ರ	23	2.2	37	4.3	2.5	25.1
ಅಸ್ಸಾಂ	10	3.1	46.6	5.3	3.1	28.1
ಬಿಹಾರ್	16.2	1.7	49.1	4	1.4	24.6
ಗುಜರಾತ್	17.8	3.9	40.5	2.1	5	25.2
ಕೇರಳ	17.8	3	36.3	6.5	3.7	26.7
ತಮಿಳು ನಾಡು	25.6	2.3	36.9	6.5	1.2	21.1
ಪ.ಬಂಗಾಳ	24.2	4.6	41.6	4.1	5.6	16.5

(ಮೂಲ : ಆರ್ಥಿಕ ಜನಗಣನೆ, 1998, ಸಿ.ಎಸ್.ಓ.)

ಉದ್ದಿಮೆಗಳಲ್ಲಿ ತೊಡಗಿರುವ ಶೇಕಡಾವಾರು ಕುಟುಂಬಗಳು ಮೇಲಿನಂತಿವೆ (ಈ ಕುಟುಂಬಗಳು ಯಾವುದೇ ಕೆಲಸಗಾರರನ್ನು ನೇಮಿಸಿಕೊಳ್ಳದೆ ತಾವೇ ನಡೆಸುತ್ತಿವೆ).

1998ರ ಆರ್ಥಿಕ ಜನಗಣನೆಯನ್ನು 1980ರ ಆರ್ಥಿಕ ಜನಗಣನೆಯೊಂದಿಗೆ ಪರಿಶೀಲಿಸಿದಾಗ ಕಂಡುಬರುವ ಪ್ರಮುಖ ಅಂಶವೆಂದರೆ, ಕೃಷಿಯೇತರ ಉದ್ದಿಮೆಗಳ ಪೈಕಿ ಕೈಗಾರಿಕೆಗಳಲ್ಲಿ ತೊಡಗಿರುವ ಉದ್ದಿಮೆಗಳ ಸಂಖ್ಯೆ ತೀವ್ರ ಇಳಿಮುಖವಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಅದು ಶೇ.39ರಿಂದ ಶೇ.25ಕ್ಕೆ ಇಳಿದಿದೆ. ನಗರ ಪ್ರದೇಶದಲ್ಲಿ ಶೇ.30 ರಿಂದ 17ಕ್ಕೆ ಇಳಿದಿದೆ. ಅಂದರೆ ಹಂತಹಂತವಾಗಿ ಕುಟುಂಬಗಳು ನಡೆಸುತ್ತಿದ್ದ ಗುಡಿಕೈಗಾರಿಕೆ, ಸಣ್ಣ ಕೈಗಾರಿಕೆಗಳ ಬದಲಾಗಿ ಮಧ್ಯಮ ಕೈಗಾರಿಕೆಗಳು ಬಂದು ಅವುಗಳಿಂದ ಸ್ಪರ್ಧೆಗಳನ್ನು ಎದುರಿಸಲಾಗದೆ, ಅಥವಾ ಸರ್ಕಾರದ ನೀತಿಯಿಂದಾಗಿ ಕುಟುಂಬಗಳೇ ನಡೆಸುತ್ತಿದ್ದ ಕೈಗಾರಿಕೆಗಳು ಮುಚ್ಚಿವೆ. ಇದರಿಂದ ನಿರುದ್ಯೋಗಿಗಳಾದ ದೊಡ್ಡ ವಿಭಾಗ ಚಿಲ್ಲರೆ ವ್ಯಾಪಾರದಲ್ಲಿ ತೊಡಗಿರುವುದು ಕಾಣುತ್ತದೆ.

ವಿದೇಶಿ ನೇರ ಬಂಡವಾಳ ಮತ್ತು ಉದ್ಯೋಗ

ಜರ್ಮನಿ ಮೂಲದ ಮೆಟ್ರೋ ಮಳಿಗೆ ಈಗಾಗಲೇ ಚಿಲ್ಲರೆ ವ್ಯಾಪಾರದಲ್ಲಿ ಭಾರತಕ್ಕೆ ಬಂದಿದ್ದು, ಅಮೇರಿಕಾ ಮೂಲದ ವಾಲ್ ಮಾರ್ಟ್ ಭಾರತಕ್ಕೆ ಬರಲು ಎಲ್ಲಾ ಸಿದ್ಧತೆ ನಡೆಸಿದೆ. ಎಡ ಪಕ್ಷಗಳ ತೀವ್ರ ವಿರೋಧದ ನಡುವೆಯೂ ಯುಪಿಎ ಸರಕಾರ ಮಣೆ ಹಾಕುವುದಕ್ಕೆ ಮುಂದಾಗಿದೆ. ಅಮೆರಿಕಾದ ಈ ದೈತ್ಯ ಕಂಪೆನಿ ಹೋದೆಡೆಯಲ್ಲೆಲ್ಲ ಬಡತನ ಜಾಸ್ತಿಯಾಗಿದೆ ಎಂದು ಅಮೆರಿಕಾದ ಪತ್ರಿಕೆಗಳೇ ವರದಿ ಮಾಡಿವೆ. 1962ರಲ್ಲಿ ಅಮೇರಿಕಾದ ದಕ್ಷಿಣ ಪ್ರಾಂತದ ಅರ್ಕಾನ್ಸ್ಯಾಸ್ ಎಂಬ ಸಣ್ಣ ಊರಿನಲ್ಲಿ ಆರಂಭವಾದ ವಾಲ್‌ಮಾರ್ಟ್ ಕಂಪೆನಿಯ ಸಣ್ಣ ಅಂಗಡಿ ಕೆಲವೇ ವರ್ಷಗಳಲ್ಲಿ ಬೃಹದಾಕಾರವಾಗಿ ಬೆಳೆದಿದೆ. ಈಗ ಅದು ವಿಶ್ವದ ದೊಡ್ಡ 500 ಕಂಪೆನಿಗಳಲ್ಲಿ ಮೊದಲ ಸ್ಥಾನದಲ್ಲಿದೆ. ಈ ಕಂಪೆನಿ ಇಷ್ಟು ಬೇಗನೇ ಅಷ್ಟು ದೊಡ್ಡದಾಗಿ ಬೆಳೆದುದು ಹೇಗೆ ಎಂಬುದೇ ಅನುಮಾನ ಪಡುವ ಸಂಗತಿ.

ವಾಲ್‌ಮಾರ್ಟ್ ಕಂಪೆನಿಯು 1987 ರಿಂದ 1998ರ ನಡುವೆ ಹಲವಾರು ಮಳಿಗೆಗಳನ್ನು ಅಮೇರಿಕಾದ ವಿವಿಧ ಪ್ರದೇಶಗಳಲ್ಲಿ ತೆರೆದಿತ್ತು. ಈ ಅವಧಿಯಲ್ಲಿ ಅಮೆರಿಕಾವು ಆರ್ಥಿಕವಾಗಿ ಉನ್ನತಿ ಕಂಡರೂ ಸಹ ವಾಲ್‌ಮಾರ್ಟ್ ತನ್ನ ಅಂಗಡಿಗಳನ್ನು ತೆರೆದ ಕಡೆಗಳಲ್ಲಿ ಕುಟುಂಬವಾರು ಬಡತನ ಹೆಚ್ಚಾಗಿತ್ತು. ಕೆಲವು ಕಡೆ ಬಡತನ ಕಡಿಮೆಯಾಗಿದ್ದರೂ ಸಹ ಅದು ಆರ್ಥಿಕ ಅಭಿವೃದ್ಧಿಗೆ ಅನುಗುಣವಾಗಿರಲಿಲ್ಲ.

ಇದಕ್ಕೆ ಪ್ರಮುಖ ಕಾರಣ ಚಿಲ್ಲರೆ ಉದ್ಯಮದಲ್ಲಿ ವಾಲ್‌ಮಾರ್ಟ್ ಪ್ರವೇಶ ಮಾಡಿರುವುದರಿಂದ ಕುಟುಂಬ ಆಧಾರಿತ ದಿನಸಿ ಅಂಗಡಿಗಳು ಮುಚ್ಚಲ್ಪಟ್ಟವು. ಕೆಲವು ಅಂಗಡಿಗಳಲ್ಲಿ ವ್ಯಾಪಾರ ತೀವ್ರ ಇಳಿಮುಖಗೊಂಡಿತು. 1988ರಲ್ಲಿ ಶೇಕಡ 42.8 ಗ್ರಾಹಕರು ತಮಗೆ ಬೇಕಾದ ದಿನಸಿ ವಸ್ತುಗಳನ್ನು ಖರೀದಿಸಲು ಕುಟುಂಬಗಳೇ ನಡೆಸುತ್ತಿದ್ದ ಅಂಗಡಿಗಳಿಗೆ ಹೋಗುತ್ತಿದ್ದರೆ, 1998ರಲ್ಲಿ ಅವರ ಸಂಖ್ಯೆ ಶೇ 13.4ಕ್ಕೆ ಇಳಿದಿತ್ತು. ಇದೇ ಅವಧಿಯಲ್ಲಿ ದಿನಸಿ ಅಂಗಡಿಗಳ ಸಂಖ್ಯೆ 137,854ರಿಂದ 126,546ಕ್ಕೆ ಅಂದರೆ ಶೇ.8ರಷ್ಟು ಕಡಿಮೆಯಾದವು. ಇದಲ್ಲದೆ ಬಟ್ಟೆ ಮತ್ತಿತರ ಅಂಗಡಿಗಳ ಸಂಖ್ಯೆ ತೀವ್ರವಾಗಿ ಇಳಿಮುಖವಾಗಿದ್ದು ಇದರ ಮೇಲೆ ಅವಲಂಬಿತರಾದ ಉದ್ಯೋಗಸ್ಥರು ನಿರುದ್ಯೋಗಿಗಳಾದರು. ಆದ್ದರಿಂದ ಆ ಪ್ರದೇಶದಲ್ಲಿ ಬಡತನ ಜಾಸ್ತಿ ಆಗಿತ್ತು.

ವಾಲ್‌ಮಾರ್ಟ್ ಮತ್ತು ಭಾರತದ ಚಿಲ್ಲರೆ ಉದ್ಯಮ

ಅಮೆರಿಕಾ ಕೆನಡಾದಂತಹ ಮುಂದುವರಿದ ದೇಶಗಳಲ್ಲೇ ಉದ್ಯೋಗದ ಅವಕಾಶದ ಮೇಲೆ ತೀವ್ರ ಪರಿಣಾಮ ಬೀರಿದ ವಾಲ್ ಮಾರ್ಟ್ ಭಾರತಕ್ಕೇನಾದರೂ ಬಂದರೆ ಏನಾಗಬಹುದು ಎಂದು ಊಹಿಸುವುದೇ ಕಷ್ಟ. ಉದಾಹರಣೆಗೆ ಭಾರತದಲ್ಲಿ ಚಿಲ್ಲರೆ ಉದ್ಯಮದ ಒಟ್ಟು ವಹಿವಾಟು ವರ್ಷಕ್ಕೆ 3,12,180 ಕೋಟಿ ರೂ. ಇದು ಒಟ್ಟು ಉತ್ಪನ್ನದ ಶೇಕಡಾ 10-11 ರಷ್ಟು ಎಂದು ಅಂದಾಜು ಮಾಡಲಾಗಿದೆ. ಚಿಲ್ಲರೆ ಉದ್ಯಮದಲ್ಲಿ ಭಾಗಿಯಾಗಿರುವವರ ಸಂಖ್ಯೆ ಈಗಾಗಲೇ ಹೇಳಿದಂತೆ, 4 ಕೋಟಿ ಎಂದು ಅಂದಾಜಿಸಲಾಗಿದ್ದು, ಪ್ರತಿಯೊಬ್ಬ ನೌಕರನು ವರ್ಷಕ್ಕೆ ಸರಾಸರಿ 78045 ರೂ. ವಹಿವಾಟು ಮಾಡುತ್ತಾನೆ. ಆದರೆ ವಾಲ್‌ಮಾರ್ಟ್ ಸಂಸ್ಥೆಯು ಪ್ರತಿಯೊಬ್ಬ ನೌಕರನಿಗೆ 74, 18,332 ರೂ. ವಹಿವಾಟು ಮಾಡುತ್ತದೆ. ವಾಲ್‌ಮಾರ್ಟ್‌ನ 2005ರ ವಾರ್ಷಿಕ ವರದಿಯ ಪ್ರಕಾರ ಅದರ ಒಟ್ಟು ವಹಿವಾಟು 56277 ಮಿಲಿಯ ಡಾಲರು ಅಂದರೆ 244,805 ಕೋಟಿ ರೂ. ಅದರ ವೆಬ್‌ಸೈಟಿನಲ್ಲಿ ಹೇಳಿರುವ ಪ್ರಕಾರ ಒಟ್ಟು ನೌಕರರ ಸಂಖ್ಯೆ 330,000. (244,805 ಕೋಟಿ ರೂ. / 3,30,000 ನೌಕರರು =74,18,332 ಪ್ರತಿಯೊಬ್ಬ ನೌಕರನು ನಡೆಸುತ್ತಿರುವ ವಹಿವಾಟು)

ಮೇಲೆ ವಿವರಿಸಲಾದ ಅಂಕಿ ಅಂಶಗಳ ಪ್ರಕಾರ ವಾಲ್‌ಮಾರ್ಟ್‌ನ ಪ್ರತಿಯೊಬ್ಬ ನೌಕರ, ಭಾರತದಲ್ಲಿ ಚಿಲ್ಲರೆ ವ್ಯಾಪಾರದಲ್ಲಿ ತೊಡಗಿರುವ ನೌಕರನಿಗಿಂದ 95ಪಾಲಷ್ಟು ಜಾಸ್ತಿ ವಹಿವಾಟು ನಡೆಸುತ್ತಾನೆ.

ಅಂದರೆ ಚಿಲ್ಲರೆ ವ್ಯಾಪಾರದಲ್ಲಿ ವಾಲ್‌ಮಾರ್ಟ್ ನಂತಹ ದೈತ್ಯ ಕಂಪೆನಿಗಳು ಬಂದರೆ ಈಗಾಗಲೇ ಅಪಾಯದ ಸ್ಥಿತಿಯಲ್ಲಿರುವ ಉದ್ಯೋಗದ ಪರಿಸ್ಥಿತಿ ಇನ್ನಷ್ಟು ಬಿಗಡಾಯಿಸುತ್ತದೆ.

ರೈತಾಪಿ ಜನರಿಗೂ ಧಕ್ಕೆ

ವಿದೇಶಿ ಚಿಲ್ಲರೆ ಉದ್ದಿಮೆ ಕಂಪೆನಿಗಳಿಗೆ ಅನುಕೂಲವಾಗುವಂತೆ ಎಪಿಎಂಸಿ ಕಾನೂನಿಗೆ ತಿದ್ದುಪಡಿ ತರಲು ಕೇಂದ್ರ ಸರಕಾರವು ರಾಜ್ಯ ಸರಕಾರಗಳನ್ನು ಒತ್ತಾಯಿಸುತ್ತಿರುವುದು ಈಗಾಗಲೇ ತಿಳಿದ ವಿಚಾರ. ಎಪಿಎಂಸಿ ಕಾಯಿದೆಗಳಿಗೆ ತಕ್ಷಣವೇ ತಿದ್ದುಪಡಿಗಳನ್ನು ರಾಜ್ಯ ಸರಕಾರಗಳು ತಾರದಿದ್ದಲ್ಲಿ ಅವುಗಳಿಗೆ ನೀಡಲಾಗುತ್ತಿರುವ ಅನುದಾನ, ನಿಧಿಗಳನ್ನು ನಿಲ್ಲಿಸುವುದಾಗಿ ಕೇಂದ್ರ ಸರಕಾರ ಒತ್ತಡ ಹೇರುತ್ತಿದೆ. ಈ ವಿಷಯದಲ್ಲಿ ಕಾಂಗ್ರೆ ನೇತೃತ್ವದ ಯುಪಿಎ ಸರಕಾರಕ್ಕೂ ಹಿಂದಿನ ಬಿಜೆಪಿ ನೇತೃತ್ವದ ಎನ್.ಡಿ.ಎ. ಸರಕಾರಕ್ಕೂ ಯಾವುದೇ ವ್ಯತ್ಯಾಸವಿಲ್ಲ. ಎಪಿಎಂಸಿ ಮಾದರಿ ಕಾನೂನು-2003ರ ಹೆಸರಿನಲ್ಲಿ ಕಾಯಿದೆ ತಿದ್ದುಪಡಿಗೆ ಅಂತಿಮ ರೂಪ ಕೊಟ್ಟಿದ್ದು ಎನ್.ಡಿ.ಎ. ಸರಕಾರ. 2004ರ ಚುನಾವಣೆಯಿಂದಾಗಿ ಅದಕ್ಕೆ ಜಾರಿಗೆ ತರಲು ಸಾಧ್ಯವಾಗಿರಲಿಲ್ಲ. ಇಂದಿನ ಯುಪಿಎ ಸರಕಾರ ಸಾಮಾನ್ಯ ಕನಿಷ್ಟ ಕಾರ್ಯಕ್ರಮದಲ್ಲಿ ನೀಡಿರುವ

ಕಾರ್ಲ್ ಮಾರ್ಕ್ಸ್‌ರವರು 157 ವರ್ಷಗಳ ಹಿ
'ಬಂಡವಾಳಶಾಹಿಯು ಜಗತ್ತಿನ ಮಾರುಕಟ್ಟೆ
ಸೈನಿಕರನ್ನು ಬಳಸಿ ಚೀನಾದ ಮಹಾಗೋಡೆಯ
ಎಂದು ಭವಿಷ್ಯ ನುಡಿದಿದ್ದರು. ಅಂದರೆ ದೇಶ
ಬಂಡವಾಳಶಾಹಿ ತನ್ನದೇ ನಾಗರೀಕತೆಯನ್ನು
ಅದನ್ನು ಅಭಿವೃದ್ಧಿಗೊಳಿಸಿ, 'ಸಾಮ್ರಾಜ್ಯಶಾಹಿ
ತಿಳಿಸಿದರು.

ಇದೀಗ ಸಾಮ್ರಾಜ್ಯಶಾಹಿ ಪ್ರೇರಿತ ವಿದೇಶಿ ನೇ
ಚಿಲ್ಲರೆ ಮಾರಾಟದ ಕ್ಷೇತ್ರವನ್ನು ಕಸಿಯಲು ಹ
ಮಾರುಕಟ್ಟೆಯನ್ನು ಸ್ವಾಧೀನಪಡಿಸಿ ಕೊಳ್ಳುತ್ತ
ಹೆಚ್ಚು ಉದ್ಯೋಗ ಸೃಷ್ಟಿ ಮಾಡುವ ಚಿಲ್ಲರೆ ವ
ಆದರೆ, ಈಗಾಗಲೇ ಕ್ಷೀಣಿಸುತ್ತಿರುವ ಉದ್ಯೋ
ಎಡಪಕ್ಷಗಳು ಈ ಕುರಿತು ಕೇಂದ್ರ ಸರಕಾರಕ್ಕೆ
ಕ್ಷೇತ್ರದಲ್ಲಿ ವಿದೇಶಿ ಬಂಡವಾಳವನ್ನು ವಿರೋ

...ರುವ ಕಮ್ಯುನಿಸ್ಟ್ ಪ್ರಣಾಳಿಕೆಯಲ್ಲಿ, ...ೀಷಣೆ ಮಾಡಲು ಕಡಿಮೆ ದರ ಎಂಬ ...ಬೀಳಿಸುವ ಶಕ್ತಿ ಹೊಂದಿರುತ್ತಾನೆ' ...ನಡುವಿನ ಗಡಿಯನ್ನು ದಾಟಿ ...ನೆ ಎಂದು ಹೇಳಿದ್ದರು. ಲೆನಿನ್‌ರವರು ...ಶಾಹಿಯ ಉನ್ನತಘಟ್ಟ' ಎಂದು

...ವಾಳದ ಹೆಸರಿನಲ್ಲಿ ಬರುವ ಕಂಪೆನಿಗಳು ...ಯುತ್ತಿದೆ. ಕಡಿಮೆ ದರದ ಆಸೆ ತೋರಿಸಿ, ...ದಲ್ಲಿ ಕೃಷಿ ಕ್ಷೇತ್ರವನ್ನು ಬಿಟ್ಟರೆ, ಅತ್ಯಂತ ...ಲ್ಲಿ ವಿದೇಶಿ ಕಂಪೆನಿಗಳು ಬಂದದ್ದೇ ...ಕಟ್ಟೆ ನಶಿಸಿ ಹೋಗಲಿದೆ. ...ಒಂದನ್ನು ಸಲ್ಲಿಸಿದ್ದು ಚಿಲ್ಲರೆ ಮಾರಾಟ ...ಕುರಿತು ಒಂದು ಲೇಖನ.

'ವಿದೇಶಿ ಕಂಪನಿಗಳಿಗೆ ಅನುಕೂಲವಾಗುವಂತೆ ಆದ್ದರಿಂದಲೇ ಎಪಿಎಂಸಿ ಕಾನೂನಿಗೆ ತಿದ್ದುಪಡಿ ತರುವ ರಾಜ್ಯ ಸರ್ಕಾರದ ನೀತಿಯ ವಿರುದ್ಧ ರೈತ ಸಂಘಟನೆಗಳು, ವರ್ತಕ ಸಂಘಗಳು ಹಾಗೂ ಹಮಾಲಿ ನೌಕರರ ಸಂಘಟನೆಗಳು ಜಂಟಿಯಾಗಿ ಹೋರಾಟ ನಡೆಸಿದರು. ರಾಜ್ಯದಾದ್ಯಂತ ಎಪಿಎಂಸಿ ಬಂದ್ ನಡೆಯಿತು. ಮಾತ್ರವಲ್ಲದೆ, ಸೆಪ್ಟೆಂಬರ್ 29 ರಂದು ನಡೆದ ಕಾರ್ಮಿಕ ವರ್ಗದ ನೇತೃತ್ವದ ಐತಿಹಾಸಿಕ ಮುಷ್ಕರದಲ್ಲಿ ವರ್ತಕ ಸಂಘಟನೆಗಳು ಭಾಗವಹಿಸುವುದರ ಮೂಲಕ ಸಾಮ್ರಾಜ್ಯಶಾಹಿ ಪ್ರೇರಿತ ನೀತಿಗಳ ವಿರುದ್ಧ ತಮ್ಮ ಪ್ರತಿಭಟನೆಯನ್ನು ತೋರಿಸಿದ್ದವು.

ಹಾಗೆಯೇ ತೊಗರಿ ಮಾರುಕಟ್ಟೆಗೆ ಅಮೆರಿಕಾದ ತೊಗರಿ ವ್ಯಾಪಾರಿಗಳು ಪ್ರವೇಶಿಸುವುದನ್ನು ತಡೆಗಟ್ಟಬೇಕೆಂದು ಗುಲ್ಬರ್ಗಾದಲ್ಲಿರುವ ಹೈದ್ರಾಬಾದ್ ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯು ಕೇಂದ್ರ ಸರ್ಕಾರವನ್ನು ಒತ್ತಾಯಿಸಿದೆ.

ಒಟ್ಟಾರೆಯಾಗಿ, ಇಂಗ್ಲೆಂಡಿನ ಈಸ್ಟ್ ಇಂಡಿಯಾ ಕಂಪನಿ ನಡೆಸಿದ ಕಾರಸ್ತಾನವನ್ನು ಒಂದು ಉದಾರಣೆಯನ್ನಾಗಿ ತೆಗೆದುಕೊಳ್ಳಬಹುದು.

ವಾಲ್‌ಮಾರ್ಟ್ ಕೆನಡಾದ ಒಂದು ಪ್ರದೇಶದಲ್ಲಿ ಮಳಿಗೆಯನ್ನು ಆರಂಭಿಸಿದಾಗ, ಆ ಪ್ರದೇಶದಲ್ಲಿನ ಇತರೆ ಕಾರ್ಮಿಕರು ಗಂಟೆಗೆ 21 ರಿಂದ 35 ಡಾಲರ್ ವೇತನ ಪಡೆಯುತ್ತಿದ್ದರು. ಆದರೆ ವಾಲ್‌ಮಾರ್ಟ್ ಕೇವಲ6.20 ಡಾಲರ್ ಮಾತ್ರ ವೇತನ ನೀಡುತ್ತಿತ್ತು. ಆದ್ದರಿಂದ ಅಲ್ಲಿನ ಕಾರ್ಮಿಕರು ಕೂಡಲೇ ಸಂಘಟಿತರಾಗಿ ವೇತನ ಹೆಚ್ಚಳಕ್ಕೆ ಒತ್ತಾಯಿಸಿದರು. ವಾಲ್‌ಮಾರ್ಟ್ ವೇತನ ಹೆಚ್ಚಳ ಮಾಡುವುದರ ಬದಲಾಗಿ ನಷ್ಟವಾಗುತ್ತಿದೆ ಎಂದು ಹೇಳಿ ತನ್ನ ಮಳಿಗೆಯನ್ನೇ ಮುಚ್ಚಿತು. ಕಾರ್ಮಿಕರನ್ನು ಬೀದಿ ಪಾಲು ಮಾಡಿತು. ನಂತರ ವಾಲ್‌ಮಾರ್ಟ್‌ನ ಒತ್ತಾಯಕ್ಕೆ ಮಣಿದು ಕೆನಡಾ ಸರ್ಕಾರವು ಕಾರ್ಮಿಕ ಕಾಯಿದೆಗಳಿಗೆ ತಿದ್ದುಪಡಿ ತರುವುದರ ಮೂಲಕ ಕಾರ್ಮಿಕರಿಗೆ ಸಂಘಟನೆಯ ಹಕ್ಕನ್ನು ತಿರಸ್ಕರಿಸಿದೆ.

2005 ರ ಮೇ 19 ರಂದು ಕೆನಡಾ ದೇಶದ ಪ್ರಮುಖ ನಗರಗಳಲ್ಲೊಂದಾದ 'ಒಂಟೇರಿಯೊ'ದ 'ರಾಷ್ಟ್ರೀಯ ಸಾರ್ವಜನಿಕ ಮತ್ತು ಸಾಮಾನ್ಯ ಕಾರ್ಮಿಕ ಸಂಘ'ಗಳ ಅಧ್ಯಕ್ಷರು ಕೆನಡಾದ ಪ್ರಧಾನಮಂತ್ರಿಯವರಿಗೆ ಬರೆದ ಪತ್ರದಲ್ಲಿ "ಒಂಟೇರಿಯೊದ ಕಾರ್ಮಿಕ ಕಾಯ್ದೆಗಳನ್ನು ತನ್ನ ಅನುಕೂಲಕ್ಕೆ ತಕ್ಕಂತೆ ತಿರುಚಲು ವಾಲ್‌ಮಾರ್ಟ್ ಪ್ರಯೋಗಿಸಿದ ಪ್ರಭಾವವ ಕೆನಡಾ ಜನತೆಗೆ ಮಾಡಿದ ಅನ್ಯಾಯ" ಎಂದು ಹೇಳಿರುವುದಲ್ಲದೆ, 'ಕಾರ್ಮಿಕರ ಹಕ್ಕುಗಳನ್ನು ಸಾರಾಸಗಟಾಗಿ ತಿರಸ್ಕರಿಸಲು ಮಾಜಿ ಪ್ರಧಾನಮಂತ್ರಿಯವರ ಕಛೇರಿ ಮತ್ತು ವಾಲ್‌ಮಾರ್ಟ್ ನಡುವಣ ಹಾಸುಹೊಕ್ಕಾಗಿರುವ ಸಂಬಂಧವೇ ಕಾರಣ" ಎಂದು ಆಪಾದಿಸಿದೆ.

...ಕಂಪನಿಗಳ ಲಗ್ಗೆ

ಬಾಲಕೃಷ್ಣ ಶೆಟ್ಟಿ

...ವ್ಯವಸ್ಥೆಯನ್ನು ಗೌಣಗೊಳಿಸಿ ತಿದ್ದುಪಡಿಯನ್ನು ...ಜಾರಿಗೊಳಿಸಲು ರಾಜ್ಯ ಸರಕಾರಗಳಿಗೆ ಒತ್ತಾಯಿಸುತ್ತಿದೆ.

ಒಂದು ವೇಳೆ ಈ ತಿದ್ದುಪಡಿಗಳು ಜಾರಿಯಾದಲ್ಲಿ, ಎಪಿಎಂಸಿಗಳಲ್ಲಿ ಚುನಾಯಿತ ಪ್ರತಿನಿಧಿಗಳಿಗೆ ಬದಲಾಗಿ, ಸರಕಾರವೇ ನೇಮಿಸುವ ಪ್ರತಿನಿಧಿಗಳಿರುತ್ತಾರೆ. ರೈತರು ಎಪಿಎಂಸಿಗೆ ಬೆಳೆಗಳನ್ನು ತರುವ ಬದಲಾಗಿ, ಚಿಲ್ಲರೆ ಮಾರಾಟವನ್ನು ಪ್ರವೇಶಿಸುವ ದೊಡ್ಡ ಕಂಪೆನಿಗಳು, ಬಹುರಾಷ್ಟ್ರೀಯ ಕಂಪೆನಿಗಳು 'ಖಾಸಗಿ ಮಾರುಕಟ್ಟೆ'ಯ ಹೆಸರಿನಲ್ಲಿ ನೇರವಾಗಿ ರೈತರಿಂದ ಖರೀದಿಸ ಬಹುದಾಗಿದೆ. ತಮ್ಮ ಬಂಡವಾಳದ ಶಕ್ತಿಯಿಂದ ಮೊದಮೊದಲು ಒಳ್ಳೆಯ ದರಗಳನ್ನು ನೀಡಬಹುದಾದ ಕಂಪನಿಗಳು, ಸಣ್ಣ ವ್ಯಾಪಾರಸ್ಥರನ್ನು ಮೂಲೆಗೆ ತಳ್ಳಿದ ನಂತರ ಏಕಸ್ವಾಮ್ಯತೆಯನ್ನು ಪಡೆದು ತಮಗೆ ಇಷ್ಟಬಂದಂತೆ ಖರೀದಿ ನಡೆಸಲು ಮುಂದಾಗುತ್ತಾರೆ. ಇದರಿಂದ ರೈತರು ವಿದೇಶಿ ಕಂಪೆನಿಗಳ ತಾಳಕ್ಕೆ ಕುಣಿಯಬೇಕಾಗುತ್ತದೆ.

ಇದಲ್ಲದೆ, 'ಕಾಂಟ್ರಾಕ್ಟ್ ಬೇಸಾಯ' ಪದ್ಧತಿಯ ಅಡಿಯಲ್ಲಿ ರೈತರಿಗೆ ಕಾಂಟ್ರಾಕ್ಟ್ ಅವಧಿಯಲ್ಲಿ ...ನಿಗದಿತ ಬೆಲೆ ಸಿಗಬಹುದಾದರೂ ಈ ಕಾಂಟ್ರಾಕ್ಟ್‌ನ ನಿಯಮಗಳು ಹೆಚ್ಚಾಗಿ ಬಲಾಢ್ಯರಾದ ವಿದೇಶಿ ಕಂಪನಿಗಳ ಪರವಾಗಿಯೇ ಇರುತ್ತದೆ. ಮಾತ್ರವಲ್ಲದೆ, ರೈತರು ವಿದೇಶಿ ಕಂಪನಿಗಳು ಹೇಳಿದಂತೆ ಬೆಳೆಯನ್ನು ಬೆಳೆಯಬೇಕಾಗಿರುವುದರಿಂದ ಭಾರತಕ್ಕೆ ಅಥವಾ ಸ್ಥಳೀಯ ಜನರಿಗೆ ಅಗತ್ಯವಾದ ಬೆಳೆಯನ್ನು ಬೆಳೆಯುವುದರ ಬದಲಾಗಿ ವಾಣಿಜ್ಯ ಬೆಳೆಗಳಿಗೇ ಹೆಚ್ಚು ಒತ್ತು ಕೊಡುತ್ತಾರೆ. ಇದರಿಂದ ದೇಶದ ಆಹಾರ ಸುಭದ್ರತೆಗೂ ಧಕ್ಕೆ ಉಂಟಾಗಲಿದೆ.

ಸ್ಥಳೀಯ ವ್ಯಾಪಾರಿಗಳು ನಾಶ

ಹೀಗೆ ಬಹುರಾಷ್ಟ್ರೀಯ ಕಂಪನಿಗಳು ಅಥವಾ ದೇಶದೊಳಗಿನ ದೊಡ್ಡ ಕಂಪನಿಗಳು ಖಾಸಗಿ ಮಾರುಕಟ್ಟೆ ಅಥವಾ ಕಾಂಟ್ರಾಕ್ಟ್ ಬೇಸಾಯ ಪದ್ಧತಿಯಲ್ಲಿ ರೈತರಿಂದ ನೇರವಾಗಿ ಖರೀದಿ ಮಾಡುವುದರಿಂದ, ಬಲಾಢ್ಯ ಕಂಪನಿಗಳ ಚಕ್ರವ್ಯೂಹದಲ್ಲಿ ಸಿಲುಕಿಬೀಳುವ ರೈತರಿಗೂ, ಸ್ಥಳೀಯ ವ್ಯಾಪಾರಸ್ಥರಿಗೂ ಯಾವುದೇ ಸಂಪರ್ಕವಿಲ್ಲದಂತಾಗುತ್ತದೆ. ಸ್ಥಳೀಯವ್ಯಾಪಾರಸ್ಥರು ಕ್ರಮೇಣ ಮುಚ್ಚಬೇಕಾಗುತ್ತದೆ. ಅವರ ...ವ್ಯವಹಾರಕ್ಕೂ ಕೊಡಲಿಯೇಟು ಗ್ಯಾರಂಟಿ.

...ಹೆಚ್ಚುತ್ತಿರುವ ಪ್ರತಿಭಟನೆಗಳು

ಕಂಪನಿಯು ವ್ಯಾಪಾರಕ್ಕೆಂದು ಭಾರತಕ್ಕೆ ಪ್ರವೇಶಿಸಿ, ಆರ್ಥಿಕ ಶೋಷಣೆಯನ್ನು ಮಾಡುತ್ತಾ ರಾಜಕೀಯ ಸ್ವಾತಂತ್ರ್ಯವನ್ನು ಹರಣ ಮಾಡಿದುದನ್ನು ಈ ವ್ಯಾಪಾರಿ ಸಂಘಟನೆಗಳು ಸರ್ಕಾರಗಳನ್ನು ನೆನಪಿಸುತ್ತಿವೆ.

ಹಾಗೆಯೇ, ಈ ಸಂದರ್ಭದಲ್ಲಿ ಎಡಪಕ್ಷಗಳು ಮಾತ್ರವೇ ನಮ್ಮ ಹೋಣೆಗೆ ಮುಂದಾಗಿವೆ ಎಂದು ಈ ಸಂಘಟನೆಗಳ ಹಲವಾರು ಮುಖಂಡರು ಹೇಳುತ್ತಿದ್ದಾರೆ.

ಕಾರ್ಮಿಕ ಕಾನೂನುಗಳಿಗೆ ರಕ್ಷಣೆ ಇಲ್ಲ

ಬಹುರಾಷ್ಟ್ರೀಯ ಕಂಪನಿಗಳು ಬಂದವೆಂದರೆ ಕಾರ್ಮಿಕ ಕಾನೂನುಗಳಿಗೆ ರಕ್ಷಣೆ ಇಲ್ಲವೆಂದೇ ಹೇಳಬೇಕು. ಹರ್ಯಾಣದಲ್ಲಿರುವ ಜಪಾನ್ ಮೂಲದ ಹೊಂಡಾ ಕಂಪನಿ ಮತ್ತು ಅಲ್ಲಿನ ಸರ್ಕಾರದೊಂದಿಗೆ ಸೇರಿ ನಡೆಸಿದ ಪೈಶಾಚಿಕ ಕೃತ್ಯ, ಬೆಂಗಳೂರು ಸಮೀಪದ ಬಿಡದಿಯಲ್ಲಿರುವ ಟಯೋಟಾ ಕಿರ್ಲೋಸ್ಕರ್, ಕಾರ್ಮಿಕ ಹಕ್ಕುಗಳನ್ನು ನಿರಾಕರಿಸಿರುವುದು ತಿಳಿದಿರುವ ಸಂಗತಿ. ಅವುಗಳು ಸರ್ಕಾರದ ಮೇಲೆ ಪ್ರಭಾವ ಬೀರುವಷ್ಟು ಶಕ್ತಿ ಉಳ್ಳವುಗಳಾಗಿವೆ. ಆದ್ದರಿಂದಲೇ ಕರ್ನಾಟಕ ಸರ್ಕಾರವು ಕಾರು ತಯಾರಿಸುವ ಟಯೋಟ ಕಿರ್ಲೋಸ್ಕರ್ ಕಂಪನಿಯನ್ನು 'ಅಗತ್ಯ ಸೇವೆ' ಎಂದು ಘೋಷಿಸಿದೆ. ಆಶ್ಚರ್ಯವೆಂದರೆ, ಕರ್ನಾಟಕ ಉಚ್ಚ ನ್ಯಾಯಾಲಯವೂ ಕೂಡಾ ಅದನ್ನು ಎತ್ತಿಹಿಡಿದಿದೆ.

ಇಂತಹ ಹಿನ್ನೆಲೆಯಲ್ಲಿ, ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ಕಂಪನಿಗಳು ಬಂದರೆ, ಕಾರ್ಮಿಕ ಕಾನೂನುಗಳು ಏನಾಗಬೇಕು? ಅದರಲ್ಲೂ ವಾಲ್‌ಮಾರ್ಟ್ ಕಂಪನಿಯು ಕಾರ್ಮಿಕ ಕಾನೂನನ್ನು ಧೂಳೀಪಟ ಮಾಡುವುದಕ್ಕೆ ಹೆಸರುವಾಸಿಯಾಗಿದೆ. ಸಂಘಟನೆಯಲ್ಲಿ ತೊಡಗಿರುವ ಕಾರ್ಮಿಕರನ್ನು ಕಾನೂನುಬಾಹಿರವಾಗಿ ವಜಾ ಮಾಡುವುದು ಮಾತ್ರವಲ್ಲದೆ, ಕಾರ್ಮಿಕರ ವಿರುದ್ಧ ಗೂಢಚಾರಿಕೆ, ಗೂಂಡಾಗಿರಿಯನ್ನು ಮಾಡಿದ ಅನೇಕ ಘಟನೆಗಳು ನಡೆದಿವೆ.

ಈ ಕಂಪನಿಯು ಮಳಿಗೆಯನ್ನು ಆರಂಭಿಸಿದಾಗ, ಗ್ರಾಹಕರನ್ನು ಆಕರ್ಷಿಸಲು ಮಾರುಕಟ್ಟೆಯನ್ನು ಸ್ವಾಧೀನಪಡಿಸಿಕೊಳ್ಳಲು ದರ ಕಡಿಮೆ ಮಾಡುವುದು ಇದರ ಪ್ರಮುಖ ಕಾರ್ಯತಂತ್ರ. ವಸ್ತುಗಳ ಮೇಲಿನ ದರ ಕಡಿಮೆ ಮಾಡುವುಕ್ಕೋಸ್ಕರ ಕಾರ್ಮಿಕರ ವೇತನವನ್ನೇ ಕಡಿತಗೊಳಿಸುತ್ತದೆ. ಕೆನಡಾದಲ್ಲಿ ಈ



ಇಂತಹ ಕುಖ್ಯಾತ ಕಂಪನಿಗಳು ಚಿಲ್ಲರೆ ಮಾರಾಟ ವಲಯದಲ್ಲಿ ಪ್ರವೇಶಿಸಿದರೆ ಭಾರತದ ಆರ್ಥಿಕ ವಲಯಕ್ಕೆ ಖಂಡಿತಾ ಲಾಭವಿಲ್ಲ. ಬದಲಾಗಿ ಉದ್ಯೋಗ ನಷ್ಟವೇ ಜಾಸ್ತಿ. ಇದನ್ನು ಕೇಂದ್ರ ಸರ್ಕಾರ ಗಮನಿಸುವುದು ಒಳ್ಳೆಯದು. ಇಲ್ಲವಾದಲ್ಲಿ ಕೇಂದ್ರ ಸರ್ಕಾರದ ಮೇಲೆ ತೀವ್ರ ಒತ್ತಡ ತರುವುದು ಅಗತ್ಯವಿದೆ.

ವಿದೇಶಿ ಬಂಡವಾಳಕ್ಕೆ ವಿರೋಧ ಏಕೆ?

ಮೂಲಭೂತ ಸೌಕರ್ಯಗಳನ್ನು ಹೆಚ್ಚಿಸಲು, ವಿಜ್ಞಾನ ಮತ್ತು ತಂತ್ರಜ್ಞಾನದ ಪ್ರಗತಿಯನ್ನು ಅಳವಡಿಸಿಕೊಳ್ಳಲು ಅನುಕೂಲವಾಗುವಂತೆ ವಿದೇಶಿ ಬಂಡವಾಳ ಬರುವುದಿದ್ದರೆ ಅದನ್ನು ಒಪ್ಪಬಹುದು. ಆದರೆ ಚಿಲ್ಲರೆ ಮಾರಾಟ ಕ್ಷೇತ್ರದಲ್ಲಿ ಯಾವ ತಂತ್ರಜ್ಞಾನದ ಅಗತ್ಯವಿದೆ? ಇಲ್ಲಿ ಮೂಲಭೂತ ಸೌಕರ್ಯಗಳನ್ನು ನಿರ್ಮಿಸುವ ಪ್ರಶ್ನೆಯೇ ಇರುವುದಿಲ್ಲ.

ಬದಲಾಗಿ ಅಸಂಖ್ಯಾತ ಉದ್ಯೋಗದ ಅವಕಾಶಗಳನ್ನು ನಾಶ ಮಾಡುತ್ತದೆ. ಕಡಿಮೆ ದರದಲ್ಲಿ ಮಾರಾಟ ಮಾಡುವ ಸ್ಪರ್ಧೆಯನ್ನು ನಡೆಸುವುದಕ್ಕಾಗಿ, ಜಗತ್ತಿನಾದ್ಯಂತ ಇರುವ ತನ್ನ ಮಳಿಗೆಗಳ ಮೂಲಕ ಕಡಿಮೆ ದರದ ವಸ್ತುಗಳನ್ನು ಭಾರತಕ್ಕೆ ತರುತ್ತದೆ. ಇದರಿಂದ ಇಲ್ಲಿನ ಉತ್ಪಾದನೆಗಳಿಗೆ ತೀವ್ರ ಹೊಡೆತ ಬೀಳುತ್ತದೆ.

ಭಾರತದಲ್ಲಿ ಕಡಿಮೆ ದರದಲ್ಲಿ ದೊರೆಯುವ

ಪುಟ 12 ಕ್ಕೆ

ವಾಲ್‌ಮಾರ್ಟ್ ಮತ್ತು ಅದರ ಬಾಲಬಡುಕರು

ವಾಲ್‌ಮಾರ್ಟ್ ಭಾರತ ದೇಶಕ್ಕೆ ಕಾಲಿಡುವ ಮೊದಲೇ ಸರಕಾರದ ಮೇಲೆ ಪ್ರಭಾವ ಬೀರುತ್ತಿರುವುದು ಮಾತ್ರವಲ್ಲದೆ ಜನಾಭಿಪ್ರಾಯವನ್ನು ರೂಪಿಸಲು ತೊಡಗಿದೆ. ಈ ವರ್ಷದ ಮೇ ತಿಂಗಳಲ್ಲಿ ವಾಲ್‌ಮಾರ್ಟ್ ಅಧ್ಯಕ್ಷ ಜಾನ್ ಮೆನ್ಜರ್ ಭಾರತಕ್ಕೆ ಭೇಟಿ ನೀಡಿದ್ದು, ಅದಕ್ಕೆ ಮೊದಲೇ ಅಮೇರಿಕದ ರಾಯಭಾರಿ ಡೇವಿಡ್ ಮುಲ್ಫೋರ್ಡ್ ಭಾರತದ ಪ್ರಧಾನಿ, ಹಣಕಾಸು ಸಚಿವ ಮತ್ತು ವಾಣಿಜ್ಯ ಸಚಿವರನ್ನು ಭೇಟಿಯಾಗಿದ್ದರು. ಆ ಸಂದರ್ಭಧಲ್ಲಿ, ಅಂದರೆ ವಾಲ್‌ಮಾರ್ಟ್ ಅಧ್ಯಕ್ಷರ ಭೇಟಿಗೆ ಮೊದಲೇ ಸರಕಾರವು ಚಿಲ್ಲರೆ ಮಾರುಕಟ್ಟೆಯನ್ನು ವಿದೇಶಿ ಬಂಡವಾಳಕ್ಕೆ ತೆರೆದಿಡುವ ಇಂಗಿತವನ್ನು ಘೋಷಿಸಿತ್ತು.

ಇದೇ ಸಂದರ್ಭದಲ್ಲಿ ವಾಲ್‌ಮಾರ್ಟ್, ದೇಶೀಯ ಕಂಪನಿಯೊಂದನ್ನು ಪಾಲುದಾರನನ್ನಾಗಿ ತೆಗೆದುಕೊಳ್ಳಲು ಯೋಚಿಸುತ್ತಿದೆ. ಅನಿಲ್ ಅಂಬಾನಿ, ಮಹೇಂದ್ರ ಗುಂಪು ಅಥವಾ ಗೋದ್ರೇಜ್ ಕಂಪನಿ ಇತ್ಯಾದಿ ಕಂಪನಿಗಳಲ್ಲಿ ಯಾವುದಾದರೂ ಒಂದನ್ನು ಪಾಲುದಾರರನ್ನಾಗಿ ಆಯ್ಕೆ ಮಾಡಿಕೊಳ್ಳಲು ಹಾತೊರೆಯುತ್ತಿದೆ.

ಅಲ್ಲದೆ ಪತ್ರಿಕೆಗಳ ಮೂಲಕವೂ ವಾಲ್‌ಮಾರ್ಟ್ ಕಂಪನಿಯ ಪರವಾಗಿ ಪ್ರಚಾರ ನಡೆಸ ಲಾಗುತ್ತಿದೆ. ವಿಜಯಕರ್ನಾಟಕ ಪತ್ರಿಕೆ 'ವಾಲ್‌ಮಾರ್ಟ್ ಬರುತ್ತಿದೆ ದಾರಿಬಿಡಿ' ಎನ್ನುವ ಶೀರ್ಷಿಕೆಯಡಿಯಲ್ಲಿ ನವೆಂಬರ್ 15ರ ತನ್ನ ಮಧ್ಯಪುಟದ ಲೇಖನದಲ್ಲಿ, "ವಾಲ್ ಮಾರ್ಟ್‌ನಲ್ಲಿ ಶಾಪಿಂಗ್ ಮಾಡುವುದೇ ಒಂದು ಅನನ್ಯ ಅನುಭವ" ಎಂದು ಹೇಳಿದೆ. ಕೇವಲ ಮೇಲ್ ಮಧ್ಯಮ ವರ್ಗದವರು ಮತ್ತು ಶ್ರೀಮಂತರು ಮಾತ್ರ ಈ ಅನುಭವವನ್ನು ಪಡೆದುಕೊಳ್ಳಬಹುದು ಎಂಬುದನ್ನು ಈ ಲೇಖನ ಮರೆತಿರುವುದು ಮಾತ್ರವಲ್ಲದೆ ಇದರ ಪರಿಣಾಮ ಉಳಿದ ಚಿಲ್ಲರೆ ವ್ಯಾಪಾರಸ್ಥರು ಹಾಗೂ ರೈತರ ಮೇಲೆ, ಆ ಮೂಲಕ ದೇಶದ ಆರ್ಥಿಕತೆಯ ಮೇಲೆ ಆಗುತ್ತಿದೆ ಎಂಬುದನ್ನು ಮರೆತಿದೆ.

ವಾಣಿಜ್ಯ ತೆರಿಗೆ ಅಧಿಕಾರಿಯಾಗಿರುವ ಕೆ.ಕೆ.ಪೂರ್ಣೇಶ್‌ರವರು ಈ ಲೇಖನವನ್ನು ಬರೆದಿದ್ದು, ಉದ್ದೇಶವೇನೆಂದು ತಿಳಿಯಲಿಲ್ಲ. ಬಹುಶ: ಹಲವಾರು ಚಿಲ್ಲರೆ ಅಂಗಡಿಗಳಿಗೆ ತಿರುಗುವ ಬದಲು ಕಂಪನಿಯ ಒಂದೆರಡು ಅಂಗಡಿಗೆ ಭೇಟಿ ನೀಡಿದರೆ ಸಾಕೆಂಬುದು ಅದರ ಉದ್ದೇಶವೇ? ಇಂತಹ ಏಜೆಂಟರು ಬ್ರಿಟೀಷರ ಈಸ್ಟ್ ಇಂಡಿಯಾ ಕಂಪನಿ ಬಂದಾಗಲೂ ಇದ್ದರು.

ಲೇಖಕರು ನೇರವಾಗಿ ಎಡ ಪಂಥೀಯರನ್ನು ದೂಷಿಸಿದ್ದಾರೆ. ಕಾರ್ಮಿಕರ ಮತ್ತು ಸಣ್ಣ ವರ್ತಕರ ಬಗೆಗೆ ಎಡಪಂಥೀಯರಿಗಿರುವ ಕಾಳಜಿ ಗ್ರಾಹಕರ ಬಗೆಗೆ ಏಕಿಲ್ಲ? ಎಂದು ಪ್ರಶ್ನಿಸಿದ್ದಾರೆ. ಅವರು ಹೇಳುವಂತೆ 'ಕೋಟ್ಯಾಂತರ ಗ್ರಾಹಕರಿಗೆ' ಅನುಕೂಲವಾಗು ವುದು ಶುದ್ಧ ಸುಳ್ಳು. ಬದಲಾಗಿ ಕೆಲವೇ ಕೆಲವು ಶ್ರೀಮಂತ ಗ್ರಾಹಕರಿಗೆ ಅನುಕೂಲವಾಗುತ್ತದೆ. ಕೋಟ್ಯಾಂತರ ಚಿಲ್ಲರೆ ವ್ಯಾಪಾರಸ್ಥರು, ರೈತರು ನಾಶವಾಗುತ್ತಾರೆ. ಆದ್ದರಿಂದಲೇ ಎಡಪಂಥೀಯರು ವಿರೋಧಿಸುತ್ತಿದ್ದಾರೆ ಎಂಬುದನ್ನು ಲೇಖಕರು ಮತ್ತು ಅದನ್ನು ಪ್ರಕಟಿಸಿದ ವಿಜಯ ಕರ್ನಾಟಕ ಅರಿಯಬೇಕು.

ಅಂಗನವಾಡಿ ನೌಕರರ ಸಮ್ಮೇಳನ

ಚಳುವಳಿಯ ಅನುಭವಗಳ ಮಥನ

ಕಳೆದ ವಾರ ಬೆಂಗಳೂರಿನಲ್ಲಿ ನಡೆದ ಅಂಗನವಾಡಿ ನೌಕರರ ಅಖಿಲ ಭಾರತ ಸಮ್ಮೇಳನದ ಉದ್ಘಾಟನೆ, ಬಹಿರಂಗ ಸಭೆ ಹಾಗೂ ವಿಚಾರಸಂಕಿರಣದ ವರದಿಗಳನ್ನು ನೋಡಿರುವಿರಿ. 20 ರಾಜ್ಯಗಳಿಂದ ಬಂದ 561 ಪ್ರತಿನಿಧಿಗಳ ಪರವಾಗಿ 36 ಮಂದಿ ಭಾಗವಹಿಸಿದ ಚರ್ಚೆಯ, ನಿವೇದಿಸಿದ ಅನುಭವಗಳ ಒಂದು ಇಣುಕು ನೋಟ ಹಾಗೂ ಈ ಸಮ್ಮೇಳನದ ಅವಧಿಯಲ್ಲಿ ನಡೆದ ಸಾಂಸ್ಕೃತಿಕ ಚಟುವಟಿಕೆಗಳ ಒಂದು ವರದಿ ಇಲ್ಲಿದೆ.

ಅಧಿಕಾರ ಮಹಿಳೆಯರದ್ದೇ, ಆದರೆ ಶೋಷಣೆ ಮಾತ್ರ ತಪ್ಪಿಲ್ಲ

ರಾಜಸ್ಥಾನದಲ್ಲಿ ಮುಖ್ಯಮಂತ್ರಿ, ರಾಜ್ಯಪಾಲರು ಹಾಗೂ ಅಸೆಂಬ್ಲಿ ಸ್ಪೀಕರ್ ಎಲ್ಲಾ ಮಹಿಳೆಯರೇ. ಆದ್ರೆ ಮಹಿಳೆಯರ ಮೇಲಿನ ದೌರ್ಜನ್ಯ, ಲೈಂಗಿಕ ಕಿರುಕುಳ ಮಾತ್ರ ದಿನೇ ದಿನೇ ಹೆಚ್ಚುತ್ತಿರುವುದು ಆತಂಕದ ವಿಷಯ. ಜಾತೀಯತೆ, ಪರ್ದಾ ಪದ್ಧತಿ ಜೀವಂತವಾಗಿರುವ ಇಲ್ಲಿ ಅರೆ ಪಾಳೆಗಾರಿ ಭೂಮಾಲಕರಿಂದ ಸಮಾಜದಲ್ಲಿ ಉಸಿರುಗಟ್ಟುವ ವಾತಾವರಣವಿದೆ. ಪಂಚಾಯ್ತಿ ಅಧೀನದಲ್ಲಿ ಅಂಗನವಾಡಿ ನೌಕರರಿದ್ದರಿಂದ ಗೌರವಧನ ಬಹಳಷ್ಟು ತಿಂಗಳಿಂದ ಬಂದೇ ಇಲ್ಲ. ಈ ಕುರಿತು ಸರ್ಕಾರ ಮೌನ ತಾಳಿದೆ ಒಂದೇ ಮನೆಯ 2 ಜನ ಅಂಗನವಾಡಿ ಕೆಲಸ ಮಾಡುವಂತಿಲ್ಲ ಎಂದು ರಾಜಸ್ಥಾನದ ಪ್ರತಿನಿಧಿ ಕಾ.ಹಜಾರಿಲಾಲ್ ಹೇಳುತ್ತಾರೆ. ಶಿಕಾರ, ಅಲ್ವರ, ಜೋಧಪುರದಲ್ಲಿ ಮತ್ತು ನಮ್ಮ ಸಂಘವಿದೆ.

ಕಾಂ.ವೀರೇಂದ್ರ ಸಿಂಗ್ ಮಲಿಕ ತಮ್ಮ ರಾಜ್ಯದ ಪರಿಸ್ಥಿತಿ ಹೇಳುವುದು ಹೀಗೆ... ಹದಿನೈದು ವರ್ಷಗಳ ಹಿಂದೆ ಸಿಐಟಿಯುನ ಯೋಜಿತ ಕೆಲಸದಿಂದಾಗಿ ಹರ್ಯಾಣದಲ್ಲಿ 15 ಜಿಲ್ಲೆಗಳಲ್ಲಿ ನಮ್ಮ ಸಂಘ ವ್ಯಾಪಕ ಪ್ರಭಾವ ಹೊಂದಿದೆ. ಸ್ಥಳೀಯವಾಗಿ ಅಂಗನವಾಡಿ ನೌಕರರು ಚಳುವಳಿಯಲ್ಲಿ ದೊಡ್ಡ ಪ್ರಮಾಣದಲ್ಲಿ ಭಾಗವಹಿಸುತ್ತಾರೆ. ಕಳಪೆ ಪೂರಕ ಪೌಷ್ಟಿಕ ಆಹಾರದ ಪೂರೈಕೆ ಮತ್ತು ಭ್ರಷ್ಟಾಚಾರ ತಾಂಡವವಾಡುತ್ತಿದೆ. ಬ್ಲಾಕ್ ಡೆವಲಪ್‌ಮೆಂಟ್ ಮತ್ತು ಪಂಚಾಯತ್ ಅಧಿಕಾರಿಯೇ ಲೈಂಗಿಕ ಕಿರುಕುಳ ನೀಡಿದ ದುರ್ಘಟನೆ ವಿರುದ್ಧ ಆತನ ಅಮಾನತ್ತಿಗಾಗಿ 40 ದಿನಗಳಿಂದ ವ್ಯಾಪಕ ಹೋರಾಟ ನಡೆಯುತ್ತಿದೆ.

ನಮಗೆ ನಿವೃತ್ತಿ ವೇತನ ಬಂತು! ಆದರೆ?


ಮಹಾರಾಷ್ಟ್ರದಲ್ಲಿ 370 ಅಂಗನವಾಡಿ ಪ್ರಾಜೆಕ್ಟ್‌ಗಳಲ್ಲಿ 1 ಲಕ್ಷ 30 ಸಾವಿರ ನೌಕರರು ಕೆಲಸ ನಿರ್ವಹಿಸುತ್ತಿದ್ದಾರೆ. ಐಸಿಡಿಎಸ್ ಕೆಲಸದ ಜೊತೆಗೆ ಮಹಿಳಾ ಮಂಡಳ, ಎಸ್‌ಹೆಚ್‌ಜಿ ರಚನೆ, ಗ್ರಾಮಸಭೆ ನಡೆಸಲು ಸಹಕರಿಸುವ ಇತ್ಯಾದಿ ಹೆಚ್ಚುವರಿ ಕೆಲಸಗಳನ್ನು ನಿರ್ವಹಿಸುತ್ತಾರೆ ಮತ್ತು 1 ತಾಸು ಹೆಚ್ಚುವರಿ ಕೆಲಸ. ಇತ್ತೀಚಿನ 3 ವರ್ಷಗಳ ಹೋರಾಟದಿಂದ ಸರ್ಕಾರ ಒಂದು ಪೆನ್ಷನ್ ಕಮಿಟಿ ಮಾಡಿ ಚರ್ಚಿಸಿ ವೇತನಸಹಿತ ನಿವೃತ್ತಿ ನೀಡಬೇಕು. 20 ವರ್ಷಗಳ ಸೇವೆಯ ನಂತರ ನಿವೃತ್ತರಾದಾಗ ಕಾರ್ಯಕರ್ತೆಯರಿಗೆ 1000, ಸಹಾಯಕಿಗೆ 500 ರೂ ನಿಗದಿಪಡಿಸಿತು. ಆದರೆ ಕಾರ್ಯಕರ್ತೆಯರಿಂದ 100 ಸಹಾಯಕಿಯರಿಂದ 50 ರೂ ಕಡಿತಕ್ಕೆ ಆದೇಶಿಸಿದ್ದರಿಂದ ಇದರ ವಿರುದ್ಧ ಹೋರಾಟ ಮತ್ತೆ ಸಾಗಿದೆ. ಈಗ ಸರ್ಕಾರವೇ 200 +100ರಂತೆ ಹೆಚ್ಚಿಸಿ ಇದರಲ್ಲಿ ಕಡಿತ ಮಾಡಲು ಸೂಚಿಸಿದೆ. ಹಾಗಾಗಿ ಈ ಚಳಿಗಾಲದ ಅಧಿವೇಶನದಲ್ಲಿ ರ‍್ಯಾಲಿ ನಡೆಸಲು ಬಜೆಟ್ ಅಧಿವೇಶನದಲ್ಲಿ ಧರಣಿ ನಡೆಸಲು ತೀರ್ಮಾನಿಸಲಾಗಿದೆ ಎಂದು ಶುಭಾಶಮೀಮ್ ತಿಳಿಸಿದರು.

ಕೈ ಕತ್ತರಿಸಿದ ಗೂಂಡಾಗಳು

ಬಾಲ್ಯವಿವಾಹ ತಡೆಗಟ್ಟುವುದು, ವೈಜ್ಞಾನಿಕ ಅರಿವು ಮೂಡಿಸಿ ಸಮಾಜ ಸುಧಾರಣೆಯ ಪ್ರಕ್ರಿಯೆಯಲ್ಲಿ ಭಾಗವಹಿಸುವುದು ನಮ್ಮ ಕರ್ತವ್ಯ. ಆದರೆ ಮಧ್ಯಪ್ರದೇಶದಲ್ಲಿ ಶಕುಂತಲಾ ವರ್ಮಾ ಬಾಲ್ಯವಿವಾಹ ನಿಲ್ಲಿಸಲು ಸ್ಥಳಕ್ಕೆ ಹೋದಾಗ ಅಲ್ಲಿ ನೆರೆದ ಭೂಮಾಲಕ ಗೂಂಡಾಗಳು ಆಕೆಯ ಮೇಲೆ ಹಲ್ಲೆ ನಡೆಸಿ, ಕೈಯನ್ನೇ ಕತ್ತರಿಸಿದರು. ಈ ಪಾತಕಿಗಳಿಗೆ ಆಶ್ರಯ ಕೊಟ್ಟಿರುವುದು ಮಹಿಳೆಯನ್ನು ವೈಭವೀಕರಿಸುವ ಅಲ್ಲಿಯ ಬಿಜೆಪಿ ಸರ್ಕಾರ!

ಜನರ ಸರ್ಕಾರ

ನಮ್ಮ ರಾಜ್ಯದಲ್ಲಿ ಈ ಸಾರಿ ವ್ಯಾಪಕ ಪ್ರಕೃತಿ



ವಿಕೋಪ ಆಯ್ತು. ಚಂಡಮಾರುತ ಅತಿವೃಷ್ಟಿ ನೆರೆಹಾವಳಿ ಇತ್ಯಾದಿಗಳಲ್ಲಿ ಅಂಗನವಾಡಿ ನೌಕರರು ಸಂತ್ರಸ್ತರ ನೆರವಿಗೆ ದಾವಿಸುತ್ತೇವೆ. ಆದರೆ ಕೇಂದ್ರ ಸರ್ಕಾರ ಯಾವ ನೆರವನ್ನು ತುರ್ತಾಗಿ ನೀಡುತ್ತಿಲ್ಲ. ತೃಣಮೂಲ ನಮ್ಮ ಮೇಲೆ ದಾಳಿ ಮಾಡ್ತಿದೆ ಪಶ್ಚಿಮ ಬಂಗಾಳ ರಾಜ್ಯದಲ್ಲಿ ಸಿಪಿಎಂ ನೇತೃತ್ವದ ಎಡರಂಗ ಸರ್ಕಾರ ದಿನನಿತ್ಯ ಜನರ ಕಷ್ಟಗಳಿಗೆ ಜೀವಂತವಾಗಿ ಸ್ಪಂದಿಸುತ್ತಿದೆ. ಅಂಗನವಾಡಿ ನೌಕರರಿಗೆ ನಿವೃತ್ತಿ ನಂತರ ಪಿ.ಎಫ್. ನೀಡುತ್ತಿದೆ. ಹಬ್ಬದ ಬೋನಸ್ ನೀಡುತ್ತದೆ. ಕಾರ್ಮಿಕರ ಹಕ್ಕುಗಳನ್ನು ರಕ್ಷಿಸುತ್ತದೆ. ದೇಶದ ಎಲ್ಲೆಡೆಯೂ ಇಂಥದ್ದೇ 'ಜನರ ಸರ್ಕಾರ' ಬರಲಿ ಎಂಬುದು ಪಶ್ಚಿಮ ಬಂಗಾಳದ ಸಂಗಾತಿಗಳ ಹಾರೈಕೆ.

ಉಗ್ರಗಾಮಿಗಳಿಗೆ ಹಣ!

ಆಸಾಂ ಉಲ್ಫಾ ಉಗ್ರಗಾಮಿಗಳ ಘೋರ ತಾಣ. ಆಡಳಿತದಲ್ಲಿ ಕಾಂಗ್ರೆಸ್ ಇದ್ದರೂ ಪ್ರಜಾಸತ್ತಾತ್ಮಕ ಚಳುವಳಿಯನ್ನು ಹತ್ತಿಕ್ಕಿ, ದುಡಿಯುವ ವರ್ಗದ ವಿರುದ್ಧವೇ ಕತ್ತಿ ಮಸೆಯಿತಿದೆ. ಇಂಥ ಸಂದರ್ಭದಲ್ಲಿ ನಮ್ಮ ಸಂಘಟನೆ ಕೆಲಸಗಳಿಗೆ ಒಂದೆಡೆ ಆಡಳಿತ ಪಕ್ಷ ಮತ್ತೊಂದೆಡೆ ಉಗ್ರಗಾಮಿಗಳು ತೊಡಕಾಗಿದ್ದಾರೆ. ನೌಕರರ ಗೌರವಧನದ ನಾಲ್ಕು ಶೇಕಡರಷ್ಟನ್ನು ಸಿಡಿಪಿಒಗಳೇ ಕಡಿತ ಮಾಡಿ ಉಗ್ರಗಾಮಿಗಳಿಗೆ ಕೊಡುತ್ತಾರೆ.

ನಾವು ಚುನಾವಣೆಯಲ್ಲಿ.....

ತ್ರಿಪುರಾದಲ್ಲಿ ಪ್ರಜಾಸತ್ತಾತ್ಮಕ ಚಳುವಳಿ ಗಟ್ಟಿಯಾಗಿದೆ. ಬಾಂಗ್ಲಾಗಡಿಯಲ್ಲಿ ಭಯೋತ್ಪಾದಕರ ಮತ್ತು ಕೋಮುವಾದಿಗಳ ಅಟ್ಟಹಾಸ ಜೋರಾಗಿದೆ. ಕೇಂದ್ರ ಸರ್ಕಾರ ತಂದಿರುವ ಉದಾರೀಕರಣ ನೀತಿ ಸರ್ವನಾಶಕ್ಕೆ ಜನತೆಯನ್ನು ದೂಡುತ್ತದೆ ... ರಾಜಕೀಯ ಪ್ರಜ್ಞೆಯೊಂದಿಗೆ ನಮ್ಮ ಎಡರ... ಸರ್ಕಾರ ಅಂಗನವಾಡಿ ನೌಕರರ ಮತ್ತು ಮ... ಮಹಿಳೆಯರ ಕುರಿತು ಅಪಾರ ಕಾಳಜಿ ವಹಿಸಿ... ನಾವು ಚುನಾವಣೆಯಲ್ಲಿ ನಿಂತು ಗೆಲ್ಲುತ್ತೇವೆ. ಜೀ... ಹಂಗು ತೊರೆದು ಜನರ ಸರ್ಕಾರ ರಕ್ಷಿಸುತ್ತೇ... ಈ ಸಾರಿ ಚುನಾವಣೆಯಲ್ಲಿ ಅಂಗನವಾಡಿ ನೌಕ... ಸಾಕಷ್ಟು ಜನ ಗೆದ್ದು ನೀತಿ ನಿರ್ಧಾರಕ ಸ... ಪಡೆದಿದ್ದಾರೆ. ಪಶ್ಚಿಮ ಬಂಗಾಳದಲ್ಲಿ 2 ... ಎಮ್‌ಎಲ್‌ಎಗಳು ಅಂಗನವಾಡಿ ರಂಗದ... ಇದ್ದಾರೆ.

'ಪಾಂಡಿಚೇರಿಯಲ್ಲಿ ರೆಗ್ಯೂಲರ್ ನೌಕರ...

ನಮ್ಮದು ಚಿಕ್ಕ ಕೇಂದ್ರಾಡಳಿತ ಪ್ರದೇಶ. ಆ... ಹೋರಾಟಕ್ಕೆ ನಾವೇನು ಕಡಿಮೆ ಇಲ್ಲ. ಶೇ... ಸದಸ್ಯತ್ವ. ಹಾಗೇ ಶೇ.100 ಖಾಯಮಾ... ನಿರಂತರ ಹೋರಾಟ ನಡೀತಿದೆ. ಸದ್ಯದಲ್ಲೇ ... ದಿನಗಳ ಹೋರಾಟದ ನಂತರ ನಮ್ಮನ್ನು ರೆಗ್ಯೂ... ಎಂಪ್ಲಾಯೀಸ್ ಅಂತ ಪರಿಗಣಿಸಿದ್ದಾರೆ. ನ... ಕಾರ್ಯಕರ್ತೆಗೆ 5,500, ಸಹಾಯಕಿಗೆ 4,500 ... ಪಗಾರ ಬರುತ್ತದೆ!

ಪ್ರಧಾನ ಕಾರ್ಯದರ್ಶಿ ಹೇಮಲತಾ

ಸಂಘಟನೆ ನಮ್ಮ ಅಸ್ತ್ರ, ಹೋರಾಟ ... ಹಾದಿ. ಸಂಘಟನಾತ್ಮಕವಾಗಿ ದೇಶದಲ್ಲಿರ... ಅಸಮತೋಲನ ಹೋಗಲಾಡಿಸಿ ಎ... ರಾಜ್ಯಗಳಲ್ಲೂ ಸದಸ್ಯತ್ವ, ಹೋರಾಟ, ಚಟುವ... ಗಳು ಮುಖಂಡತ್ವದಲ್ಲಿ ಮುಂದೆ ಬರುವ... ನಮ್ಮದು ಚಟುವಟಿಕೆಗಳಿಂದ ತೃಪ್ತರಾಗ... ಸಂಘವಲ್ಲ. Committed, Consiousne... capable cader ಗಳಾಗಿ ಬೆಳೆಯಬೇಕು. 13 ... ಅಂಗನವಾಡಿ ನೌಕರರು, ಫಲಾನುಭವಿಗ... ಸಾರ್ವಜನಿಕರನ್ನು ನಮ್ಮ ಸಂಘ ತಲುಪಬೇ... ಬಡವರ ಆಶಾಕಿರಣವಾಗಿ ಅಂಗನವ... ಕೇಂದ್ರಗಳನ್ನು ಬೆಳೆಸಬೇಕು. ಸಮುದಾಯದ ಜೀ... ಜೀವಂತ ಸಂಬಂಧ ಇಟ್ಟುಕೊಳ್ಳಬೇಕು.

ನೆಲದ ಹಾಳೆಯಲಿ.... ಬೆವರ ಹನಿಗಳಲಿ.... ನೀನು ಬರೆದ ಕವನ

ಜ್ಞಾನಪೀಠ ಪ್ರಶಸ್ತಿ ವಿಜೇತ, ರಾಷ್ಟ್ರಪತಿ ಕುವೆಂಪುರವರ ರಚನೆಯಾದ ಸರ್ವರಿಗೂ ಸಮಬಾಳು-ಸರ್ವರಿಗೂ ಸಮಪಾಲು ಎಂಬ ನವಯುಗವಾಣಿ ಘೋಷಿಸಿದೆ ಕೇಳಿ ಯುಗಾಯುಗದ ದಾರಿದ್ರ್ಯ ಭಾರದಿಂ ಬೆನ್‌ಬಾಗಿ ಗೋಳಿಡುವ ಬಡಜನರೆ ಏಳಿರೈ ಏಳಿ! ಎಂಬ ಸಂದೇಶದೊಂದಿಗೆ ನವೆಂಬರ್ 8ರಂದು ಬೆಳಗ್ಗೆ ಅಂಗನವಾಡಿ 6ನೇ ರಾಷ್ಟ್ರೀಯ ಸಮ್ಮೇಳನ ಆರಂಭವಾಯಿತು. ಇದರೊಂದಿಗೆ ಮನಸೂರೆಗೊಂಡ ಮತ್ತೊಂದು ಹಾಡು ಶಾಯಿದ್ ಲೂದಿಯಾನ್ವಿಯವರ 'ಹೋ ಶುಭಾಹ್ ಕಬೀ ಹೋಜಾಯೇಗಿ' ಸಮುದಾಯದ ಗಜಾನನ ಮತ್ತು ವಾದ್ಯ ತಂಡದಿಂದ ತರಬೇತಿ ಪಡೆದ ಅಂಗನವಾಡಿಯ ಹೆಣ್ಣುಮಕ್ಕಳು ಅತ್ಯಂತ ಭಾವಪೂರ್ಣವಾಗಿ ಹಾಡಿದುದು ಪ್ರತಿನಿಧಿಗಳ ಮೆಚ್ಚುಗೆಯನ್ನು ಪಡೆಯಿತು.

ಅದೇ ದಿನ ಮಧ್ಯಾಹ್ನದ ರ‍್ಯಾಲಿಯ ನಂತರದ ಬಹಿರಂಗ ಸಭೆಯ ಆರಂಭದಲ್ಲಿ ಕರ್ನಾಟಕದ ಜಾನಪದ ಪ್ರಾಕಾರಗಳಲ್ಲಿ ಒಂದಾದ ಡೊಳ್ಳು ಕುಣಿತ ಕಾರ್ಯಕ್ರಮವಿತ್ತು. ಇದರ ವೈಶಿಷ್ಟ್ಯತೆ ಎಂದರೆ ಮಹಿಳೆಯರು ಡೊಳ್ಳು ಕುಣಿತ ಮಾಡಿದ್ದು. ಇತ್ತೀಚಿನವರೆಗೂ ಈ ಕಲೆ ಪುರುಷ




ಪ್ರಧಾನವಾಗಿತ್ತು. 10 ಕೆ.ಜಿ ತೂಕದ ಡೊಳ್ಳನ್ನು ಮಹಿಳೆಯರು ಹೊತ್ತುಕೊಂಡು ಗಂಟೆಗಟ್ಟಲೆ ಕುಣಿಯಬಲ್ಲರೇ ಎಂಬ ಪ್ರಶ್ನೆಗಳನ್ನು ಮೀರಿ ನಿಂತವರು ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಸುಜಾತ ಮೂರ್ತಿ ನೇತೃತ್ವದ ಮೈತ್ರಿ ಮಹಿಳಾ ಮಂಡಳಿಯ ಸದಸ್ಯರು ಸುಮಾರು 40 ನಿಮಿಷ ನಿರಂತರ ಡೊಳ್ಳು ಕುಣಿತದ ಹೆಜ್ಜೆಗಳ ಮೂಲಕ ನೆರೆದಿದ್ದ ಸಾವಿರಾರು ಜನರ ಗಮನ ಸೆಳೆದರಲ್ಲದೇ ಮಾಧ್ಯಮದವರನ್ನು ದಂಗುಬಡಿಸಿದರು. ಈ ಕಾರ್ಯಕ್ರಮವನ್ನು ಕರ್ನಾಟಕ ಸರ್ಕಾರದ ಜಾನಪದ ಮತ್ತು ಯಕ್ಷಗಾನ ಅಕಾಡಮಿ ಪ್ರಾಯೋಜಿಸಿತ್ತು. ತದನಂತರ ಅಂಗನವಾಡಿ ಹೆಣ್ಣುಮಕ್ಕಳ ಹಾಡಿನ ತಂಡದಿಂದ

"ಕಂಕಂಬಾವುಟಾ ಆಸರೆಯಾಗಲು
ಎದ್ದು ಬಾರೆ ಓ ಅಕ್ಕಾ
ಅಂಗನವಾಡಿಯಕ್ಕ.....
ಶ್ರಮ ಜೀವಿಯಕ್ಕ....." ಎಂಬ ಹಾಡು ಮೂಡಿಬಂತು

ನವೆಂಬರ್ 9ರಂದು ರಾತ್ರಿ 8.30ಕ್ಕೆ ಕರ್ನಾಟಕದ ಜನಪರರಂಗ ತಂಡ ಸಮುದಾಯದ ವತಿಯಿಂದ 'ಭಾಂವ್ರಿ' ನಾಟಕವಿತ್ತು. ರಾಜಸ್ಥಾನದ ಅಂಗನವಾಡಿ ಕಾರ್ಯಕರ್ತೆ ಅದೇ ಊರಿನಲ್ಲಿ ನಡೆಯುತ್ತಿದ್ದ ಬಾಲ್ಯವಿವಾಹ ತಡೆದುದಕ್ಕೆ, ಅದೇ ಊರಿನ ಪಟೇಲಾ ಹಾಗೂ ಸಹಚರರಿಂದ ಸಾಮೂಹಿಕ ಅತ್ಯಾಚಾರಕ್ಕೆ ಒಳಗಾಗುತ್ತಾಳೆ. ಆದಾಗ್ಯೂ ಹೋರಾಟವನ್ನು ಮುಂದುವರೆಸಿ, ಸಾಮಾಜಿಕ ಬದಲಾವಣೆಗೆ ಆ ಮೂಲಕ ಹೊಸ ಕಾನೂನೊಂದು ಬರಲು ಕಾರಣಳಾದ ಭಾಂವ್ರಿ ಕುರಿತ ನಾಟಕವಾಗಿತ್ತು. ಈ ಕಾರ್ಯಕ್ರಮವನ್ನು ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಪ್ರಾಯೋಜಿಸಿತ್ತು.

ನವೆಂಬರ್ 10ರಂದು ರಾತ್ರಿ 8.30ಕ್ಕೆ ...



ಚಿತ್ರ ಕಾರ್ಯಕ್ರಮವಿತ್ತು. ಗಾಯಕ ಗ... ದೇಸಾಯಿಯವರು ನೆಲದ ಹಾಳೆಯಲಿ ಬ... ಹನಿಗಳಲಿ ಹಚ್ಚಬ್ಯಾಡಾ ಹಚ್ಚಬ್ಯಾಡವ್ವಾ ಬ... ನನ್ನನ್ನು...... ಎಂಬ ಪ್ರಗತಿಪರ ವಿಚಾರಧಾರೆ... ಹಾಡುಗಳನ್ನು ಹಾಡುವ ಸಂದರ್ಭದಲ್ಲೇ ಕಲಾ... ರಾಜೇಶ್ ದೇಸಾಯಿಯವರು ಆ ವಿಷ... ಸಂಬಂಧಿಸಿದಂತೆ ಚಿತ್ರ ಬಿಡಿಸುತ್ತಿದ್ದರು. ... ಕಾರ್ಯಕ್ರಮ ಹೊಸ ಪ್ರಯೋಗವಾಗಿದ್ದರೂ ಬಹ... ಪ್ರೇಕ್ಷಕರ ಮೆಚ್ಚುಗೆಯನ್ನು ಪಡೆಯಿತು. ... ಸಂದರ್ಭಧಲ್ಲಿ ಬೆಂಗಳೂರಿನಲ್ಲಿ ವ್ಯಾ... ಮಾಡುತ್ತಿರುವ ಬಂಗಾಳಿ ವಿದ್ಯಾರ್ಥಿ ಮಹ... ಉಮರ್, ಗಿಟಾರ್, ವಾದ್ಯದೊಂದಿಗೆ ... ಹಾಗೂ ಹಿಂದಿ ಹಾಡುಗಳನ್ನು ಹಾಡಿದರು. ...

ತದನಂತರ ಪ್ರೊ ಬರಗ... ರಾಮಚಂದ್ರಪ್ಪನವರು ನಿರ್ದೇಶಿಸಿದ ಗ... ದಾಖಿಲೆ ಪಡೆದ ಶಾಂತಿ ಚಲನಚಿತ್ರ ಪ್ರದರ್ಶನ...

ಮಹಿಳಾ ಮೀಸಲಾತಿ

ಎಡಬಿಡಂಗಿತನಕ್ಕೆ ಹಾಕಬೇಕು ತಡೆ

ನೀಲಾ .ಕೆ

ಎಡಪಕ್ಷಗಳ ಬೆಂಬಲ ಕಾರಣವಾಗಿ ಯುಪಿಎ ಸರ್ಕಾರ ಸಾಮಾನ್ಯ ಕನಿಷ್ಠ ಕಾರ್ಯಕ್ರಮದಲ್ಲಿ ಮಹಿಳಾ ಮೀಸಲಾತಿ ಮಸೂದೆಯನ್ನು ಸೇರಿಸಿದ್ದರೂ ಅದನ್ನು ಜಾರಿಗೊಳಿಸುವಲ್ಲಿ ಮಾತ್ರ ಮೀನಮೇಷ ಎಣಿಸುತ್ತಿದೆ. ಆದ್ದರಿಂದ ಸಿಪಿಐ(ಎಂ) ಮಹಿಳಾ ಮೀಸಲಾತಿ ಮಸೂದೆ ಜಾರಿಗಾಗಿ ಒತ್ತಾಯಿಸಿ ನವೆಂಬರ್ 21 ರಂದು ರಾಷ್ಟ್ರವ್ಯಾಪಿ ಆಂದೋಲನಕ್ಕೆ ಕರೆ ಕೊಟ್ಟಿದೆ

ಮೊಲೆ ಮೂಡಿ ಬಂದರೆ ಹೆಣ್ಣೆಂಬರು
ಗಡ್ಡ ಮೀಸೆ ಬಂದರೆ ಗಂಡೆಂಬರು
ಒಳಗೆ ಸುಳಿವ ಆತ್ಮನು
ಹೆಣ್ಣೂ ಅಲ್ಲ ಗಂಡೂ ಅಲ್ಲ ಕಾಣಾ ರಾಮನಾಥ

ಜೇಡರ ದಾಸಿಮಯ್ಯ ಎಂಬ ವಚನಕಾರನು ಸುಮಾರು 9 ಶತಮಾನಗಳ ಹಿಂದೆಯೇ ಲಿಂಗಸಂಬಂಧಿ ತಾರತಮ್ಯ ಕುರಿತು ಪ್ರತಿಭಟನೆ ಮಾಡಿದ್ದಾರೆ. ಮೇಲಿನ ಈ ವಚನವು ತುಂಬಾ ಸ್ಪಷ್ಟವಾಗಿ ದೇವ ವೈವಿಧ್ಯದ ರಾಚನಿಕ ಸ್ವರೂಪವನ್ನು ವಿವರಿಸುತ್ತದೆ. ನಿಸರ್ಗದ ಈ ಅನಂತ ಸಂಸಾರದಲ್ಲಿ ಜೀವಿಗಳು ಕೇವಲ ಜೀವಿಗಳು ಮಾತ್ರವಾಗಿರುತ್ತವೆ. ಅವುಗಳು ಬದುಕುವ ಹಕ್ಕು ಸಮಾನವಾಗಿರುತ್ತದೆ. ಸೃಷ್ಟಿ ಚಲನೆಗೆ ಗಂಡು, ಹೆಣೆಂಬ ವೈವಿಧ್ಯತೆಯೂ ಅನಿವಾರ್ಯವೇ ಹೊರತು; ಇದು ಜೀವಿಗಳ ಮಧ್ಯೆ ಭೇದ ನಿರ್ಮಿಸುವ ಘಟಕವಲ್ಲ ಎಂದು ಈ ವಚನಕಾರ ಸ್ಪಷ್ಟಪಡಿಸುತ್ತಾರೆ. ಆದರೂ ಪುರುಷ ಪ್ರಧಾನ ವ್ಯವಸ್ಥೆಯು ಗಂಡು, ಹೆಣ್ಣೆಂಬ ಜೈವಿಕ ವೈವಿದ್ಯಗಳ ನಡುವೆ ಭೇದ ಸೃಷ್ಟಿಸಿ ಹೆಣ್ಣನ್ನು ತುಚ್ಛೀಕರಿಸಿದೆ. ಈ ಕಾರಣವಾಗಿಯೇ ವಿಶ್ವದಾದ್ಯಂತ ಪುರುಷಶಾಹಿ ಧೋರಣೆ ಮೇಲುಗೈ ಸಾಧಿಸಿದೆ. ಪುರುಷಶಾಹಿ ದೃಷ್ಟಿ, ಧೋರಣೆಯಿಂದಾಗಿ ಸ್ತ್ರೀಯರನ್ನು ಎರಡನೇ ದರ್ಜೆಯ ಪ್ರಜೆಯಂತೆ ನಡೆಸಿಕೊಂಡು ಬರಲಾಗುತ್ತಿದೆ. ಸಂತಾನಶಕ್ತಿಯ ಅಪಾರ ಸಾಧ್ಯತೆಯನ್ನು ತನ್ನೊಡಲೊಳಗೆ ಇಟ್ಟುಕೊಂಡಿರುವ ಸ್ತ್ರೀಯರನ್ನು ಗೌರವದಿಂದ ಕಾಣುವುದು ಒತ್ತಟ್ಟಿಗಿರಲು ಕನಿಷ್ಠ ಸೌಲಭ್ಯಗಳು ದೊರೆಯುದಂತೆ ನೋಡಿಕೊಳ್ಳಲಾಗುತ್ತಿದೆ. ಜಗತ್ತಿನಾದ್ಯಂತ ಆರ್ಥಿಕ, ಸಾಮಾಜಿಕ, ಧಾರ್ಮಿಕ, ರಾಜಕೀಯ, ಸಾಂಸ್ಕೃತಿಕ ಎಲ್ಲ ಕ್ಷೇತ್ರಗಳಲ್ಲಿ ಸ್ತ್ರೀಯರನ್ನು ಕಡೆಗಣಿಸಲಾಗುತ್ತಿದೆ. ಸ್ತ್ರೀಯರು ಒಟ್ಟು ಬದುಕಿನ ಪರಿಧಿಯಲ್ಲಿ ಗಮನಾರ್ಹ ಪಾತ್ರ ನಿರ್ವಹಿಸಿದರೂ ಅವರ ಸಹಭಾಗಿತ್ವವನ್ನು ನಿರಾಕರಿಸಲಾಗುತ್ತಿದೆ.

ಮುಂದುವರೆದ ಅಮೇರಿಕಾ, ಇಂಗ್ಲೆಂಡ್‌ನಂಥ ದೇಶಗಳಲ್ಲಿ ಕೂಡ ಕಳೆದ ಶತಮಾನದವರೆಗೆ ಮಹಿಳೆಯರಿಗೆ ಮತ ಚಲಾಯಿಸುವ ಹಕ್ಕು ಇರಲಿಲ್ಲ. ಅಂದರೆ ರಾಜಕೀಯದಲ್ಲಿ ಅವರ ಸಹಭಾಗಿತ್ವ ಸಂಪೂರ್ಣ ಶೂನ್ಯವಾಗಿತ್ತು. ರಾಜಕೀಯ ಎಂಬುದು ಬದುಕಿನ ಒಂದು ಅಂಗ ಮಾತ್ರವಲ್ಲ. ಅದು ಸಮಗ್ರ ಬದುಕನ್ನು ನಿರ್ವಹಿಸುವ, ಚಾಲನೆಗೊಳಿಸುವ ಪ್ರಧಾನ ಮಾಧ್ಯಮ. ಇಂಥ ಪ್ರಮುಖ ಮಾಧ್ಯಮದಲ್ಲಿ ಒಟ್ಟು ಪುರುಷರ ಸರಾಸರಿ ಅರ್ಧದಷ್ಟಿರುವ ಮಹಿಳೆಯರಿಗೆ ಪ್ರಾತಿನಿಧ್ಯವೇ ಇಲ್ಲವೆಂದರೆ ಇದಕ್ಕಿಂತ ದೊಡ್ಡ ದುರಂತ ಇರಲಾರದು. ಈ ದಿಸೆಯಲ್ಲಿ ಪ್ರಜಾಪ್ರಭುತ್ವವನ್ನು ಒಪ್ಪಿಕೊಂಡಿರುವ ಭಾರತವು ವಿಶ್ವಕ್ಕೆ ಹೊಸ ಮಾರ್ಗ ತೋರಿಸಬೇಕಿದೆ.



ಶೇಕಡಾ 33 ಮಹಿಳಾ ಮೀಸಲಾತಿ ಮಸೂದೆ ಜಾರಿಗೊಳಿಸುವದು ಈ ಹೊತ್ತಿನ ತುಂಬಾ ತುರ್ತಿನ ಪ್ರಜಾಸತ್ತಾತ್ಮಕ ನಡೆಯಾಗಿದೆ. ಹಾಗೇ ನೋಡಿದರೆ ವಿಶ್ವದ ಅತ್ಯಂತ ಬಲಿಷ್ಟ ಮತ್ತು ದೊಡ್ಡ ಪ್ರಜಾಪ್ರಭುತ್ವ ದೇಶವಾಗಿರುವ ಭಾರತದಲ್ಲಿ ಈ ವೇಳೆಗಾಗಲೇ ಸಂಪೂರ್ಣ ಸಮಾನತೆ ಸಾಧಿಸಬೇಕಾಗಿತ್ತು. ಏಕೆಂದರೆ ನಮ್ಮ ಘನವೆತ್ತ ಸಂವಿಧಾನವು ಜಾತಿ, ಲಿಂಗ, ವರ್ಗ, ವರ್ಣ ತಾರತಮ್ಯಗಳನ್ನು ಸಂಪೂರ್ಣ ಉಚ್ಚಾಟಿಸುವ ದಿಸೆಯಲ್ಲಿ ಹಲವು ರೀತಿಯ ಮೀಸಲಾತಿ ಮತ್ತು ವಿಶೇಷ ಸೌಲಭ್ಯಗಳನ್ನು ಕಲ್ಪಿಸಿದೆ. ಆ ಎಲ್ಲ ಸೌಲಭ್ಯಗಳನ್ನು ಜಾರಿಗೊಳಿಸುವ ಶಾಸಕಾಂಗ ಮಾತ್ರ ಯಾವತ್ತೂ ಈ ದೇಶದಲ್ಲಿ ಸಮಾನತೆ ಸ್ಥಾಪಿಸುವ ಇಚ್ಛಾಶಕ್ತಿ ತೋರಿಸಿಲ್ಲ. ಹೀಗಾಗಿ ಸ್ವಾತಂತ್ರ್ಯ ದೊರೆತು ಮುಕ್ಕಾಲು ಶತಮಾನ ಸಂದರೂ ಸಂವಿಧಾನದತ್ತ ಸಮಾನ ಅಧಿಕಾರ ಎಲ್ಲರಿಗೂ ದೊರೆತಿಲ್ಲ. ರಾಜಕೀಯ ಸಹಭಾಗಿತ್ವವಂತೂ ಈ ದೇಶದ ದಲಿತರಿಗೆ, ಮಹಿಳೆಯರಿಗೆ, ಹಿಂದುಳಿದವರಿಗೆ ಮೂಗಿಗೆ ತುಪ್ಪ ಒರಸಿದಂತೆ ನೆಪಮಾತ್ರಕ್ಕೆ ದೊರೆತಿದೆ.

ಒಳ ಮೀಸಲಾತಿ ಎಂಬ ಅಡ್ಡನೆಪ

ಈ ದೇಶದ ಪ್ರಜ್ಞಾವಂತ ಸಮಾಜವಾದಿ ಕನಸುಣಿಗಳ ನಿರಂತರ ಸಂಘರ್ಷ ಮತ್ತು ಹೋರಾಟದ ಫಲವಾಗಿ ಶೇಕಡಾ ಮುವತ್ತ ಮೂರು ಮಹಿಳಾ ಮೀಸಲಾತಿ ಮಸೂದೆಯನ್ನು ಸಂಸತ್ತಿನಲ್ಲಿ ಮಂಡಿಸಲು ಸಾಧ್ಯವಾದದ್ದು ಸಂತೋಷದ ಸಂಗತಿಯಾಗಿದೆ. ಆದರೆ ಈ ಮಸೂದೆ ಜಾರಿಯಾಗದಂತೆ ಶತಾಯಗತಾಯ ಒಳತಂತ್ರ ರೂಪಿಸುತ್ತಿರುವ ಬಿಜೆಪಿ, ಕಾಂಗ್ರೆಸ್ ಬಿ.ಎಸ್.ಪಿ ಪಕ್ಷಗಳ ನಾಟಕ ಮಾತ್ರ ಹೇಸಿಗೆ ತರಿಸುತ್ತಿದೆ. ಎರಡು ಬಾರಿ ಈ ಮಸೂದೆಯನ್ನು ಸಂಸತ್ತಿನಲ್ಲಿ ಮಂಡಿಸಿದಾಗಲೂ ಎಡಪಕ್ಷಗಳು ಹೊರತುಪಡಿಸಿ ಉಳಿದೆಲ್ಲ ಸೋಗಲಾಡಿ ರಾಷ್ಟ್ರೀಯ ಪಕ್ಷಗಳು ತಮ್ಮ ಆಷಾಢಭೂತಿತನ ಪ್ರದರ್ಶಿಸಿವೆ. ಒಳಮೀಸಲಾತಿ ಮಸೂದೆ ಜಾರಿಯಾಗದಂತೆ ತಡೆ ಹಿಡಿಯಲಾಗಿದೆ. ನಮ್ಮ ಸಂವಿಧಾನದ ಸಾಮಾನ್ಯ ಮೀಸಲಾತಿಯಲ್ಲಿಯೇ ಹಿಂದುಳಿದ ಮತ್ತು ಅಲ್ಪಸಂಖ್ಯಾತ ಪುರುಷರಿಗೆ ಅವಕಾಶವಿಲ್ಲ. ಸಾಮಾನ್ಯ ಮೀಸಲಾತಿ ಮಸೂದೆಯಲ್ಲಿ ಮೊದಲು ಹಿಂದುಳಿದ, ಅಲ್ಪಸಂಖ್ಯಾತ ಪುರುಷರಿಗೆ ಒಳಮೀಸಲಾತಿ ನೀಡಲಿ. ಆಗ ತನ್ನಷ್ಟಕ್ಕೆ ತಾನೇ ಅದೇ ಪಾಲಸಿ (ಅವಕಾಶ) ಮಹಿಳಾ ಮೀಸಲಾತಿಯಲ್ಲಿಯೂ ಜಾರಿಯಾಗುತ್ತದೆ. ಉಳಿದಂತೆ ಈಗ ಅಸ್ತಿತ್ವದಲ್ಲಿರುವ ಸಾಮಾನ್ಯ ಮೀಸಲಾತಿಯಲ್ಲಿರುವ ದಲಿತಪರ, ದುರ್ಬಲರ ಎಲ್ಲ ಅವಕಾಶಗಳು ಮಹಿಳಾ ಮೀಸಲತಿಯಲ್ಲಿಯೂ ಲಭ್ಯವಾಗುತ್ತವೆ. ಸಾಮಾನ್ಯ ಮೀಸಲಾತಿ ಮಸೂದೆಯಲ್ಲಿ ಇಲ್ಲದ ಅವಕಾಶಗಳನ್ನು ಕುರಿತು ಮಹಿಳಾ ಮೀಸಲಾತಿ ಮಸೂದೆಯಲ್ಲಿ ಪ್ರಶ್ನೆ ಎತ್ತುವುದರ ಮೂಲಕ ಮತ್ತು ಮೇಲ್ಜಾತಿಯ, ಮೇಲ್ವರ್ಗದ ಮಹಿಳೆಯರಿಗೆ ಮಾತ್ರ ಇದರ ಲಾಭವಾಗುತ್ತದೆ ಎಂದು ಬೊಬ್ಬೆ ಹಾಕುವ ಮೂಲಕ ಒಟ್ಟು ಮಹಿಳಾ ಮೀಸಲಾತಿ ಮಸೂದೆ ಜಾರಿಯಾಗದಂತೆ ದಿಕ್ಕು ತಪ್ಪಿಸುವುದೇ ಇವರ ಉದ್ದೇಶವಾಗಿದೆ. ಎಡಪಕ್ಷಗಳು ಮಾತ್ರ ಈ ದಿಸೆಯಲ್ಲಿ ಮಹಿಳಾ ಮೀಸಲಾತಿ ಮಸೂದೆಯ ಸಾಧಕ ಭಾದಕಗಳನ್ನು ವಸ್ತುನಿಷ್ಟ ನೆಲೆಯಲ್ಲಿ ಗ್ರಹಿಸುತ್ತ ಅದನ್ನು ಪ್ರಾಯೋಗಿಕಗೊಳಿಸುವ ಮಾರ್ಗಗಳನ್ನು ಕುರಿತು ತನ್ನ ನಿಲುವನ್ನು ಸ್ಪಷ್ಟಪಡಿಸಿವೆ. ಉಳಿದಂತೆ ಪುರುಷ ಪ್ರಧಾನ ವ್ಯವಸ್ಥೆಯನ್ನು ಬಲವಾಗಿ ನಂಬಿಕೊಂಡಿರುವ ಬಿಜೆಪಿ ಮತ್ತು ಅದರ ಹಿಂಬಾಲಕ ಅವಕಾಶವಾದಿ ಪಕ್ಷಗಳು ಸದರಿ ಮಸೂದೆಗೆ ಬೆಂಬಲ ಸೂಚಿಸಿದಂತೆ ಸೋಗು ಹಾಕಿ ಇಲ್ಲಸಲ್ಲದ ಕುಂಟು ನೆಪ ಹೂಡಿ ಮಸೂದೆ ಬಿದ್ದು ಹೋಗುವಂತೆ ಮಾಡಿರುವ ನಾಟಕ ಯಾರೂ ಅರಿಯದೇನಲ್ಲ. ಅಷ್ಟಕ್ಕೂ ಪುರುಷಶಾಹಿ ಕೈಗೊಂಬೆಗಳಂತಿರುವ ಸುಷ್ಮಾಸ್ವರಾಜ್, ಉಮಾ ಭಾರತಿಯರಂಥ ಸ್ತ್ರೀವಿರೋಧಿ ನಾಯಕಿಯರನ್ನು ಮತ್ತು ಮುಲಾಯಂಸಿಂಗ್ ಯಾದವ್‌ರಂಥ ಹಿಂದುಳಿದ ಎಡಬಿಡಂಗಿ ನಾಯಕರನ್ನು ಮುಂದು ಮಾಡುವ ಮೂಲಕ ಸಂಘ ಪರಿವಾರಿಗಳು ತಮ್ಮ ತೆರೆಮರೆಯ ನಾಟಕ ಕಂಪನಿ ಜಾರಿಯಲ್ಲಿಡುತ್ತಾರೆ.

ಚುನಾವಣೆ ಸಂದರ್ಭದಲ್ಲಿ ಕಾಂಗ್ರೆಸ್ ಸೇರಿದಂತೆ ಎಲ್ಲ ಪ್ರಮುಖ ಪಕ್ಷಗಳು ತಮ್ಮ ಪ್ರಣಾಳಿಕೆಯಲ್ಲಿ ಮಹಿಳಾ ಮೀಸಲಾತಿ ಮಸುದೆ ಜಾರಿಗೊಳಿಸುವ ಭರವಸೆ ನೀಡಿವೆ. (ಯುಪಿಎ) ಸಧ್ಯದ ಸಮಿಶ್ರ ಸರಕಾರವಂತೂ ತನ್ನ ಸಾಮಾನ್ಯ ಕನಿಷ್ಟ ಕಾರ್ಯಕ್ರಮಗಳಲ್ಲಿ ನಮೂದಿಸಿರುವಂತೆ ಸದರಿ ಮಸೂದೆಯನ್ನು ಜಾರಿಗೊಳಿಸಲೇಬೇಕಿದೆ. ನೂರು ದಿನ ಕೆಲಸದ ಗ್ಯಾರಂಟಿ, ನವರತ್ನ ಕಂಪನಿಗಳ ಉಳಿಯುವಿಕೆ, ವಿದೇಶಿ ಬಂಡವಾದ ಹೂಡಿಕೆ ಮುಂತಾದ ವಿಷಯಗಳನ್ನು ಕುರಿತು ಕಟ್ಟೆಚ್ಚರ ವಹಿಸುತ್ತಿರುವ ಎಡಪಕ್ಷಗಳು ಈ ದಿಸೆಯಲ್ಲಿ ಇನ್ನಷ್ಟು ಗಟ್ಟಿಯಾಗಿ ಪಟ್ಟು ಹಿಡಿದಿವೆ. ಮಹಿಳಾ ಮೀಸಲಾತಿ ಮಸೂದೆ ಜಾರಿಯಾಗುವಂತೆ ಪ್ರಸ್ತುತ ಸರಕಾರದ ಮೇಲೆ ಎಲ್ಲ ಬಗೆಯ ಒತ್ತಡ ತಂದು ಕಾರ್ಯಪ್ರವೃತ್ತವಾಗಬೇಕಿದೆ. ಸಧ್ಯ ಇದು ಅತ್ಯಂತ ಪಕ್ವವಾದ ಮತ್ತು ಸೂಕ್ತ ಸಮಯವಾಗಿದೆ. ಈ ಹೊತ್ತು ಮಹಿಳಾಪರ ಆ ಮೂಲಕ ಒಟ್ಟು ಮಾನವೀಯತೆ ಪರವಾದ ಎಲ್ಲ ಪಕ್ಷಗಳು, ಸಂಘಸಂಸ್ಥೆಗಳು, ಹೋರಾಟಗಾರರು, ಬುದ್ಧಿಜೀವಿಗಳು ವ್ಯಾಪಕ ಸಂಘರ್ಷ ನಡೆಸುವುದರ ಮೂಲಕರವಾದರೂ ಮಹಿಳಾ ಮೀಸಲಾತಿ ಮಸೂದೆ ಜಾರಿಗೊಳಿಸಬೇಕಿದೆ. ಏಕೆಂದರೆ ಸಂಪ್ರದಾಯಿಕ ಪುರುಷ ಪ್ರಧಾನ ಧೋರಣೆಯ ಕೊಚ್ಚೆಯಲ್ಲಿ ಹುದುಗಿ ಹೋಗಿರುವ ಉಳಿದ ಢೋಂಗಿ ಪಕ್ಷಗಳಿಗೆ ನಿಜವಾದ ಮಹಿಳಾ ಕಳಕಳಿ ಇರುವುದೇ ಇಲ್ಲ. ಅವರ ಸಮಾನತೆಯ ಆಶ್ವಾಸನೆಗಳೆಲ್ಲ ಜನತೆಯ ಮೂಗಿಗೆ ತುಪ್ಪ ಒರೆಸುವ ಕುತಂತ್ರಗಳಾಗಿರುತ್ತವೆ ಎಂತಲೇ ಒಳಮೀಸಲಾತಿ ಎಂಬ ಅಡ್ಡನೆಪ ತೆಗೆದು ಮಹಿಳಾ ಸಮುದಾಯದಲ್ಲಿ ಭೇದ ಹುಟ್ಟಿಸುವ ಅಥವಾ ತಪ್ಪು ತಿಳುವಳಿಕೆ ಹರಡಿಸುವ ಕೆಲಸ ಮಾಡುತ್ತಾರೆ.

ಜನರ ಮೂಲಕವೇ ಒತ್ತಾಯ

ಎಡಪಕ್ಷಗಳ ಬೆಂಬಲ ಕಾರಣವಾಗಿ ಸಮಿಶ್ರ ಯುಪಿಎ ಸರಕಾರವು ಸಾಮಾನ್ಯ ಕನಿಷ್ಠ ಕಾರ್ಯಕ್ರಮದಲ್ಲಿ ಮಹಿಳಾ ಮೀಸಲಾತಿ ಮಸುದೆಯನ್ನು ಸೇರಿಸಿದ್ದು ಸ್ವಾಗತಾರ್ಹ. ಆದರೆ ಅದನ್ನು ಜಾರಿಗೊಳಿಸುವಲ್ಲಿ ಮಾತ್ರ ಮೀನ ಮೇಷ ಎಣಿಸುತ್ತಿದೆ. ಸರಕಾರ ರಚನೆಯಾಗಿ ಎರಡು ವರ್ಷಗಳು ಸಂದಿವೆ. ಈ ನಡುವೆ ಹಲವಾರು ಜನೋಪಯೋಗಿ ಮಸೂದೆಗಳು ಜಾರಿಯಾಗಿವೆ. ಆದರೆ ಮಹಿಳಾ ಮೀಸಲಾತಿ ಮಸೂದೆ ನೆನೆಗುದಿಗೆ ಬಿದ್ದಿರುವುದನ್ನು ಖಂಡಿಸಿ ಕಳೆದ 2001 ಮೇ ನಲ್ಲಿ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯು ದೆಹಲಿಯಲ್ಲಿ ಬೃಹತ್ ಮಹಿಳಾ ರ್‍ಯಾಲಿ ನಡೆಸಿತು. ಪ್ರಾಯಶ: ಭಾರತದ ಸ್ವಾತಂತ್ರ್ಯೋತ್ತರ ಸಂದರ್ಭದಲ್ಲಿ ಇದೇ ಮೊದಲ ಬಾರಿಗೆ ರಾಷ್ಟ್ರದ ಬೃಹತ್ ರಾಜಕೀಯ ಪಕ್ಷವೊಂದು ಶುದ್ಧ ಮಹಿಳಾ ಪ್ರಶ್ನೆಯನ್ನು ಎತ್ತಿಕೊಂಡು ಸಂಸತ್ತಿನ ಒಳಗೂ ಹೊರಗೂ ಹೋರಾಟ ನಡೆಸಿದೆ. ಮೇ 5.2005ರ ರ್‍ಯಾಲಿಯ ಸಂದರ್ಭದಲ್ಲಿ ಜನವಾದಿ ಮಹಿಳಾ ಸಂಘಟನೆಯ ಸದಸ್ಯರು ಮುಂಚೂಣಿಯಲ್ಲಿ ನಿಂತು ಸರಕಾರದ ವಿರುದ್ಧ ಸಡ್ಡು ಹೊಡೆದಿದ್ದಾರೆ. ಹತ್ತು ಜನ ಪ್ರತಿನಿಧಿಗಳು ಮಾನ್ಯ ಪ್ರಧಾನ ಮಂತ್ರಿ ಮನಮೋಹನಸಿಂಗ್‌ರನ್ನು ಭೇಟಿ ಮಾಡಿ ವಿಷಯ ಮನವರಿಕೆ ಮಾಡಿಕೊಟ್ಟಿದ್ದಾರೆ. ಅಂದಿನ ಮಾತುಕತೆಯಲ್ಲಿ ಪ್ರಧಾನ ಮಂತ್ರಿಗಳು ಈ ಸಲದ ಚಳಿಗಾಲದ ಅಧಿವೇಶನದಲ್ಲಿ ಮಹಿಳಾ ಮೀಸಲಾತಿ ಮಸೂದೆ ಮಂಡಿಸಲಾಗುವುದು ಮತ್ತು ಜಾರಿಯಾಗುವಂತೆ ರಾಜಕೀಯ ಇಚ್ಛಾಶಕ್ತಿ ಪ್ರಕಟಿಸುವುದಾಗಿ ಭರವಸೆ ನೀಡಿದ್ದಾರೆ. ಆದರೆ ಅವರ ಆಶ್ವಾಸನೆಗಳನ್ನು ನಂಬಿ ಕೂರುವಂತಿಲ್ಲ. ಏಕೆಂದರೆ ಎಂದಿನಂತೆ ಬಿ.ಜೆ.ಪಿ ತನ್ನ ಹಳೆ ಚಾಳಿ ಮುಂದುವರೆಸಿದೆ. ಆಯಾ ರಾಜಕೀಯ ಪಕ್ಷಗಳು ತಮ್ಮ ವಲಯದಲ್ಲಿ ಮಹಿಳೆಯರಿಗೆ ಮೀಸಲಾತಿ ನೀಡಲಿ. ಮತ್ತೇಕೆ ಹೊಸ ಮಸೂದೆ ಎಂಬ ಕುತಂತ್ರ ನಡೆಸಿದ್ದಾರೆ. ಕಾಂಗ್ರೆಸ್‌ನವರಂತೂ ಯಾವತ್ತೂ ಎಡಬಿಡಂಗಿಗಳು. ಏನ್ದೇನ ಪ್ರಕರಣ ಈ ಮಸೂದೆ ಬಿದ್ದು ಹೋದರೂ ಆದೀತು ಎಂಬ ಸೋಗು ಹಾಕುತ್ತಿದ್ದಾರೆ. ಇಂಥ ಸಂಧಿಗ್ಧ ಪರಿಸ್ಥಿತಿಯಲ್ಲಿ ಪ್ರಮುಖ ಎಡಪಕ್ಷವಾಗಿರುವ ಸಿ.ಪಿ.ಐ(ಎಂ) ಮಾತ್ರ ತನ್ನ ಬದ್ಧತೆಯಿಂದ ಎಲ್ಲಿಯೂ ಅಲುಗಾಡದೆ ಮಹಿಳಾ ಮೀಸಲಾತಿ ಮಸೂದೆ ಜಾರಿಗಾಗಿ ಒತ್ತಾಯಿಸಿ ದಿನಾಂಕ 21.11.05ರಂದು ರಾಷ್ಟ್ರವ್ಯಾಪಿ ಆಂದೋಲನಕ್ಕೆ ಕರೆ ಕೊಟ್ಟಿದೆ. ಸಂಸತ್ತಿನ ಒಳಗಂತೂ ನಮ್ಮ ನಾಯಕರು ಈ ಕುರಿತು ತೀವ್ರ ನಿಗಾ ವಹಿಸಿದ್ದಾರೆ. ಸಂಸತ್ತಿನ ಹೊರಗೂ, ಜನರ ನಡುವೆ, ಜನರ ಮೂಲಕವೇ ಒತಾಯ ಹೇರುವ ದಿಸೆಯಲ್ಲಿ ಪ್ರತಿಭಟನಾ ರ್‍ಯಾಲಿ, ಸಂವಾದಗೋಷ್ಠಿ, ವಿವಿಧ ಹಂತದ ಕಾರ್ಯಕ್ರಮಗಳು ನಡೆಯಲಿವೆ. ಎಲ್ಲ ಅಡ್ಡಿ, ತಗಾದೆ, ಕುತಂತ್ರಗಳ ಮಧ್ಯೆ ಮಹಿಳಾ ಮೀಸಲಾತಿ ಮಸೂದೆ ಜಾರಿಯಾಗಲೇಬೇಕು. ಇದು ಸಿಪಿಐ(ಎಂ) ಪಕ್ಷದ ಮಹಿಳಾಪರ ನಿಲುವಿನ ದ್ಯೋತಕ ರಾಜಕೀಯ ಪಕ್ಷವೊಂದು ಎಲ್ಲ ಮಹಿಳೆಯರಿಗಾಗಿಯೇ ಟೊಂಕಕಟ್ಟಿ ನಿಂತಿರುವುದು ಭಾರತೀಯ ಇತಿಹಾಸದಲ್ಲಿ ದಾಖಲಾಗಬೇಕಾದ ಅಂಶವಾಗಿದೆ.

→

5ನೇ ರಾಷ್ಟ್ರೀಯ ಸಮ್ಮೇಳನದ ಪ್ರಯುಕ್ತ, ನವೆಂಬರ್ 6 ರಂದು ಸೆಂಟ್ರಲ್ ಕಾಲೇಜಿ ಆವರಣದಲ್ಲಿ ಮಹಿಳೆ ಕುರಿತು ಕಲಾ ಶಿಬಿರವಿತ್ತು. ನಗರದ 20 ಯುವ ಕಲಾವಿದರು ಈ ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು. ಕಲಾ ಶಿಬಿರವನ್ನು ಕೆನ್ ಸ್ಕೂಲ್ ಆಫ್ ಆರ್ಟ್ಸ್ ಕಾಲೇಜಿನ ಪ್ರಾಂಶುಪಾಲರಾದ ಜೆ.ಎಮ್.ಎಸ್ ಮಣಿಯವರು ಉದ್ಘಾಟಿಸಿದರು. ಅತಿಥಿಗಳಾಗಿ ಹಿಮಾಚಲ ಪ್ರದೇಶದ ಸಿಐಟಿಯು ಮುಖಂಡರಾದ ಕಾಂ.ಠಾಕೂರ್ ಸಿಂಗ್‌ರವರು ಭಾಗವಹಿಸಿದ್ದರು. ಪ್ರಾಸ್ತಾವಿಕವನ್ನು ಕಾಂ.ವರಲಕ್ಷ್ಮಿ ಸ್ವಾಗತ ಸಮಿತಿ ಪ್ರಧಾನ ಕಾರ್ಯದರ್ಶಿಯವರು ನಡೆಸಿಕೊಟ್ಟರು. ಕಲಾ ಶಿಬಿರದ ಸಂಚಾಲಕ ರಾಜೇಶ್ ದೇಸಾಯಿ ನಿರೂಪಣೆ ಮಾಡಿದರು. ಮಹಿಳೆ ಮತ್ತು ಶಿಕ್ಷಣ, ಮಹಿಳೆ ಮತ್ತು ಕೋಮುವಾದ, ಮಹಿಳೆ ಮತ್ತು ಯುದ್ಧ ಶಾಂತಿ, ಮಹಿಳೆ ಮತ್ತು ಉದ್ಯೋಗ, ಮಹಿಳೆ ಮತ್ತು ಸಬಲೀಕರಣ ಕುರಿತು ಕಲಾವಿದರಿಗೆ ವಿಷಯಗಳನ್ನು ನೀಡಲಾಗಿತ್ತು.

ಕಲಾ ಶಿಬಿರದ ಸಮಾರಂಭ ಕಾರ್ಯಕ್ರಮದಲ್ಲಿ ಅತಿಥಿಗಳಾಗಿ ಅರ್ಥ ಚಲನಚಿತ್ರ ಹಾಗೂ ನಾಕು ತಂತಿ ಧಾರಾವಾಹಿಯ ನಿರ್ದೇಶಕರೂ ಪ್ರಗತಿಪರ ಚಿಂತಕರೂ ಆದ ಬಿ.ಸುರೇಶ್‌ರವರೂ, ಸಿಪಿಐ(ಎಂ)ನ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರೂ ಬಾಗೇಪಲ್ಲಿಯ ಶಾಸಕರೂ ಆದ ಕಾಂ.ಜಿ.ವಿ.ಶ್ರೀರಾಮರೆಡ್ಡಿಯವರೂ, ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಕಾಂ.ಕೆ.ಎಸ್. ವಿಮಲಾರವರು ಭಾಗವಹಿಸಿದ್ದರು.

ಈ ಎಲ್ಲಾ ಕಾರ್ಯಕ್ರಮಗಳನ್ನು ಸ್ವಾಗತ ಸಮಿತಿಯ ಉಪಸಮಿತಿಯಾದ ಸಾಂಸ್ಕೃತಿಕ ಸಮಿತಿ ಯೋಜಿಸಿತ್ತು.

- ಲಕ್ಷ್ಮಿ.

1917 ರ ಸಮಾಜವಾದಿ ಕ್ರಾಂತಿಯ ಯಶಸ್ಸಿನೊಂದಿಗೆ ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಟ ಉನ್ನತ ಹಂತವನ್ನು ತಲುಪಿತು. ಈಗ ನವ-ಉದಾರವಾದಿ ನೀತಿಗಳ ಹೇರಿಕೆಯ ಸಂದರ್ಭದಲ್ಲಿ ಸಾಮ್ರಾಜ್ಯಶಾಹಿಯ ಯಜಮಾನಿಕೆಯ ವಿರುದ್ಧ ಹೋರಾಟಗಳಲ್ಲಿ ಅಕ್ಟೋಬರ್ ಕ್ರಾಂತಿ ದಾರಿದೀಪ.

ಅಕ್ಟೋಬರ್ ಕ್ರಾಂತಿಯ ಅಮರ ಸಂದೇಶ

ಪ್ರಕಾಶ್ ಕಾರಟ್



1917 ರ ಅಕ್ಟೋಬರ್ ಕ್ರಾಂತಿ ಇತಿಹಾಸದ ದಿಕ್ಕಿನ ಮೇಲೆ ಆಳವಾದ ಪರಿಣಾಮ ಬೀರಿದ ಘಟನೆ. ಅದು ಹಳೆಯ ಶೈಲಿಯ ವಸಾಹತುಶಾಹಿಯಿಂದ ಜನಗಳ ವಿಮೋಚನೆಯ ಕಹಳೆ ಊದಿತು. ಒಂದು ಸಾಮಾಜಿಕವಾಗಿ ನ್ಯಾಯಯುತವಾದ ಸಮಾಜದತ್ತ ಹಾದಿ ತೋರಿಸಿತು. ಬಂಡವಾಳಶಾಹಿಯ ಸ್ಥಾನದಲ್ಲಿ ಒಂದು ಹೊಸ ಸಾಮಾಜಿಕ ವ್ಯವಸ್ಥೆ, ಸಮಾಜವಾದದ ಸ್ವರೂಪದಲ್ಲಿ ಉದಯಿಸುವಂತೆ ಮಾಡಿತು.

ಅಕ್ಟೋಬರ್ ಕ್ರಾಂತಿಯ ಮೊದಲು, 20ನೇ ಶತಮಾನದ ಆರಂಭ ಸಾಮ್ರಾಜ್ಯಗಳ ಯುಗವಾಗಿತ್ತು. ಬ್ರಿಟಿಶ್, ಫ್ರೆಂಚ್, ಜರ್ಮನ್, ಆಸ್ಟ್ರೋ-ಹಂಗೇರಿಯನ್, ರಶ್ಯನ್ ಮತ್ತು ಜಪಾನೀ ಸಾಮ್ರಾಜ್ಯಗಳು ವಿಶ್ವವನ್ನು ಪಾಲುಮಾಡಿಕೊಂಡು ಪ್ರಾಬಲ್ಯ ನಡೆಸುತ್ತಿದ್ದವು. ಇಟಾಲಿಯನ್, ಪೋರ್ಚುಗೀಸ್ ಇತ್ಯಾದಿ ಸಣ್ಣ ಸಾಮ್ರಾಜ್ಯಗಳೂ ಇದ್ದವು. ಅಕ್ಟೋಬರ್ ಕ್ರಾಂತಿ ಈ ಎಲ್ಲಾ ಹಳೆಯ ಶೈಲಿಯ ವಸಾಹತುಶಾಹಿಯ ಅಂತ್ಯವನ್ನು ಸಾರಿತು, ವಸಾಹತುಶಾಹಿ ಆಳ್ವಿಕೆಯನ್ನು ಕಿತ್ತೆಸೆದ ರಾಷ್ಟ್ರೀಯ ವಿಮೋಚನಾ ಆಂದೋಲನಗಳ ಸರಣಿಯನ್ನು ಅದು ಆರಂಭಿಸಿತು.

ಅಕ್ಟೋಬರ್ ಕ್ರಾಂತಿ ಸಾಮ್ರಾಜ್ಯಶಾಹಿಯನ್ನು ಅದರ ಅತ್ಯಂತ ದುರ್ಬಲ ಕೊಂಡಿಯಲ್ಲಿ ಮುರಿಯಬಹುದು ಎಂಬ ಲೆನಿನ್‌ರ ಸಿದ್ಧಾಂತವನ್ನು ಯಶಸ್ವಿಯಾಗಿ ಅನ್ವಯಿಸಿದ್ದರ ಫಲ. ಸಾಮ್ರಾಜ್ಯಶಾಹಿ ನಡುವಿನ ಕಿತ್ತಾಟಗಳಿಂದ ಉಂಟಾದ ಮೊದಲ ಮಹಾಯುದ್ಧದ ನಂತರ ಝಾರ್‌ಶಾಹಿ ರಶ್ಯಾ ಅದರ ಅತ್ಯಂತ ದುರ್ಬಲ ಕೊಂಡಿ ಎಂದು ಮೊದಲು ಹೇಳಿದವರು ಲೆನಿನ್. ಈ ಮೊದಲ ಸಮಾಜವಾದಿ ಕ್ರಾಂತಿಯ ಯಶಸ್ಸಿನೊಂದಿಗೆ ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಟ ಉನ್ನತ ಹಂತವನ್ನು ತಲುಪಿತು.

ಸಾಮಾಜಿಕ ವಿಮೋಚನೆ

ಅಕ್ಟೋಬರ್ ಕ್ರಾಂತಿ ಸಾಮ್ರಾಜ್ಯಶಾಹಿಯ ವಸಾಹತುಶಾಹಿ ಹಿಡಿತದಿಂದ ಸ್ವಾತಂತ್ರ್ಯದ ಪಥ ಪ್ರದರ್ಶನ ಮಾಡಿತಷ್ಟೇ ಅಲ್ಲ, ವಿಶ್ವದ ಕೋಟ್ಯಂತರ ಜನಗಳಿಗೆ ಪಾಳೆಯಗಾರಿ ಮತ್ತು ವರ್ಗಶೋಷಣೆಯ ಸಂಕೋಲೆಗಳಿಂದ ವಿಮೋಚನೆಗೊಳ್ಳುವ ದಾರಿಯನ್ನೂ ತೋರಿಸಿತು. ಅದು ಕಾರ್ಮಿಕ-ರೈತ ವರ್ಗ ಸಖ್ಯತೆಯನ್ನು ಆಧರಿಸಿತ್ತು. ಅಕ್ಟೋಬರ್ ಕ್ರಾಂತಿ ಪ್ರತಿಪಾದಿಸಿದ ಕಾರ್ಷಿಕ ಕಾರ್ಯಕ್ರಮ ಭೂಮಾಲಕತ್ವದ ರದ್ದತಿಯ ಘೋಷಣೆ ಕೊಟ್ಟಿತು. ಈ ಕಾರ್ಮಿಕ-ರೈತ ವರ್ಗಮೈತ್ರಿಯ ಕಾರ್ಯತಂತ್ರವನ್ನು ನಂತರ ವಸಾಹತು ದೇಶಗಳಲ್ಲಿ ರೈತರನ್ನು ಅಣಿನೆರೆಸಲು ಬಳಸಲಾಯಿತು. ಚೀಣಾ, ವಿಯೆಟ್ನಾಂ, ಕೊರಿಯಾದ ಯಶಸ್ವಿ ಕ್ರಾಂತಿಗಳು ಇದನ್ನು ತೋರಿಸಿಕೊಟ್ಟಿವೆ.



ಸೋವಿಯತ್ ಒಕ್ಕೂಟದ ಆರಂಭದ ದಶಕಗಳು ಒಂದು ಸಾಮಾಜಿಕವಾಗಿ ನ್ಯಾಯಯುತವಾದ ವ್ಯವಸ್ಥೆಯನ್ನು ಬೆಳೆಸುವ ಅಪಾರ ಸಾಧ್ಯತೆಗಳನ್ನು ತೋರಿಸಿಕೊಟ್ಟವು. ಸಾಮೂಹಿಕ ಶಿಕ್ಷಣವಾಗಲಿ, ಆಹಾರ ಪೂರೈಕೆ, ಆರೋಗ್ಯ ಮತ್ತು ಪೂರ್ಣ ಉದ್ಯೋಗವಾಗಲಿ ಅಥವಾ ಮಹಿಳೆಯರಿಗೆ ನೀಡುವ ಹಕ್ಕುಗಳಾಗಲಿ - ಅದಾಗಲೇ ಶತಮಾನಗಳನ್ನು ಕಂಡಿದ್ದ ಬಂಡವಾಳಶಾಹಿಗೆ ಈ ಯಾವುದರಲ್ಲೂ ಸೋವಿಯತ್ ಒಕ್ಕೂಟವನ್ನು ಸರಿಗಟ್ಟಲಾಗಲಿಲ್ಲ. ಉದಾಹರಣೆಗೆ ಪುರುಷರು ಮತ್ತು ಮಹಿಳೆಯರ ನಡುವೆ ಸಂಪೂರ್ಣ ಸಮಾನತೆಯ ಶಾಸನ ತಂದದ್ದು ಈ ಹೊಸ ಸೋವಿಯತ್ ಪ್ರಭುತ್ವವೇ. ಅತ್ಯಂತ ಹಳೆಯ ಬಂಡವಾಳಶಾಹಿ ಪ್ರಜಾಪ್ರಭುತ್ವವಾದ ಬ್ರಿಟನ್ ಈ ಹಕ್ಕು ನೀಡಿದ್ದು 1928 ರಲ್ಲಷ್ಟೇ.

ಸಮಾಜವಾದೀ ವ್ಯವಸ್ಥೆ

ಅಕ್ಟೋಬರ್ ಕ್ರಾಂತಿಯ ನೇತೃತ್ವವನ್ನು ಕಾರ್ಮಿಕ ವರ್ಗ ವಹಿಸಿದ್ದರಿಂದ ಪ್ರಜಾಸತ್ತಾತ್ಮಕ ಕರ್ತವ್ಯಗಳನ್ನು ಪೂರ್ಣಗೊಳಿಸಿ ಸಮಾಜವಾದವನ್ನು ಕಟ್ಟುವ ಕೆಲಸವನ್ನು ಆರಂಭಿಸಲು ಸಾಧ್ಯವಾಯಿತು. 1871 ರ ಪ್ಯಾರಿಸ್ ಕಮ್ಯೂನಿನ ನಂತರ ಸಮಾಜವಾದವನ್ನು ಕಟ್ಟುವ ಮೊದಲ ಪೂರ್ಣ ಪ್ರಮಾಣದ ಪ್ರಯೋಗ ಇದಾಗಿತ್ತು. ಬಂಡವಾಳಶಾಹಿ ಸುತ್ತುವರೆದಿದ್ದರಿಂದ ಮತ್ತು ಫ್ಯಾಸಿಸಂನ ಉದಯದಿಂದಾಗಿ ಸೋವಿಯತ್ ಒಕ್ಕೂಟ ಒಂದು ಸಮಾಜವಾದಿ ವ್ಯವಸ್ಥೆಯ ಚೌಕಟ್ಟನ್ನು ನಿರ್ಮಿಸಲು ಅಪಾರ ತ್ಯಾಗಗಳನ್ನು ಮಾಡಬೇಕಾಯಿತು. 20ನೇ ಶತಮಾನದ ಅತಿದೊಡ್ಡ ದುಷ್ಟ ಶಕ್ತಿ ಫ್ಯಾಸಿಸಂನ ಸೋಲು ಮುಖ್ಯವಾಗಿ ಸೋವಿಯತ್ ಒಕ್ಕೂಟದ ಅಸ್ತಿತ್ವ ಮತ್ತು ಹೋರಾಟದಿಂದಲೇ ಸಾಧ್ಯವಾದದ್ದು. ಇಂದು, ಸೋವಿಯತ್ ಒಕ್ಕೂಟವನ್ನು ಕಳಚಿ ಹಾಕಿದ್ದರಿಂದ 20ನೇ ಶತಮಾನದ ಚಾರಿತ್ರಿಕ ಅನುಭವಗಳನ್ನು ಕುರಿತಂತೆ ತಪ್ಪಾದ ವಿಕೃತ ಪಾಠಗಳನ್ನು ಜನಗಳ ಪ್ರಜ್ಞೆಯ ಮೇಲೆ ಹೇರಲಾಗುತ್ತಿದೆ.

ವಸಾಹತುಶಾಹಿ, ಸಾಮ್ರಾಜ್ಯಶಾಹಿ ಮತ್ತು ಫ್ಯಾಸಿಸಂನ ವಿರುದ್ಧ ವೀರಾವೇಶದ ಹೋರಾಟವನ್ನು ಅಳಿಸಿಹಾಕಿ, ಇತಿಹಾಸವೆಂದರೆ ಬಂಡವಾಳಶಾಹಿಯ ಅವಿರತ ವಿಜಯಯಾತ್ರೆ ಎಂಬಂತೆ ಬರೆಯಲಾಗುತ್ತಿದೆ. 21ನೇ ಶತಮಾನದ ಆರಂಭದಲ್ಲಿ, ಸಮಾಜವಾದಿ ವ್ಯವಸ್ಥೆ ಅನುಭವಿಸಿದ ತಾತ್ಕಾಲಿಕ ಹಿನ್ನಡೆಗಳನ್ನು ಬಳಸಿ ಸಾಮ್ರಾಜ್ಯಶಾಹಿ ಅತ್ಯಂತ ಆಕ್ರಮಣಕಾರಿ ಸ್ವರೂಪ ಪ್ರದರ್ಶಿಸುತ್ತಿದೆ. ಜಗತ್ತಿನಾದ್ಯಂತ ಸಾಮ್ರಾಜ್ಯಶಾಹೀ ಜಾಗತೀಕರಣ ಮತ್ತು ಕ್ರೂರ ನವ-ಉದಾರವಾದಿ ಬಂಡವಾಳಶಾಹಿಯ ರೂಪದಲ್ಲಿ ಹೊಸದೊಂದು ಸುಲಿಗೆಕೋರ ಸ್ವರೂಪವನ್ನು ಹೇರಲಾಗುತ್ತಿದೆ.

ವಿಶ್ವ ಮತ್ತೊಮ್ಮೆ ಅಮೆರಿಕಾ ನೇತೃತ್ವದ ಆಕ್ರಮಣಕಾರೀ ಸಾಮ್ರಾಜ್ಯಶಾಹಿಯಿಂದ ಮರುವಸಾಹತೀಕರಣವನ್ನು ಅನುಭವಿಸುತ್ತಿದೆ. 1990 ರ ದಶಕದಿಂದ ಅಮೆರಿಕಾ ಮತ್ತು ಅದರ ಮಿತ್ರರ ಮಿಲಿಟರಿ ದುಸ್ಸಾಹಸಗಳು, ಕೊಲ್ಲಿಯುದ್ಧ, 1991 ರಲ್ಲಿ ಇರಾಕ್ ಮೇಲೆ ಧಾಳಿ, ಯುಗೋಸ್ಲಾವಿಯಾದ ಮೇಲೆ ಧಾಳಿ, ಅಫಘಾನಿಸ್ತಾನದ ಮೇಲೆ ಯುದ್ಧ, 2003 ರಲ್ಲಿ ಇರಾಕ್ ಮೇಲೆ ಯುದ್ಧ ಮತ್ತು ಅತಿಕ್ರಮಣದಿಂದ ಅಮೆರಿಕನ್ ಸಾಮ್ರಾಜ್ಯಶಾಹಿ ಯಜಮಾನಿಕೆ ಕ್ರೋಢೀಕರಣಗೊಂಡಿದೆ. ಸಾಮ್ರಾಜ್ಯಶಾಹಿ ಹುಕುಂಗಳನ್ನು ಒಪ್ಪದ ದೇಶಗಳಿಗೆಲ್ಲಾ ಬೆದರಿಕೆ ಹಾಕಲಾಗುತ್ತಿದೆ - ಅದು ಕ್ಯೂಬಾ ಆಗಿರಬಹುದು, ಉತ್ತರ ಕೊರಿಯಾ, ವೆನೆಜುವೆಲಾ, ಸಿರಿಯಾ ಅಥವಾ ಇರಾನ್ ಆಗಿರಬಹುದು.

ಹೆಚ್ಚುತ್ತಿರುವ ಪ್ರತಿರೋಧ

ಇದು ಚಿತ್ರದ ಒಂದು ಬದಿಯಾದರೆ ಇನ್ನೊಂದು ಬದಿಯಲ್ಲಿ ಈ ಸಾಮ್ರಾಜ್ಯಶಾಹಿ ಯಜಮಾನಿಕೆಗೆ ಹೆಚ್ಚುತ್ತಿರುವ ಪ್ರತಿರೋಧ ಕಾಣಬರುತ್ತಿದೆ. ಸಿಪಿಐ(ಎಂ)ನ 18ನೇ ಮಹಾಧಿವೇಶನದ ರಾಜಕೀಯ ನಿರ್ಣಯ ಹೇಳಿರುವಂತೆ ಇರಾಕಿನಲ್ಲಿ ಅಮೆರಿಕನ್ ಅತಿಕ್ರಮಣದ ವಿರುದ್ಧ ಹೋರಾಟ ಸಾಮ್ರಾಜ್ಯಶಾಹಿಯ ಧಾಳಿಗಳ ವಿರುದ್ಧ ಪ್ರಸಕ್ತ ಪ್ರತಿರೋಧಗಳ ಕೇಂದ್ರಬಿಂದುವಾಗಿದೆ. ಅಲ್ಲಿ ಜನತಾ ಪ್ರತಿರೋಧ ತೀವ್ರಗೊಳ್ಳುತ್ತಿದೆ, ವ್ಯಾಪಕಗೊಳ್ಳುತ್ತಿದೆ. ಪ್ರತಿರೋಧದ ಇನ್ನೊಂದು ಮುಖ್ಯ ಕೇಂದ್ರವೆಂದರೆ ಸ್ವಾತಂತ್ರ್ಯ ಮತ್ತು ಪ್ರಭುತ್ವಕ್ಕಾಗಿ ಪ್ಯಾಲೆಸ್ಟೇನಿಯನ್ ಆಂದೋಲನ. ಪ್ಯಾಲೆಸ್ಟೇನಿಯನ್ನರು ಐದು ದಶಕಗಳಿಗೂ ಹೆಚ್ಚು ಕಾಲದಿಂದ ಇಸ್ರೇಲಿ-ಅಮೆರಿಕಾ ಕೂಟದ ವಿರುದ್ಧ ವೀರಾವೇಶದಿಂದ ಹೋರಾಡುತ್ತಿದ್ದಾರೆ. ಇನ್ನೂ ಮಹತ್ವದ ಸಂಗತಿಯೆಂದರೆ ಲ್ಯಾಟಿನ್ ಅಮೆರಿಕಾ ಸಾಮ್ರಾಜ್ಯಶಾಹಿ ಮತ್ತು ನವ-ಉದಾರವಾದಿ ನೀತಿಗಳ ವಿರುದ್ಧ ಅತ್ಯಂತ ಚೈತನ್ಯಶಾಲೀ ಹೋರಾಟಗಳ ತಾಣವಾಗುತ್ತಿದೆ. ಬ್ರೆಝಿಲ್, ವೆನೆಜುವೆಲಾ ಹಾಗೂ ಉರುಗ್ವೆಯಲ್ಲಿ ಎಡ ಮತ್ತು ಜನಪ್ರಿಯ ಆಡಳಿತಗಳ ಉದಯ ಇದಕ್ಕೆ ಉದಾಹರಣೆ. ವೆನೆಜುವೆಲಾದಲ್ಲಿ ಚವೇಜ್‌ರನ್ನು ಪದಚ್ಯುತಗೊಳಿಸಲು ಅಮೆರಿಕಾ ಮತ್ತೆ-ಮತ್ತೆ ನಡೆಸಿದ ಪ್ರಯತ್ನಗಳು ವಿಫಲವಾಗಿರುವುದು ಮತ್ತು ವೆನೆಜುವೆಲಾ ಮತ್ತು ಕ್ಯೂಬಾದ ನಡುವೆ ಬೆಳೆಯುತ್ತಿರುವ ನಿಕಟ ಸಂಬಂಧಗಳು ಗಮನಾರ್ಹ ಘಟನೆಗಳು.

ಬಂಡವಾಳಶಾಹಿ ದೇಶಗಳಲ್ಲಿ ಉದ್ಯೋಗ, ಸಾಮಾಜಿಕ ಭದ್ರತೆ ಮತ್ತು ಬದುಕಿನ ಮೇಲೆ ನಡೆಯುತ್ತಿರುವ ಧಾಳಿಗಳ ವಿರುದ್ಧ ಕಾರ್ಮಿಕ ವರ್ಗದ ಹೋರಾಟಗಳು ನಡೆಯುತ್ತಿದ್ದು, ಕಾರ್ಮಿಕ ವರ್ಗದ ಪ್ರತಿರೋಧ ಸಾಮ್ರಾಜ್ಯಶಾಹಿ - ಪ್ರೇರಿತ ಜಾಗತೀಕರಣದ ವಿರುದ್ಧ ಆಂದೋಲನದ ಕೇಂದ್ರ ಅಂಶವಾಗಿದೆ. ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಆಳುವ ವರ್ಗಗಳು ಕೂಡಾ ಆಗಾಗ ಜನಾಂದೋಲನಗಳ ಒತ್ತಡದಿಂದಾಗಿ ಡಬ್ಲ್ಯುಟಿಓ ಮತ್ತು ಇತರ ಅಂತರ್‍ರಾಷ್ಟ್ರೀಯ ವೇದಿಕೆಗಳ ಅಡಿಯಲ್ಲಿ ಹೇರುವ ದುರ್ಭರ ಶರತ್ತುಗಳನ್ನು ಪ್ರತಿರೋಧಿಸಲು ಪರಸ್ಪರ ಸಹಕರಿಸಬೇಕಾಗಿ ಬಂದಿದೆ.

ಸಮಾಜವಾದಿ ದೇಶಗಳ ಪಾತ್ರ

ಈ ಹಿನ್ನೆಲೆಯಲ್ಲಿ ನಾವು ಸಮಾಜವಾದಿ ದೇಶಗಳ ಪಾತ್ರವನ್ನು ಗಮನಿಸಬೇಕು. ಇವುಗಳಲ್ಲಿ ಮುಖ್ಯವಾದದ್ದು ಚೀಣಾ ಕ್ರಮೇಣ ಒಂದು ಪ್ರಧಾನ ಶಕ್ತಿಯಾಗಿ ಬೆಳೆಯುತ್ತಿರುವುದು. ಎರಡು ದಶಕಗಳಿಗೂ ಹೆಚ್ಚು ಸಮಯದಿಂದ ಅದರ ಒಟ್ಟು ರಾಷ್ಟ್ರೀಯ ಉತ್ಪನ್ನ (ಜಿಡಿಪಿ) 9 ಶೇಕಡಾ ವಾರ್ಷಿಕ ದರದಲ್ಲಿ ಬೆಳೆಯುತ್ತಿದೆ. ಈ ಶತಮಾನದ ಮಧ್ಯದ ಮೊದಲು ಚೀಣಾ ತನ್ನ ಪ್ರಾಬಲ್ಯಕ್ಕೆ ಸವಾಲು ಹಾಕಬಹುದೆಂಬ ಬೆದರಿಕೆಯನ್ನು ಅಮೆರಿಕಾ ಕಾಣುತ್ತಿದೆ. ಅಮೆರಿಕಾದ ಸಾಮರಿಕ ಸಿದ್ಧಾಂತವನ್ನು ಈ ಸವಾಲನ್ನು ಎದುರಿಸುವತ್ತ ರೂಪಿಸಲಾಗುತ್ತಿದೆ.

ಮುಂಬರುವ ದಿನಗಳಲ್ಲಿ ಅಮೆರಿಕನ್ ಸಾಮ್ರಾಜ್ಯಶಾಹಿಯ ಯಜಮಾನಿಕೆಯ ವಿರುದ್ಧ, ಮರುವಸಾಹತೀಕರಣ ಮತ್ತು ವಿಶ್ವ ಸಂಪನ್ಮೂಲಗಳನ್ನು ವಶಪಡಿಸಿಕೊಳ್ಳಲು ಆಕ್ರಮಣಕಾರೀ ಪ್ರಯತ್ನಗಳ ವಿರುದ್ಧ ಹಾಗೂ ಮಿಲಿಟರಿ ಶಕ್ತಿಯ ಪಾಶವೀ ಬಳಕೆಯ ವಿರುದ್ಧ ಹೋರಾಟಗಳು 88 ವರ್ಷಗಳ ಹಿಂದೆ, ಅಕ್ಟೋಬರ್ 1917 ರಲ್ಲಿ ನಡೆದ ವಿಶ್ವದ ಮೊದಲ ಸಮಾಜವಾದಿ ಕ್ರಾಂತಿಯಿಂದ ಹೊಮ್ಮಿದ ದಾರಿದೀಪದಿಂದ ಬೆಳಕು ಪಡೆಯುತ್ತವೆ. ಅಕ್ಟೋಬರ್ ಕ್ರಾಂತಿ ಸಾಮಾಜಿಕ ವಿಮೋಚನೆಗಾಗಿ ಹೋರಾಟದಲ್ಲಿ ಮುಂಬರುವ ಎಲ್ಲಾ ಪೀಳಿಗೆಗಳಿಗೂ ಸ್ಫೂರ್ತಿ ತುಂಬುವಂತದ್ದು ಎಂಬರ್ಥದಲ್ಲಿ ಅದರ ಸಂದೇಶ ಅಮರ.

ಈ ವಾರ ಕರ್ನಾಟಕ

ಮಾತಿನಲ್ಲಿ ಮೆಟ್ರೋ ರೈಲು : ಯೋಜನೆಯಲ್ಲಿ ಕಾಣೆಯಾಗಿದೆ

ಪುಟ 3 ರಿಂದ

ಮೆಟ್ರೋ ರೈಲು ಆಗೇ ಆಗುತ್ತದೆ, ರೈಲು ಓಡಿಯೇ ತೀರುತ್ತದೆ ಎಂದೇ ಹೇಳುತ್ತಿದ್ದಾರೆ ಕಾಂಗ್ರೆಸ್ ಅಧ್ಯಕ್ಷ ಖರ್ಗೆ ಹಾಗೂ ಮುಖ್ಯಮಂತ್ರಿ ಧರಂಸಿಂಗ್. ಸಚಿವ ಸಂಪುಟ ನಿರ್ಧರಿಸಬೇಕು, ದೇವೇಗೌಡರು ಬರೆದ ಪತ್ರದ ಸಾರಾಂಶದ ಚರ್ಚಿಸಬೇಕು ಎನ್ನುತ್ತಾರೆ ಹಣಕಾಸು ಖಾತೆಯನ್ನು ಹೊಂದಿರುವ ಕೈಗಾರಿಕಾ ಸಚಿವ ಸಿಂಧ್ಯ. ಹೀಗೆ ಆಸಕ್ತಿ ನಿರಾಸಕ್ತಿಯಿಂದ ಚರ್ಚೆಗಳು ನಡೆಯುತ್ತಿರುವಾಗಲೇ ಆಶ್ಚರ್ಯಕರ ಸುದ್ದಿಯೊಂದು ಹೊರಬಿದ್ದಿದೆ.

ಈಚೆಗೆ ಬೆಂಗಳೂರು ಮೂಲ ಸೌಕರ್ಯಗಳ ಬಗ್ಗೆ ತಯಾರಿಸಲಾದ ಯೋಜನೆಯಲ್ಲಿ ಮೆಟ್ರೋ ರೈಲು ಕಾಣೆಯಾಗಿದೆ! ಮೂಲಸೌಕರ್ಯಗಳ ನಿರ್ಮಾಣಕ್ಕೆ ಪ್ರಾಶಸ್ತ್ಯವಿರುವ ಕ್ಷೇತ್ರಗಳಿಗೆ ಒಟ್ಟು 10,779 ಕೋಟಿ ಬೇಕಿದೆ. ಇದಕ್ಕೆ ಕೇಂದ್ರದ ನೆರವೂ ಬೇಕು. ರಾಷ್ಟ್ರೀಯ ನಗರ ನಿರ್ಮಾಣ ಯೋಜನೆಯಿಂದ ಪಡೆಯುವ ಇಚ್ಛೆ. ಜಪಾನ್ ಅಂತರಾಷ್ಟ್ರೀಯ ಸಹಕಾರ ಬ್ಯಾಂಕ್‌ನಿಂದ 3700 ಕೋಟಿಯನ್ನು ಯಾಚಿಸಲಾಗಿದೆ. ಕೇಂದ್ರದ ಶೇರಾಗಿ ಶೇ.35, ರಾಜ್ಯದ್ದು ಶೇ.15 ಎಂದಿದೆ.


ಉಳಿದದ್ದು ಸ್ಥಳೀಯ ಸರ್ಕಾರ ಅಂದರೆ ಕಾರ್ಪೊರೇಷನ್ ಇತ್ಯಾದಿ ಸಂಪನ್ಮೂಲಗಳ ಸಂಗ್ರಹ ಹೀಗೆಲ್ಲಾ. ಆದರೆ ಈ ಯೋಜನೆಗಳು 2010ರೊಳಗೆ ಮುಗಿಯಬೇಕು ಎಂಬ ಗುರಿ ಇರಿಸಲಾಗಿದೆ. ಹೀಗಿರುವಾಗ ಮೆಟ್ರೋ ರೈಲು ಯೋಜನೆಯನ್ನೇ ಸೇರಿಸದೆ ಕೇಂದ್ರದ ಮುಂದೆಯೂ ಮಂಡಿಸದಿರುವಾಗ ರೈಲು ಓಡುವುದಾದರೂ ಹೇಗೆ? ಒಂದೋ ರೈಲು ನಿಜಕ್ಕೂ ಓಡಿಸಬೇಕು. ಇಲ್ಲವೇ ಸರ್ಕಾರ ಖಾಲೀ ರೈಲು ಓಡಿಸುವುದು ಬಿಡಬೇಕು. ಕೇವಲ ಮಾತಿನಿಂದ ರೈಲು ಓಡಿ ಬೆಂಗಳೂರು ಸಾರಿಗೆ ದಟ್ಟಣೆ ಕಡಿಮೆಯಾದೀತೇ?

ದಟ್ಟದರಿದ್ರರ ವ್ಯಾಪಕ ದಂಗೆ - ಫ್ರಾನ್ಸ್‌ನಲ್ಲಿ ತುರ್ತುಪರಿಸ್ಥಿತಿ

ಫ್ರಾನ್ಸ್‌ನಲ್ಲಿ ಹಲವು ನಗರಗಳ ಬಡಾವಣೆಗಳಲ್ಲಿ ಸುಮಾರು ಎರಡು ವಾರಗಳ ವ್ಯಾಪಕ ದಂಗೆಯ ನಂತರ ಇಡೀ ದೇಶದಲ್ಲಿ ತುರ್ತುಪರಿಸ್ಥಿತಿ ಘೋಷಿಸಬೇಕಾಗಿ ಬಂದಿರುವುದು ಇತ್ತೀಚಿನ ದಶಕಗಳಲ್ಲೇ ಗಂಭೀರ ಬೆಳವಣಿಗೆ. 1968 ರಲ್ಲಿ ವ್ಯಾಪಕ ವಿದ್ಯಾರ್ಥಿ - ಬಂಡಾಯದ ನಂತರ ಫ್ರಾನ್ಸ್ ಇಂತಹ ತೀವ್ರ ಆಂತರಿಕ ಬಿಕ್ಕಟ್ಟು ಎದುರಿಸುತ್ತಿರುವುದು ಇದೇ ಮೊದಲು. ಇದು ಪಕ್ಕದ ಜರ್ಮನಿಗೂ ಹರಡುವ ಲಕ್ಷಣಗಳೊಂದಿಗೆ ಇದು ಯುರೋಪಿಗೆ ವ್ಯಾಪಿಸಿ, ಅಂತರ್ರಾಷ್ಟ್ರೀಯ ಬಿಕ್ಕಟ್ಟು ಆದೀತು. ಈ ದಂಗೆ ಎಬ್ಬಿಸಿರುವ ವಿಷಯಗಳಂತೂ ಅಂತರ್ರಾಷ್ಟ್ರೀಯ ಮಹತ್ವದ್ದೇ.

ಪ್ಯಾರಿಸ್‌ನ ಹೊರ ಬಡಾವಣೆ ಒಂದರಲ್ಲಿ ಇಬ್ಬರು ಹದಿಹರೆಯದ ಹುಡುಗರನ್ನು ಪೊಲೀಸರು ಅಟ್ಟಿಸಿಕೊಂಡು ಹೋದರು. ಅವರು ಇಲೆಕ್ಟ್ರಿಕಲ್ ಸಬ್-ಸ್ಟೇಶನ್ ಒಂದರ ಗೋಡೆ ಹತ್ತಿ ಅವಿತುಕೊಳ್ಳಲು ಪ್ರಯತ್ನಿಸಿದಾಗ, ವಿದ್ಯುತ್ ಸ್ಪರ್ಶದಿಂದ ಸತ್ತರು. ಇದು ಎರಡು ವಾರಗಳಿಂದ ಫ್ರಾನ್ಸ್ ಹತ್ತಿ ಉರಿಯಲು ಕಿಡಿಯಾಯಿತು. ಫ್ರಾನ್ಸ್‌ನ ವಲಸೆಗಾರರ ನಿರ್ದಿಷ್ಟ ಚರಿತ್ರೆ ಗೊತ್ತಿಲ್ಲದವರಿಗೆ ಈ ಬೆಳವಣಿಗೆಯು ಭಾರಿ ಆಶ್ಚರ್ಯವಾಯಿತು. ಇವು ಸ್ಥಳೀಯ ಆಕ್ರೋಶಗಳು. ಒಂದೆರೆಡು ದಿನಗಳಲ್ಲಿ ಪೊಲೀಸರನ್ನು ಬಿಟ್ಟು 'ಟೈಟ್' ಮಾಡಿದರೆ ಸರಿಹೋಗುತ್ತದೆ ಎಂಬ ಆಳುವವರನ್ನು ಇದು ದಂಗುಬಡಿಸಿತು. ಈ ಹುಡುಗರು ಫ್ರಾನ್ಸ್‌ನ ನಗರದ ಹೊರವಲಯಗಳ 'ಕೊಂಪೆ' ಮಾದರಿಯ ನಿವಾಸಗಳಲ್ಲಿ ವಾಸಿಸುವ ಉತ್ತರ ಆಫ್ರಿಕಾದಿಂದ ಬಂದ ವಲಸೆಗಾರರು, ಫ್ರಾನ್ಸ್‌ನಲ್ಲೇ ಹುಟ್ಟಿದ ಮುಂದಿನ ಪೀಳಿಗೆಯ ಹುಡುಗರು. ಪ್ಯಾರಿಸ್ ಮತ್ತು ಇತರ ಪ್ರಮುಖ ನಗರಗಳ ಹೊರವಲಯದಲ್ಲಿ 'ಅಸ್ಪೃಶ್ಯ' ರಂತೆ ಬದುಕುವ ಈ ಸಮುದಾಯಗಳಲ್ಲಿ ಫ್ರಾನ್ಸ್‌ನ ಇತರ ಪ್ರದೇಶಗಳ ಮೂರುಪಟ್ಟು ನಿರುದ್ಯೋಗ ಇದೆ - ಅಂದರೆ ಶೇಕಡಾ 30! ತಮ್ಮ ಹಿಂದಿನ ಪೀಳಿಗೆಗಿಂತ ಹೆಚ್ಚು ಶಿಕ್ಷಣ ಹೊಂದಿರುವ ಇವರಿಗೆ ಒದಗುವ ಉದ್ಯೋಗವಕಾಶ ಎಂದರೆ ಕಕ್ಕಸ್ಸು ತೊಳೆಯುವುದು, ಗುಡಿಸುವುದು ಮಾತ್ರ. ಅರ್ಥಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವ ಒಬ್ಬ ಯುವಕ ಟಿ.ವಿ. ಸಂದರ್ಶನದಲ್ಲಿ ಮಾರ್ಮಿಕವಾಗಿ ಹೇಳಿದಂತೆ "ನಮ್ಮ ಎಡ್ರೆಸ್ ನೋಡಿದ ಮೇಲೆ ಅವರು ಏನೂ ನೋಡುವುದಿಲ್ಲ. ನಮಗೆ ಅವರು ಕೊಡುವುದು ಕಸಬರಿಕೆ ಮಾತ್ರ". ಈ ವಲಸೆಗಾರರು ಕರಿಯರಾಗಿ, ಬಡವರಾಗಿ ಮಾತ್ರವಲ್ಲ ಅವಮಾನ, ನಿರ್ಲಕ್ಷ್ಯ, ಪಕ್ಷಪಾತ ಅನುಭವಿಸುತ್ತಿರುವುದು. ಅವರಲ್ಲಿ ಬಹುಸಂಖ್ಯಾತರು ಮುಸ್ಲಿಮರೂ





ಆಗಿರುವುದರಿಂದ ಭಯೋತ್ಪಾದಕರ ಹಣೆಪಟ್ಟಿ ಅವರಿಗೆ ಬಿದ್ದಿದೆ.

ಅವರ ಮೇಲೆ ಪ್ಯಾರೀಸಿನ ಪೊಲೀಸರ ದಮನಚಕ್ರ ಗೊತ್ತಿರುವುದೇ. ಈ ಹದಿಹರೆಯದ ಹುಡುಗರು ಪ್ಯಾರೀಸಿನ ಪೊಲೀಸರ ಕೈಗೆ ಸಿಕ್ಕಿಬೀಳುವುದಕ್ಕಿಂತ ವಿದ್ಯುತ್-ಸ್ಪರ್ಶದ ಅಪಾಯ ಕಡಿಮೆ 'ಅಪಾಯಕಾರಿ' ಎಂದು ಭಾವಿಸಿದ್ದು ಎತ್ತಿ ತೋರಿಸುತ್ತದೆ. ವಲಸೆಗಾರರ ವಿರುದ್ಧ ಫ್ರಾನ್ಸ್‌ನಲ್ಲಿ, ಯುರೋಪಿನಾದ್ಯಂತ ಎದ್ದಿರುವ ಅಲೆ ಸಹ ಅವರ ಆಕ್ರೋಶ ಹೆಚ್ಚಿಸಿದೆ. ವಲಸೆಗಾರರನ್ನು ಅವರ ಮೂಲ ದೇಶಗಳಿಗೆ ಕಳಿಸಿಬಿಡಬೇಕು ಎಂಬ ವಾದ ಸ್ವಾಭಾವಿಕವಾಗಿಯೇ ಅವರನ್ನು ಕೆರಳಿಸಿದೆ. ಫ್ರಾನ್ಸ್ ಬಿಟ್ಟರೆ ಬೇರೆ ದೇಶ ನೋಡದ, ಗೊತ್ತಿಲ್ಲದ ಅವರು ಎಲ್ಲಿ ಹೋಗಿಯಾರು? ವ್ಯಾಪಕ ದಂಗೆಗಳ ನಂತರವೂ ಫ್ರಾನ್ಸ್‌ನ ಗೃಹಮಂತ್ರಿ (ಮುಂದಿನ ಆಳುವ ಪಕ್ಷದ ಅಧ್ಯಕ್ಷೀಯ ಅಭ್ಯರ್ಥಿ!) ದಂಗೆಕೋರರನ್ನು ಫ್ರಾನ್ಸ್‌ನ ನಾಗರಿಕತ್ವವನ್ನು ಕಿತ್ತುಕೊಂಡು ಹೊರಗೆ ಕಳಿಸಲಾಗುವುದು ಎಂದು ಹೇಳಿದ್ದರ ಹಿನ್ನೆಲೆಯಲ್ಲಿ, ಈ ಆಕ್ರೋಶದ ತೀವ್ರತೆ ಅರ್ಥಮಾಡಿಕೊಳ್ಳಬಹುದು. ಸಾಲದ್ದಕ್ಕೆ ಫ್ರಾನ್ಸ್‌ನ ಕಣ್ಣು ಕೋರೈಸುವ ವೈಭವೋಪೇತ ಶ್ರೀಮಂತಿಕೆಯ ಅಂಚಿನಲ್ಲಿ ವಾಸಿಸುವ ಅವರಿಗೆ ಈ ವ್ಯವಸ್ಥೆಯ ಕ್ರೌರ್ಯ ಕಣ್ಣಿಗೆ ಹೊಡೆಯುವಂತಹದು.


60 ರ ದಶಕದಲ್ಲಿ ಫ್ರಾನ್ಸ್‌ನಲ್ಲಿ ಇದ್ದ ಕಾರ್ಮಿಕರ ಅಭಾವದ ಹಿನ್ನೆಲೆಯು ವಲಸೆಬಂದ ಉತ್ತರ ಆಫ್ರಿಕಾದ ಈ ಅಲ್ಪಸಂಖ್ಯಾತರು ಈಗ ಫ್ರೆಂಚ್ ಬಂಡವಾಳಶಾಹಿ ವ್ಯವಸ್ಥೆಗೆ ಬೇಡ. 'ಕಲ್ಯಾಣ ರಾಜ್ಯ'ದ ಸವಲತ್ತುಗಳು ಅವರಿಗೆ ಯಾವತ್ತೂ ಸಮಾನವಾಗಿ ಸಿಕ್ಕಿಲ್ಲ. ಕಲ್ಯಾಣ ರಾಜ್ಯವನ್ನೇ ಕಳಚಿ ಹಾಕಿರುವ ಇಂದಿನ ಸ್ಥಿತಿಯಲ್ಲಿ ಇವರು ಬೇಡವಾದರು. ಆಳುವ ವರ್ಗದರಿಗೆ ಅಸ್ಪೃಶ್ಯರು. ನೆರೆಯ ಜರ್ಮನಿ(ತುರ್ಕಿ ಅಲ್ಪಸಂಖ್ಯಾತರು) ಮುಂತಾಗಿ ಯುರೋಪಿನ ದೇಶಗಳಲ್ಲಿ ಇದೇ ಪರಿಸ್ಥಿತಿ ಇದೆ. ಅಲ್ಲೂ ಈ ದಂಗೆ ವೇಗವಾಗಿ ಹರಡಿದೆ. ಇದು ಸಾಮ್ರಾಜ್ಯಶಾಹಿ ಜಾಗತಿಕ ಮತ್ತು ಬಂಡವಾಳಶಾಹಿ ಮೂಲಭೂತ ಅಸ್ಥಿರ ವ್ಯವಸ್ಥೆಯ ಹುಳುಕು ಬಯಲುಗೊಳಿಸುವ ದಂಗೆ. ದಂಗೆ ಹರಡಿದ ವೇಗ, ತೀವ್ರತೆ ಆಶ್ಚರ್ಯಕರವಾದರೂ ಅವರ ಹಿಂದಿರುವ ಕಾರಣಗಳ ಬಗ್ಗೆ ಗೊತ್ತಿದ್ದವರಿಗೆ, ಈವರೆಗೆ ಈ ಆಕ್ರೋಶ ಯಾಕೆ ಆಸ್ಫೋಟಗೊಳ್ಳಲಿಲ್ಲ ಎಂದು ಆಶ್ಚರ್ಯವಾಗಬೇಕು.

ಸಾರ್ಕ್‌ನ್ನು ಮುಂದೊಯ್ಯುವುದು ಈಗ ಭಾರತದ ಜವಾಬ್ದಾರಿ

ದಕ್ಷಿಣ ಏಶ್ಯಾ ಪ್ರಾದೇಶಿಕ ಸಹಕಾರ ಸಂಘ (ಸಾರ್ಕ್) ದ 13ನೇ ಶೃಂಗಸಭೆ ಸಾಕಷ್ಟು ವಿಳಂಬ ಮತ್ತು ಮುಂದೂಡಿಕೆಗಳ ನಂತರ ಕೊನೆಗೂ ಢಾಕಾದಲ್ಲಿ ನಡೆದಿದೆ. ಹಿಂದಿನ ಬಾರಿ ಈ ಸಮ್ಮೇಳನ ಮುಂದೂಡಲ್ಪಟ್ಟದ್ದು ನೇಪಾಳದ ದೊರೆ ಅಲ್ಲಿ ಪ್ರಜಾಪ್ರಭುತ್ವವನ್ನು ವಜಾ ಮಾಡಿದ ಹಿನ್ನೆಲೆಯಲ್ಲಿ ಭಾರತ ಮತ್ತು ಇತರ ದೇಶಗಳು ನೇಪಾಳದ ದೊರೆಯ ಕೃತ್ಯಗಳು ನ್ಯಾಯಸಮ್ಮತವೆಂದಾಗದಿರಲಿ ಎಂದು ಭಾವಿಸಿದವು. ಇದು ಸರಿಯಾದ ಕ್ರಮವಾಗಿತ್ತು. ಆದರೆ ಕೊನೆಗೂ ಸಭೆ ಸೇರಿದ ಶೃಂಗ ಸಮ್ಮೇಳನ 'ದಕ್ಷಿಣ ಏಶ್ಯಾ ಮುಕ್ತ ವ್ಯಾಪಾರ ಪ್ರದೇಶ' (ಸಾಫ್ಟಾ) ದ ಸ್ಥಾಪನೆಯ ಗುರಿಯತ್ತ ಸಾಕಷ್ಟು ಹೆಜ್ಜೆಯಿಡಲಿಲ್ಲ. ಇದರ ಸ್ಥಾಪನೆಯ ಬಗ್ಗೆ ಈ ಪ್ರದೇಶದಲ್ಲಿ ಅಪಾರ ಭರವಸೆಗಳಿದ್ದವು. ಈ ಗುರಿ ಸಾಧನೆಯತ್ತ ಸಾಗುವ ಬದಲು ಭಾರತವು ಶ್ರೀಲಂಕಾ ಮತ್ತಿತರ ದೇಶಗಳೊಡನೆ ದ್ವಿಪಕ್ಷೀಯ ಮುಕ್ತ ವ್ಯಾಪಾರ ಒಪ್ಪಂದಗಳನ್ನು ಮಾಡಿಕೊಳ್ಳುತ್ತಿದೆ. ಭಾರತ ಮತ್ತು ಪಾಕಿಸ್ತಾನ ತಮ್ಮ ದ್ವಿಪಕ್ಷೀಯ ಅಜೆಂಡಾವನ್ನು ಪ್ರತ್ಯೇಕವಾಗಿಯೇ ನಡೆಸಬಹುದು, ಅದು ಸಾಫ್ಟಾದ ಸ್ಥಾಪನೆಗೆ ಅಡ್ಡಿಯಾಗಬಾರದು.

ಈ ಪ್ರದೇಶದಲ್ಲಿ ಬಡತನ ನಿವಾರಣೆ ಸಾರ್ಕ್ ಸ್ಥಾಪನೆಯಾದಂದಿನಿಂದ ಅದರ ಅಜೆಂಡಾದಲ್ಲಿರುವ ಪ್ರಶ್ನೆ. ಅದರಲ್ಲೂ ಅರ್ಥಪೂರ್ಣ ಮುನ್ನಡೆ ಕಂಡಿಲ್ಲ. ಢಾಕಾ ಘೋಷಣೆ ಒಂದು ನಿಧಿ ಸ್ಥಾಪಿಸುವ ಹಾಗೂ ಈ ಯೋಜನೆಗಳ ಅನುಷ್ಠಾನಕ್ಕೆ ಒಂದು ದಶಕವನ್ನು ಸಮರ್ಪಿಸುವತ್ತ ಸಾಮೂಹಿಕವಾಗಿ ಕೆಲಸ ಮಾಡಲು ಒಂದು ವ್ಯವಸ್ಥೆಯನ್ನು ನಿರ್ಮಿಸುವ ಮಾತಾಡಿದೆ.

ಈ ಶೃಂಗ ಸಮ್ಮೇಳನ ಭಯೋತ್ಪಾದನೆಯ



ಪ್ರಶ್ನೆಯನ್ನು ಚರ್ಚಿಸಿದರೂ ನಿರ್ದಿಷ್ಟ ಕ್ರಮಗಳು ಅಥವಾ ಪ್ರಸ್ತಾವಗಳೇನೂ ಇರಲಿಲ್ಲ. ಈ ಪ್ರದೇಶದಲ್ಲಿ ಭಯೋತ್ಪಾದನೆಯನ್ನು ವಿರೋಧಿಸಬೇಕೆಂಬ ಆಶಯವನ್ನು ಘೋಷಿಸಿದರಷ್ಟೇ ಈ ಸಮಸ್ಯೆಗೆ ಅರ್ಥಪೂರ್ಣ ಪರಿಹಾರ ಸಿಗಲಾರದು, ನಿಜವಾಗಿ ಇಂತಹ ಘೋಷಣೆ ಭಯೋತ್ಪಾದನೆಯನ್ನು ಎದುರಿಸಲು ಹಾಗೂ ಭಯೋತ್ಪಾದಕ ರಚನೆಗಳನ್ನು ಕಳಚಿಹಾಕಲು ರಾಜಕೀಯ ಇಚ್ಛಾಶಕ್ತಿಯ ಅಭಾವವನ್ನು ಮರೆಮಾಚುತ್ತದೆ. ಭಾರತ ಮತ್ತೆ-ಮತ್ತೆ ತನ್ನ ನೆಲದಿಂದ ಕಾರ್ಯಪ್ರವೃತ್ತರಾಗಿರುವ ಭಯೋತ್ಪಾದಕ ಗುಂಪುಗಳು ಪಾಕಿಸ್ತಾನ ಮತ್ತು ಬಾಂಗ್ಲಾದೇಶ ಪ್ರದೇಶಗಳಲ್ಲಿ ಆಧಾರ ನೆಲೆಗಳನ್ನು ಹೊಂದಿರುವ ಬಗ್ಗೆ ಗಮನ ಸೆಳೆದಿದೆ. ಭವಿಷ್ಯದಲ್ಲಿ ಇದನ್ನು ಗಂಭೀರವಾಗಿ ಎದುರಿಸಬೇಕಾಗಿದೆ.

ಈಗ ಪ್ರಧಾನಮಂತ್ರಿ ಮನಮೋಹನ ಸಿಂಗ್ ಸಾರ್ಕ್‌ನ ಮುಖಂಡತ್ವ ವಹಿಸಿಕೊಂಡಿದ್ದಾರೆ. ಆದ್ದರಿಂದ ಈಗ ಢಾಕಾ ಘೋಷಣೆಯನ್ನು ಮುಂದಕ್ಕೊಯ್ದು ಈ ಪ್ರದೇಶ ಎದುರಿಸುತ್ತಿರುವ ಬಡತನ ನಿವಾರಣೆ ಮತ್ತು ಭಯೋತ್ಪಾದನೆಯ ಅವಳಿ ಸವಾಲುಗಳನ್ನು ಎದುರಿಸುವ ಜವಾಬ್ದಾರಿ ಭಾರತದ ಮೇಲಿದೆ.

ಸಾರ್ಕ್ ಸದಸ್ಯತ್ವವನ್ನು ಅಫಘಾನಿಸ್ತಾನಕ್ಕೆ ಪ್ರವೇಶ ನೀಡುವ ಮೂಲಕ ವಿಸ್ತರಿಸಲಾಗಿದೆ. ಏಳು ರಾಷ್ಟ್ರಗಳ ಸದಸ್ಯತ್ವದೊಂದಿಗೆ ಸ್ಥಾಪನೆಯಾದ ಸಾರ್ಕ್‌ನ ಮೊದಲ ವಿಸ್ತರಣೆ ಇದು. ಚೀಣಾ ಮತ್ತು ಜಪಾನ್ ಎರಡೂ ಆರ್ಥಿಕ ಸಹಕಾರಕ್ಕೆ ಸಾರ್ಕ್‌ನೊಡನೆ ವ್ಯವಹರಿಸ ಬಯಸುತ್ತಿರುವುದರಿಂದ ವೀಕ್ಷಕರು ಎಂಬ ಒಂದು ಹೊಸ ವಿಧವನ್ನು ಸೃಷ್ಟಿಸುವ ವಿಚಾರವನ್ನು ಶೃಂಗಸಭೆ ಒಪ್ಪಿದೆ. ಅಫಘಾನಿಸ್ತಾನ ದಶಕಗಳ ಅಮೆರಿಕನ್ ಸಾಮ್ರಾಜ್ಯಶಾಹಿ ಮಧ್ಯಪ್ರವೇಶ, ಯುದ್ಧ ಮತ್ತು ಸಂಘರ್ಷದ ನಂತರ ರಾಜಕೀಯ ಕ್ರೋಢೀಕರಣದ ಪ್ರಕ್ರಿಯೆಯಲ್ಲಿ ಹಲವಾರು ಸವಾಲುಗಳನ್ನು ಎದುರಿಸಬೇಕಾಗಿದೆ. ಹಾಗೂ ಅದು ಆರ್ಥಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಸಮಗ್ರೀಕರಣಗೊಂಡು ಒಂದು ಸ್ವತಂತ್ರ ಸಾರ್ವಭೌಮ ದೇಶವಾಗಿ ಕ್ರೋಢೀಕರಣಗೊಳ್ಳುತ್ತದೆ ಎಂಬ ನಿರೀಕ್ಷೆಯಿದೆ.

ಈಗ ಈ ದೇಶಗಳ ಬಹುಪಾಲು ಜನಗಳಿಗೆ ಪರಿಹಾರ ಮತ್ತು ಅಭಿವೃದ್ಧಿ ಎರಡನ್ನೂ ಒದಗಿಸುವಂತಹ ಒಂದು ವ್ಯವಸ್ಥೆಯತ್ತ ಮುಂದೊಯ್ಯುವುದು ಭಾರತದ ಜವಾಬ್ದಾರಿಯಾಗಿದೆ.

'ಪುರೂರವ ಮತ್ತು ಊರ್ವಶಿ' ನಾಟಕ ಪ್ರದರ್ಶನ

ಮತ್ತೆ ಚಿಗುರಿದ ಶಿವಮೊಗ್ಗ ಸಮುದಾಯ

ನವೆಂಬರ್ 15ರಂದು ಶಿವಮೊಗ್ಗೆಯ ಕುವೆಂಪು ರಂಗಮಂದಿರದಲ್ಲಿ ಕೇಶವ ಶರ್ಮ ಅವರು ರಚಿಸಿದ 'ಪುರೂರವ ಮತ್ತು ಊರ್ವಶಿ' ಎಂಬ ನಾಟಕವನ್ನು ಸಮುದಾಯ ಶಿವಮೊಗ್ಗ ಪ್ರದರ್ಶಿಸಿತು. ವಿಚಾರ ಮಂಥನದ ಮನಸ್ಸಿನ ಸುಮಾರು ಮುನ್ನೂರು ಜನ ನಾಟಕವನ್ನು ನೋಡಲು ಬಂದದ್ದೇ ಪ್ರದರ್ಶನದ ಮೊದಲ ಯಶಸ್ಸು ಎಂದು ಹೇಳಬೇಕು. ಕಾರಣಾಂತರಗಳಿಂದ ನಿಷ್ಕ್ರಿಯವಾಗಿದ್ದ ಶಿವಮೊಗ್ಗ ಸಮುದಾಯ ಮತ್ತೆ ಚಟುವಟಿಕೆ ಪ್ರಾರಂಭಿಸಿರುವುದು ಉತ್ತಮ ಬೆಳವಣಿಗೆ. ಪುರಾಣ ಪ್ರವಚಿಸಿದ ಸರಳವಾದ ಕಥಾನಕಗಳನ್ನು, ಭಾಸ, ಕಾಳಿದಾಸ ಮುಂತಾದವರು ಸಿದ್ಧಪಡಿಸಿಕೊಟ್ಟ ಅಭಿಜಾತ ನಾಟಕಗಳನ್ನು ನೋಡಿದ ಪ್ರೇಕ್ಷಕನಿಗೆ ವಿಮರ್ಶಾತ್ಮಕವಾಗಿ ಚಿಂತನೆಗೆ ಹಚ್ಚುವ ಈ ಪ್ರಯೋಗ ಒಂದು ಅನನ್ಯ ಪ್ರಯತ್ನವೇ ಸರಿ. ಡಿ.ಡಿ.ಕೊಸಾಂಬಿಯವರ "ಪುರಾಣ ಮತ್ತು ವಾಸ್ತವ" ಎಂಬ ಪುಸ್ತಕದಲ್ಲಿನ ಪುರೂರವ ಮತ್ತು ಊರ್ವಶಿ ಮತ್ತು ಕೂಡು ದಾರಿಯಲ್ಲಿ ಮಾತೃದೇವತೆಯರು ಎಂಬ ಪ್ರಬಂಧಗಳನ್ನು ಆಧರಿಸಿ, ಕಲ್ಪನೆಯನ್ನು ಮೇಳೈಸಿ, ತಾಂತ್ರಿಕವಾಗಿ ವಿನೂತನ ಎನ್ನಿಸುವ ಒಂದು ನಾಟಕವನ್ನು ಶ್ರೀ ಕೇಶವ ಶರ್ಮ ಅವರು ಕಟ್ಟಿಕೊಟ್ಟಿದ್ದಾರೆ. ಪುರೂರವ ಮತ್ತು ಊರ್ವಶಿಯ ಕತೆಯು ಋಗ್ವೇದ ಮತ್ತು ಪುರಾಣಗಳಲ್ಲಿ ಕಂಡುಬರುತ್ತದೆ. ಮೂಲ ಕಥೆ ಒಂದೇ ಆದರೂ ಸ್ವಲ್ಪ ಬದಲಾದ ವಿವರಣೆಗಳೂ ಕಂಡುಬರುತ್ತವೆ. ಕಾಳಿದಾಸನು ತನ್ನ ವಿಕ್ರಮೋರ್ವಶೀಯ ಎಂಬ ನಾಟಕವನ್ನು ಹೆಚ್ಚಿನ ಬದಲಾವಣೆಯೊಡನೆ ಒಂದು ಅಭಿಜಾತ ಪರಂಪರೆಯ ವಿಜೃಂಭಿತ ಮಾದರಿಯಲ್ಲಿ ರಚಿಸಿದ್ದಾನೆ. ಆದರೆ ಕೇಶವಶರ್ಮ ಅವರು ನಾಟಕದ ವಸ್ತು ಮತ್ತು ರೂಪ ಎರಡನ್ನೂ ಭಿನ್ನ ಮಾದರಿಯಲ್ಲಿ ರಚಿಸಿದ್ದಾರೆ.

ಸಾಮಾನ್ಯವಾಗಿ ಮಾತೃಮೂಲೀಯ ಕುಟುಂಬ ವ್ಯವಸ್ಥೆಯನ್ನು ಶೃತಪಡಿಸುವ ಆರ್ಯಪೂರ್ವ ಕಥೆಗಳು, ಆರ್ಯನ್ನರಿಂದ ರಚಿಸಲಾದ ಸಾಹಿತ್ಯಗಳಲ್ಲಿ ಪಿತೃ ಪ್ರಧಾನ ವ್ಯವಸ್ಥೆಯನ್ನು ಪುಷ್ಟೀಕರಿಸುವ, ಅಥವಾ ಮಾತೃಮೂಲೀಯ ವ್ಯವಸ್ಥೆಯು ಸೋಲೊಪ್ಪುವ ಕಥೆಯಾಗಿ ಬಿಂಬಿತವಾಗಿವೆ. ಋಗ್ವೇದದಲ್ಲಿ ಕಂಡುಬರುವ ಮಾತೃ ಪ್ರಧಾನ ವ್ಯವಸ್ಥೆಯ ಸಂಕೇತವಾದ ಉಷೆಯು ಇಂದ್ರನಿಗೆ ಸೋಲುವ ಮೂಲ ಹಂದರವುಳ್ಳ ಈ ಕಥೆಯಲ್ಲಿ ಉಷೆಯ ಮಗಳಾದ ಊರ್ವಶಿಯು ಪುರೂರವನೊಂದಿಗೆ ಕೆಲಕಾಲ ಸಂಬಂಧವನ್ನು ಹೊಂದಿದ್ದು ನಂತರ ಅವನನ್ನು ತೊರೆಯುತ್ತಾಳೆ. ಅವಳ ನಿಷ್ಠುರ ನುಡಿಗಳು ಮತ್ತು ಕಠೋರ ನಿರ್ಧಾರಗಳಿಗೆ ತುತ್ತಾಗಿ ಘಾಸಿಗೊಂಡ ಪುರೂರವನು ಅಂತಿಮವಾಗಿ ಅಗ್ನಿಪ್ರವೇಶ ಮಾಡುತ್ತಾನೆ. ಇಲ್ಲಿನ ತಾತ್ವಿಕ ಸಂಘರ್ಷವು ನಾಟಕ ತಂತ್ರವಾಗಿ ರೂಪುಗೊಂಡಿದೆ. ಮೇಲ್ನೋಟಕ್ಕೆ ನಿರೂಪಣಾ ಪ್ರಧಾನವಾಗಿರುವಂತೆ ಕಂಡುಬಂದರೂ ಕಥೆಯ ಪ್ರಸ್ತುತಿಯ ತರ್ಕವು ಕಥನ ತಂತ್ರವಾಗಿ ಹೊಮ್ಮುತ್ತದೆ. ಉಷೆ ಮತ್ತು ಇಂದ್ರನ ಪಾತ್ರಕ್ಕೆ ಹೆಚ್ಚು ಅವಕಾಶವಿರದ ಕಾರಣ ಅಸ್ಪಷ್ಟತೆಯ ದೋಷ ಕಾಡುತ್ತದೆ. ಊರ್ವಶಿಯು ಪುರೂರವನನ್ನು ಬಿಡುವ ಸಂದರ್ಭವೂ ಸಹ ದೃಶ್ಯವಾಗಿ ಹೊಮ್ಮಿದ್ದರೆ ಸಾರ್ಥಕವಾಗುತ್ತಿತ್ತು.



ಹೆಚ್.ವಿ.ವೇಣುಗೋಪಾಲ್

ಪ್ರಯೋಗವು ಸಹ ಘೋಷಣೆಯ ಮಾದರಿಯನ್ನನುಸರಿಸಿ ಗಟ್ಟಿ ಧ್ವನಿಯ ವಾಚ್ಯಶಕ್ತಿಯನ್ನು ಹೆಚ್ಚಾಗಿ ಅವಲಂಬಿಸಿ ಶ್ರೀಪಾದ ಭಟ್ ಅವರು ಈ ನಾಟಕವನ್ನು ನಿರ್ದೇಶಿಸಿದ್ದಾರೆ. ಯಕ್ಷಗಾನ ಕುಣಿತದ ಪ್ರಸಂಗ, ಕಥೆಯ ನಿರೂಪಣೆಗೆ ಗತ್ತನ್ನು ತಂದುಕೊಡುತ್ತಿತ್ತು. ನಾಟಕಕ್ಕೆ ಅಳವಡಿಸಲಾದ ಸಂಗೀತ ಒಟ್ಟು ವಿನ್ಯಾಸವನ್ನು ಪೋಷಿಸಲಾರದೇ ಸೊರಗಿತು. ಆದಿಮಕಾಲದ ಕಥೆಯು ಅಭಿಜಾತ ರಚನೆಯ ವಿನ್ಯಾಸದಲ್ಲಿ ಸಹಜವಾಗಿ ತಾಳ ಮೇಳಗಳನ್ನು ಕಳೆದು ಕೊಳ್ಳುತ್ತಿರುವಂತೆ ಕಾಣುತ್ತಿತ್ತು. ಆದರೆ ಕುವೆಂಪು ವಿಶ್ವವಿದ್ಯಾಲಯದ ಆರು ಜನರ ವಿದ್ಯಾರ್ಥಿಗಳ ತಂಡ ಎಂಭತ್ತು ನಿಮಿಷಗಳ ಪ್ರದರ್ಶನವನ್ನು ಸರಳವಾಗಿ, ನಿರಾಯಾಸವಾಗಿ, ಕಥೆಯ ತರ್ಕವು ಆಪ್ತವಾಗುವಂತೆ ಅಭಿನಯ ಗೆಲ್ಲುತ್ತದೆ. ಅವರುಗಳಿಗೊಂದು ವಿಶೇಷ ಬೆನ್ನು ಚಪ್ಪರಿಕೆಯ ಅಗತ್ಯ ಕಾಣುತ್ತದೆ. ○

'ಮೆರವಣಿಗೆ' - ಬೀದಿ ನಾಟಕ ಪ್ರದರ್ಶನ

ನವೆಂಬರ್ 4ರಂದು ರಂಗಶಂಕರದಲ್ಲಿ ಸಮುದಾಯ ಬೆಂಗಳೂರು ಅಭಿನಯಿಸಿದ 'ಮೆರವಣಿಗೆ' ಬಾದಲ್ ಸರ್ಕಾರರ ಮೂರನೇ ರಂಗಭೂಮಿ ಪ್ರಯೋಗ. ಸಮುದಾಯ ಕಳೆದ 30 ವರ್ಷಗಳಿಂದ ಬೀದಿನಾಟಕಗಳನ್ನು, ಸಾಂಸ್ಕೃತಿಕ ಜಾಥಾಗಳನ್ನು ಮಾಡುತ್ತಾ ಜನರನ್ನು ಕಾಲಕಾಲದ ಸಾಮಾಜಿಕ ಸಾಂಸ್ಕೃತಿಕ ವಿಚಾರಗಳ ಚಿಂತನೆಗೆ ಹಚ್ಚುವತ್ತ ಅವಿರತವಾಗಿ ನಿರತವಾಗಿದೆ. ಈಗ್ಗೆ ಇಪ್ಪತ್ತೈದು ವರ್ಷಗಳಷ್ಟು ಹಿಂದೆಯೇ ಬಂಗಾಲದ ಬಾದಲ್ ಸರ್ಕಾರರೇ ಬೆಂಗಳೂರಿಗೆ ಬಂದು ಬೀದಿ ನಾಟಕದ ರಂಗ ತರಬೇತಿ ನೀಡಿ ಹೋದುದು ಬೆಂಗಳೂರಿಗರ ಮನಸ್ಸಿನಲ್ಲಿ ಇನ್ನೂ ಅಚ್ಚಳಿಯದೇ ಇದೆ. ಆಗ ಗಂಗಾಧರಸ್ವಾಮಿಯವರು ಅನುವಾದ ಮಾಡಿ ನಿರ್ದೇಶನ ಮಾಡಿದ 'ಮೆರವಣಿಗೆ' (ಮೂಲ : ಜುಲೂಸ್) ನಾಟಕವನ್ನು ಈಗ ಮತ್ತೆ ಹೊಸದೆನ್ನಿಸುವಂತೆ ಸಮುದಾಯದ ಶಶಿಧರ್ ಭಾರೀಘಾಟ್ ಅವರು ನಿರ್ದೇಶಿಸಿದ್ದಾರೆ.

ಎಪ್ಪತ್ತರ ದಶಕದಲ್ಲಿ ರಾಷ್ಟ್ರ ಎದುರಿಸುತ್ತಿದ್ದ ಎಲ್ಲ ಬಗೆಯ ಮೂಲ ಸೌಲಭ್ಯಗಳ ಕೊರತೆ, ಬೌದ್ಧಿಕ ದಾರಿದ್ರ್ಯ, ಸಾಮಾಜಿಕ ಬದ್ಧತೆಯ ನಾಶ, ಕೋಮುವಾದದ ಕ್ರೂರ ಮುಖಗಳು, ವ್ಯವಸ್ಥೆಯ ಆಷಾಢಭೂತಿತನ ಮುಂತಾದವುಗಳನ್ನು ಅನಾವರಣಗೊಳಿಸುತ್ತಾ, ನಮಗೇ ತಿಳಿಯದಂತೆ ನಮ್ಮ ವರ್ತಮಾನದಲ್ಲಿ ನಾವೇ ಕಳೆದು ಹೋಗುತ್ತಿರುವ, ಪ್ರತಿದಿನ ಕೊಲೆಯಾಗುತ್ತಿರುವ ಶಂಕೆಯನ್ನು ಹುಟ್ಟುಹಾಕುತ್ತಾ, ಬೌದ್ಧಿಕ ಎಚ್ಚರದ ನೆಪದಲ್ಲಿ ತಣ್ಣನೆಯ ನಡುಕವನ್ನು ನೆಡುವ ಈ ನಾಟಕದ ಹಂದರ ಎಣಿಸಲಾಗದಷ್ಟು ಆಶ್ಚರ್ಯಗಳ ಸರಮಾಲೆಯಾಗಿದೆ. ಹೊಟ್ಟೆ ಬಟ್ಟೆ ಮೆರವಣಿಗೆ, ಪಾರಮಾರ್ಥದ ಮೆರವಣಿಗೆ, ಕ್ರಾಂತಿಕಾರೀ ಮೆರವಣಿಗೆ, ಸೈನಿಕರ ಮೆರವಣಿಗೆ, ಸಾಧು ಸಂತರ ಮೆರವಣಿಗೆ, ಬರಗಾಲ ಪೀಡಿತರ ಮೆರವಣಿಗೆ, ಶೋಕ ಮೆರವಣಿಗೆ, ಧಿಕ್ಕರಿಸುವ ಮೆರವಣಿಗೆ, ಜಗದ್ಗುರುಗಳ ಮೆರವಣಿಗೆ, ಹೀಗೆ ನಮ್ಮ ಸುತ್ತ ದಿನವೂ ಇರುವ ಮೆರವಣಿಗೆಗಳನ್ನೇ ಕಥೆಯ ಮೂಲವಸ್ತುವನ್ನಾಗಿಸಿಕೊಂಡು ಹೆಣೆದ ಈ ನಾಟಕದಲ್ಲಿ ಮೇಲ್ನೋಟಕ್ಕೆ ಅನೇಕ ತುಂಡು ಸಂಗತಿಗಳನ್ನು ಮನಬಂದಂತೆ ಹೆಣೆಯಲಾಗಿದೆ ಎಂದು ಕಂಡುಬಂದರೂ 'ಮುನ್ನ' ಪಾತ್ರದ ಹಳಹಳಿಕೆಯಲ್ಲಿ ಎಲ್ಲವೂ ಒಂದು ಸೂತ್ರದಲ್ಲಿರುವಂತೆ ರೂಪುಗೊಳ್ಳುತ್ತಾ ಹೋಗುತ್ತದೆ. "ಮೆರವಣಿಗೆ ಕೆಳಗೆ ಸಿಕ್ಕಿ ಸಾಯ್ತಾ ಇದ್ದೀನಿ. ಪ್ರತಿ ದಿನ ನನ್ನಂತಹ ಸಾವಿರಾರು ಜನ ಕೊಲೆಯಾಗ್ತಾ ಇದ್ದಾರೆ. ನೀವೆಲ್ಲಾ ರಸ್ತೆಯ ಎರಡೂ ಬದಿ ಕೂತ್ಕೊಂಡು ಮೆರವಣಿಗೆ ನೋಡ್ತಾ ಇದ್ದೀರಿ" ಎಂಬ ಮುನ್ನನ ಮಾತು ಪ್ರೇಕ್ಷಕರನ್ನು ಕಸಿವಿಸಿಯಲ್ಲಿ ಸಿಲುಕಿಬಿಡುತ್ತದೆ.

ಮಧ್ಯದಲ್ಲಿ ಒಂದು ಎತ್ತರದ ಬೀದಿ ದೀಪದ ಕಂಭ. ಅದಕ್ಕೆ ಒಂದು ವೃತ್ತ. ವೃತ್ತದ ನಾಲ್ಕೂ ಬದಿಯಲ್ಲಿ ರಸ್ತೆಗಳು, ರಸ್ತೆಗಳಿಗೆ ಅಡ್ಡರಸ್ತೆಗಳು ಹೀಗೆ ಒಂದು ಊರಿನ ಸರ್ವೇಸಾಮಾನ್ಯ ಪ್ರಮುಖ ವೃತ್ತದಂತೆ ಕಂಡುಬಂದ ರಂಗ ಸಜ್ಜಿಕೆಯಲ್ಲಿ ಅಲ್ಲಿನ ರಸ್ತೆಯ ಎರಡೂ ಬದಿಗಳಲ್ಲಿ ಕೂರುವಂತೆ ಕುರ್ಚಿಗಳನ್ನು ಹಾಕಿ, ಎಲ್ಲ ಪ್ರೇಕ್ಷಕರ ಮಧ್ಯೆ ನಿರ್ಮಿಸಲಾದ ರಸ್ತೆಗಳಲ್ಲಿ ನಾಟಕವನ್ನು ಪ್ರಯೋಗಿಸಿದುದು ಹೆಚ್ಚು ಪರಿಣಾಮಕಾರಿಯಾಗಿತ್ತು. ಕೊನೆಗಂತೂ ನಟರು ಅಲ್ಲಿದ್ದ ಎಲ್ಲ ಪ್ರೇಕ್ಷಕರ ಕೈಗೆ ಮೇಣದ ಬತ್ತಿಯನ್ನು ಕೊಟ್ಟು ಮೆರವಣಿಗೆಯನ್ನು ಹಚ್ಚಿಕೊಟ್ಟು ತಾವು ಹೊರಬಂದು ಇದು ನಿಮ್ಮದೇ ಮೆರವಣಿಗೆ ಎಂದು ಹೇಳಿದುದು ಮಾರ್ಮಿಕವಾಗಿತ್ತು. ಹೊಸ ವಿನ್ಯಾಸದಲ್ಲಿ ನಿರ್ದೇಶಿಸಿದ ಶಶಿಧರ್ ಭಾರೀಘಾಟ್ ಮತ್ತು ತನ್ಮಯರಾಗಿ ನಟಿಸಿದ ಬೆಂಗಳೂರು ಸಮುದಾಯದ ಗೆಳೆಯರು ಅಭಿನಂದನಾರ್ಹರು. ○

ಚಿಲ್ಲರೆ ವ್ಯಾಪಾರದಲ್ಲೂ ವಿದೇಶಿ ಕಂಪನಿಗಳ ಲಗ್ಗೆ

ಪುಟ 7 ರಿಂದ

ಉತ್ಪಾದನೆಗಳನ್ನು ಈ ಕಂಪನಿಯು ಖರೀದಿಸಬಹುದು. ಆಗ ಈ ಕಂಪನಿಗಳು ಹೇಳಿದ ಉತ್ಪಾದನೆಗಳನ್ನೇ ಇಲ್ಲಿನ ರೈತರು, ಕಾರ್ಖಾನೆಗಳು ತಯಾರಿಸಬೇಕಾಗುತ್ತದೆ. ಇದೆಲ್ಲದರ ಜತೆಗೆ, ನಮ್ಮ ಅನುಭವ ಏನೆಂದರೆ, ಸಾಮ್ರಾಜ್ಯಶಾಹಿ ದೇಶಗಳು ತಮ್ಮ ರೈತರಿಗೆ, ಉತ್ಪಾದಕರಿಗೆ ತೀವ್ರ ಸಬ್ಸಿಡಿ, ತೆರಿಗೆ ರಿಯಾಯಿತಿ ನೀಡುವ ಮೂಲಕ ಮೂರನೇ ಜಗತ್ತಿನ ದೇಶಗಳ ಉತ್ಪಾದನೆಗಳಿಗೆ ಜಾಗವೇ ಇಲ್ಲದಂತೆ ಮಾಡುತ್ತಿವೆ.

ಜಾಗತಿಕ ಅನುಭವ ಏನೆಂದರೆ, ಯಾವುದೇ ಉತ್ಪಾದನೆಯಲ್ಲಿ ಬಹುಪಾಲು ಲಾಭವನ್ನು ಚಿಲ್ಲರೆ ಮಾರಾಟ ಕಂಪನಿಗಳು ಪಡೆದುಕೊಳ್ಳುತ್ತವೆ. ಉದಾಹರಣೆಗೆ ಒಂದು ಜತೆ ಜೀನ್ಸ್ ಬಟ್ಟೆ ತಯಾರಿಸಿದರೆ ಅದರ ಬೆಲೆ 100 ರೂ. ಎಂದಾದರೆ ಕಾರ್ಮಿಕರಿಗೆ ಸಿಗುವುದು ಕೇವಲ 12 ರೂ. ಆದರೆ ಚಿಲ್ಲರೆ ಮಾರಾಟ ಕಂಪನಿಗೆ ರೂ. 54 ಸಿಗುತ್ತದೆ. ಅದೇರೀತಿ ಕೋಕೋದಿಂದ ತಯಾರಿಸಲಾದ ಚಾಕೋಲೇಟ್‌ನಲ್ಲಿ ರೈತನಿಗೆ ಸಿಗುವುದು ಕೇವಲ ಶೇ 3.9 ರಷ್ಟು. ಆದರೆ ಚಿಲ್ಲರೆ ಮಾರಾಟಗಾರನಿಗೆ ಶೇ 34.1 ಲಾಭ ಸಿಗುತ್ತದೆ.

ಮಿಗಿಲಾಗಿ, ಕಂಪನಿಗಳು ಮಾರಾಟ ಮಾಡುವುದು ಬ್ರಾಂಡ್ ಕಂಪನಿಗಳ ವಸ್ತುಗಳನ್ನು ಮಾತ್ರ. ಇದರಿಂದ ಸಣ್ಣ ಕೈಗಾರಿಕೆಗಳು ಉತ್ಪಾದಿಸುವ ವಸ್ತುಗಳಿಗೆ ಹೊಡೆತ ಬೀಳುತ್ತದೆ. ತಮ್ಮಲ್ಲಿರುವ ಅಗಾಧವಾದ ಬಂಡವಾಳದಿಂದಾಗಿ, ಜಾಹಿರಾತುಗಳ ಮೂಲಕ ಗ್ರಾಹಕರ ಮೇಲೆ ವಿಶೇಷ ಪರಿಣಾಮ ಬೀರುತ್ತವೆ. ಗ್ರಾಹಕರು ತಮ್ಮ ಅನುಭವದ ಆಧಾರದ ಮೇಲೆ ಖರೀದಿಸುವ ನಿರ್ಧಾರವನ್ನು ಕೈಬಿಡುತ್ತಾರೆ. ಜಾಹಿರಾತಿಗೆ ಬಲಿ ಬೀಳುತ್ತಾರೆ.

ಉದಾಹರಣೆಗೆ, ಪೆಪ್ಸಿ ಅಥವಾ ಕೋಕಾ ಕೋಲಾಗಳನ್ನು ಗ್ರಾಹಕ ಆಯ್ಕೆ ಮಾಡಿಕೊಳ್ಳುತ್ತಿರುವುದು ಎರಡು ಪ್ರಮುಖ ಕಾರಣಗಳಿಂದ 1.ಜಾಹಿರಾತಿನ ಪ್ರಭಾವ 2. ಈ ಕಂಪನಿಗಳ ಅಗಾಧವಾದ ಬಂಡವಾಳದಿಂದಾಗಿ ಇತರೆ ಕಂಪನಿಗಳು ಮುಚ್ಚಿರುವುದರಿಂದ.

ವಿಶ್ವ ವ್ಯಾಪಾರ ಸಂಘಟನೆಯ ಶರತ್ತುಗಳ ಪ್ರಕಾರ, ಚಿಲ್ಲರೆ ವ್ಯಾಪಾರವನ್ನು ವಿದೇಶಿಯರಿಗೆ ತೆರೆದಿಡಬೇಕಾದ ಯಾವುದೇ ನಿಬಂಧನೆ ಇಲ್ಲದಿರುವುದರಿಂದ ಉದ್ಯೋಗ ನಾಶ ಮಾಡುವ, ರೈತರ ಉತ್ಪಾದನೆ ಮೇಲೆ ಪರಿಣಾಮ ಬೀರುವ, ಆಹಾರ ಸುಭದ್ರತೆಗೆ ಕುಂದಾಗುವ, ಸಣ್ಣ ಕೈಗಾರಿಕೆಗಳ ಉತ್ಪಾದನೆಗಳ ಮೇಲೆ ಕೊಡಲಿ ಏಟು ನೀಡುವ ವಿದೇಶಿ ಕಂಪನಿಗಳು ಬೇಡವೇ ಬೇಡ. ಇದಕ್ಕಾಗಿ ನಿರಂತರ, ದೃಢ ಹೋರಾಟ ಅಗತ್ಯ.

ಆಧಾರ: ಸರ್ಕಾರಕ್ಕೆ ಎಡಪಕ್ಷಗಳು ನೀಡಿದ ಟಿಪ್ಪಣಿ
ಪಿ.ಡಿ.ಯಲ್ಲಿ ಸ್ವದೇಶರಾಯ್ ಲೇಖನ

ಸಾಲದ ಬಲೆಯಲ್ಲಿ ಅಮೆರಿಕಾ

ಅಂಕಿ ಸಂಖ್ಯೆ

ಅಮೆರಿಕಾ ಸರ್ಕಾರವು 2006 ರ ಮೊದಲ ಅವಧಿಯಲ್ಲಿ 171 ಬಿಲಿಯ ಡಾಲರು ಸಾಲ ಎತ್ತಲು ನಿರ್ಧರಿಸಿದೆ. ಸರ್ಕಾರದ ದಿನನಿತ್ಯದ ಖರ್ಚುಗಳನ್ನು ಸರಿದೂಗಿಸಲು ಈ ಸಾಲವನ್ನು ಎತ್ತಲಾಗುವುದು.

2004 ರಲ್ಲಿ 146 ಬಿಲಿಯ ಡಾಲರು ಸಾಲಎತ್ತಿದ ಅಮೆರಿಕಾ ಸರ್ಕಾರ, 2005 ರಲ್ಲಿ 144 ಬಿಲಿಯ ಡಾಲರು ಸಾಲ ಮಾಡಿದೆ. 2006 ರಲ್ಲಿ 3 ತಿಂಗಳಲ್ಲೇ 171 ಬಿಲಿಯ ಡಾಲರುಗಳ ಸಾಲ ಎತ್ತಲು ನಿರ್ಧರಿಸಿದ್ದು, ಅಲ್ಲಿನ ಹಣಕಾಸು ಪರಿಸ್ಥಿತಿ ಹೇಗಿದೆ ಎಂಬುದನ್ನು ಸೂಚಿಸುತ್ತದೆ.

ಈ ವರೆಗೆ ಅಮೆರಿಕಾ ಸರ್ಕಾರದ ಒಟ್ಟು ಸಾಲ 8.026 ಟ್ರಿಲಿಯನ್ ಆಗಿದ್ದು (ಸಾಧಾರಣ 4,00,00,00*ಕೋಟಿ ರೂ) ಅಲ್ಲಿನ ರಾಷ್ಟ್ರೀಯ ಉತ್ಪನ್ನದ ಶೇ 65 ರಷ್ಟುಆಗಿದೆ:

- ಹಿಂದೂ ಪತ್ರಿಕೆ - 3.11.2005

*1 ಟ್ರಿಲಿಯ - 1000 ಬಿಲಿಯ
1 ಬಿಲಿಯ - 1000 ಮಿಲಿಯ
1 ಟ್ರಿಲಿಯ -10,00,000 ಮಿಲಿಯ ಅಥವಾ 100,000 ಕೋಟಿ
(1 ಡಾಲರ್‌ಗೆ ರೂ. 50 ರಂತೆ.)

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು - 27 ಫೋನ್ ನಂ. 22236462,
ಮುದ್ರಣ: ಹನು ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor : S.Y.GURUSHANTH